
ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೭--೭--೪೯

★

ಬೆಲೆ ಎರಡಾಣೆ



ಪೂರ್ವ ಪಂಜಾಬಿನ ಮುಖ್ಯ ಮಂತ್ರಿ ಲಾಲಾ ಭೀಮಸೇನ ಸಾಚಾರರು

ಸಂಪುಟ ೨೧ ಸಂಚಿಕೆ ೮

ಕರ್ಮವೀರ

ಸೋಮವಾರ ಜೇಷ್ಠ ಶು. ೬

ತಾರೀಕು ೬—೬—೧೯೪೮

ಮುಖಪತ್ರದಲ್ಲಿ

ಲಾಲಾ ಭೀಮಸೇನ ಸಾಚಾರರು ವಿಮಾ ಕಂಪನಿಯಲ್ಲಿ ಮೊದಲು ಕೆಲಸಮಾಡುತ್ತಿದ್ದರು. ಪಶ್ಚಿಮ ಪಂಜಾಬಿನಿಂದ ಅವರು ಅವಿಭಕ್ತ ಪಂಜಾಬ ಶಾಸನ ಸಭೆಗೆ ಆರಿಸಿಬಂದರು. ಖಿಜರ್ ಹಯಾತ್‌ಖಾನ್ ತಿವಾನರ ಸಂಯುಕ್ತ ಮಂತ್ರಿಮಂಡಲದಲ್ಲಿ ಅವರು ಅರ್ಥಮಂತ್ರಿಗಳಾಗಿಯೂ ಕಾಂಗ್ರೆಸ ಶಾಸನಾ ಸಭಾಪಕ್ಷದ ಧುರೀಣರಾಗಿಯೂ ಇದ್ದರು. ಪಂಜಾಬು ವಿಭಜನೆಯಾದ ಕೂಡಲೆ ಅವರು (ಪಶ್ಚಿಮ) ಪಂಜಾಬು ಶಾಸನಸಭೆಗೆ ಹೋದರು. ಅನಂತರ ಹಿಂದುಸ್ತಾನ ವಿಭಜನೆಯಾದೊಡನೆಯೇ ಅವರು ಗುಳೇಕಿತ್ತುಕೊಂಡು ಪೂರ್ವ ಪಂಜಾಬಿಗೆ ಬಂದರು. ಇಷ್ಟರೊಳಗೇ ಪೂರ್ವ ಪಂಜಾಬಿನಲ್ಲಿ ಡಾ. ಗೋಪೀಚಂದ ಭಾರ್ಗವರ ಮಂತ್ರಿಮಂಡಲ ರಚಿತವಾಗಿ ಹೋಗಿತ್ತು. ಮೊನ್ನೆ ಗೋಪೀಚಂದರ ವಿರುದ್ಧವಾಗಿ ಅವಿಶ್ವಾಸದ ಠರಾವು ಪಾಸಾಗಿ ಅವರ ಮಂತ್ರಿಮಂಡಲ ಉರುಳಿದ ನಂತರ ಶ್ರೀ ಸಾಚಾರರು ಹೊಸ ಧುರೀಣರಾಗಿ ಮುಖ್ಯ ಮಂತ್ರಿತ್ವ ವಹಿಸಿ ಈಗ ಅಲ್ಲಿ ಡಾ. ಗೋಪೀಚಂದ ಭಾರ್ಗವರನ್ನೊಳಗೊಂಡ ಸಂಮಿಶ್ರ ಮಂತ್ರಿಮಂಡಳವನ್ನು ಸ್ಥಾಪಿಸಿರುವರು. ಆಡಳಿತೆಯಲ್ಲಿ ಮನೆಮಾಡಿಕೊಂಡಿರುವ ಅನಿಷ್ಟ ಮತ್ತು ಸಮಾಜ ವಿಘಾತಕ ಪದ್ಧತಿಗಳನ್ನು ದೂರಮಾಡಲು ತಮಗೆ ಮೂರು ತಿಂಗಳ ಅವಧಿ ಬೇಕೆಂದೂ ಅಧಿಕಾರಿಗಳಲ್ಲಿಯ ಲಂಚಗುಳಿತನ ಆಲಸ್ಯ ಮೊದಲಾದವುಗಳನ್ನು ದೂರಮಾಡಲು ಸಮಯಬೇಕೆಂದೂ ಮುಖ್ಯ ಮಂತ್ರಿಗಳು ಇತ್ತೀಚೆ ಸಾರಿ ಜನತೆಯ ಸಹಕಾರವನ್ನು ಆ ದೆಸೆಯಲ್ಲಿ ಕೋರಿರುವರು. ಅವರ ಉದ್ದೇಶವು ಫಲಿಸಲಿ.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ
ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಸೂಚನೆ : ಈ ವರೆಗೆ ವರ್ಷಕ್ಕೆ ಳ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಲೇಖಕರು: “ ಕರ್ಮವೀರ ” ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ಣಾಕಾರದ, ಅಂದರೆ “ ಕರ್ಮವೀರ ” ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
“ ಕರ್ಮವೀರ ” ಹುಬ್ಬಳ್ಳಿ.

ಪ್ರಗತಿಪರ ಮೈಸೂರು

ಇಸವಿ ಸನ್ ೧೮೮೧ ರಷ್ಟು ಹಿಂದೆಯೇ ಪ್ರಜಾ ಪ್ರತಿನಿಧಿ ಸಭೆಯನ್ನು ಸ್ಥಾಪಿಸಿಕೊಂಡು ಅದರ ಸಲಹೆ ಸೂಚನೆಗಳನ್ನನುಲಕ್ಷಿಸಿ ಆಡಳಿತೆಯನ್ನು ಸಾಗಿಸುತಿರುವ ಮೈಸೂರು ಇಂದು ಆ ದಿಸೆಯಲ್ಲಿ ಮತ್ತೊಂದು ಹೆಜ್ಜೆಯನ್ನು ಮುಂದಿಟ್ಟಿತು. ಪ್ರಜಾ ಪ್ರತಿನಿಧಿ ಸಭೆ ಸ್ಥಾಪಿತವಾಗಿದ್ದರೂ ಪ್ರಜೆಗಳಿಗೆ ನಿಜವಾದ ಹಕ್ಕುಬಾಧ್ಯತೆಗಳು ಈ ವರೆಗೆ ದೊರೆತಿರಲಿಲ್ಲ; ಈಗಲೂ ಪೂರ್ಣ ಪ್ರಮಾಣದಲ್ಲಿ ದೊರೆತಿಲ್ಲ ಎಂದು ಹೇಳಬಹುದು. ಆದರೂ ೧೯೪೭ ಅಗಸ್ಟದಲ್ಲಿ ಮೈಸೂರು ಮಹಾರಾಜರು ಹೊಣೆಗಾರ ಸರಕಾರದ ಘೋಷಣೆ ಮಾಡಿ ಪ್ರಜೆಗಳಿಗೆ ಹೆಚ್ಚು ಹಕ್ಕುಬಾಧ್ಯತೆಗಳನ್ನು ದಯಪಾಲಿಸಿದರು. ಇದಕ್ಕಾಗಿ ಮೈಸೂರು ಪ್ರಜೆಗಳು ಕಾಂಗ್ರೆಸ್ಸಿನ ಮುಖಾಂತರ ಮತ್ತು ಮೈಸೂರೇತರ ಕನ್ನಡಿಗರ ಸಹಾಯದಿಂದ ಬಹಳ ಹೋರಾಡಬೇಕಾಯಿತು. ಇಂತು ಹೊಣೆಗಾರ ಸರಕಾರ ಸ್ಥಾಪನೆಯಾಗಿ ಪ್ರಜಾಪ್ರಾತಿನಿಧಿಕ ಮಂತ್ರಿಮಂಡಲವು ಅಸ್ತಿತ್ವದಲ್ಲಿ ಬಂದಿದ್ದರೂ ಹಳೆಯ ನಿರಂಕುಶಾಧಿಕಾರಿತ್ವದ ದ್ಯೋತಕವಾದ ದಿವಾಣಸ್ಥಾನವು ಹಾಗೆಯೆ ಉಳಿದಿದ್ದಿತು. ಆದರೆ ಈಗ ದಿವಾಣಸ್ಥಾನವು ರದ್ದಾಯಿತೆಂದು ಅಧಿಕೃತವಾಗಿ ಸಾರಲಾಗಿದೆ. ಸದ್ಯದ ದಿವಾಣರಾದ ಆರ್ಕಾಟ ರಾಮಸ್ವಾಮಿ ಮುದ್ಲಿಯಾರರು ಬರುವ ಅಗಸ್ಟ ತಿಂಗಳಲ್ಲಿ ನಿವೃತ್ತರಾಗುವರೆಂದು ಘೋಷಿಸಲಾಗಿದೆ.

ಹೊಣೆಗಾರ ಸರಕಾರ ಸ್ಥಾಪಿತವಾಗಿದ್ದರೂ ಪ್ರಜೆಗಳಿಗೆ ಯಾವ ಬಗೆಯಿಂದಲೂ ಹೊಣೆಗಾರರಾಗಿರದಿದ್ದ ದಿವಾಣರಿರುವದೆಂದರೆ ವಿಚಿತ್ರವೇ ಆಗಿದ್ದಿತು. ಮಂತ್ರಿಗಳು ಮತ್ತು ಮಹಾರಾಜರ ನಡುವೆ ದಿವಾಣರು ಒಂದು ಬಗೆಯಿಂದ ಮಧ್ಯಸ್ತರಂತಿದ್ದರು. ಅನೇಕ ಸಂದರ್ಭಗಳಲ್ಲಿ ಮಹಾರಾಜರನ್ನು ನೇರವಾಗಿ ಕಾಣುವ ಅಧಿಕಾರವೂ ಮಂತ್ರಿಗಳಿಗಿರಲಿಲ್ಲ. ಈ ದಿವಾಣ ಪದವಿಯನ್ನು ಕಿತ್ತಿ ಹಾಕುವ ಬಗ್ಗೆ ಕಾಂಗ್ರೆಸ್ಸಿಗರಲ್ಲಿ ಅಷ್ಟೆ ಅಲ್ಲ; ಕಾಂಗ್ರೆಸ್ಸೇತರರಲ್ಲಿಯೂ ಚರ್ಚೆ ನಡೆದಿದ್ದಿತು. ಆದರೆ ಹೊಸ ಘಟನೆ ಜಾರಿಯಲ್ಲಿ ಬರುವವರೆಗೆ ಸದ್ಯದ ದಿವಾಣರು ಇರಲಿ ಎಂದು ಅಧಿಕಾರಸ್ಥಾನದಲ್ಲಿ ಇದ್ದ ಕಾಂಗ್ರೆಸ ಪಕ್ಷವು ನಿರ್ಧರಿಸಿತ್ತು. ಆದರೆ ಮೈಸೂರಿನಲ್ಲಿ ಹೊಸರಾಜ್ಯ ಘಟನೆ ಅಸ್ತಿತ್ವದಲ್ಲಿ ಬರಲಿಕ್ಕೆ ಇನ್ನೂ ಎರಡು ವರ್ಷಗಳಾದರೂ ಹಿಡಿಯಬಹುದೆಂದೆನಿಸಿದ್ದರಿಂದ ಕಾಂಗ್ರೆಸ ಪಕ್ಷದವರು ತಮ್ಮ ಧೋರಣದ ಪುನರ್ವಿಮರ್ಶೆಮಾಡಿಬರುವ ಅಗಸ್ಟಿನಲ್ಲಿಯೆ ದಿವಾಣ ಪದಕ್ಕೆ ಅರ್ಧಚಂದ್ರ ಕೊಡಬೇಕೆಂದು ನಿರ್ಧರಿಸಿದರು. ತತ್ಪರಿಣಾಮವಾಗಿಯೆ ಸರಕಾರದವರು ಅಧಿಕೃತವಾಗಿ ಆ ಬಗ್ಗೆ ಘೋಷಣೆಯನ್ನು ಮಾಡಿದರು. ದಿವಾಣಪದವಿ ರದ್ದಾದ್ದರಿಂದ ಆಡಳಿತೆಯ ಸಂಪೂರ್ಣ ಹೊಣೆಯು ಇನ್ನುಮುಂದೆ ಮಂತ್ರಿಮಂಡಲದ ಮೇಲೆಯೇ ಬೀಳುವದೆಂಬಲ್ಲಿ ಸಂದೇಹವಿಲ್ಲ. ಅಧಿಕಾರಾರೂಢವಾದ ಕಾಂಗ್ರೆಸ ಪಕ್ಷವಾದರೂ ಹೊಸ ಪರಿಸ್ಥಿತಿಗನುಸಾರವಾಗಿ ಮಂತ್ರಿಮಂಡಲದಲ್ಲಿಯೂ ಬದಲಾವಣೆಯನ್ನು ಮಾಡಿಕೊಳ್ಳಬೇಕಾಗಿದೆ. ಕಾಂಗ್ರೆಸ ಪಕ್ಷದ ಇತ್ತೀಚಿನ ಸಭೆಯಲ್ಲಿ, ಈಗ ಮುಖ್ಯಮಂತ್ರಿಗಳಾಗಿರುವ ಶ್ರೀ ಚಂಗಲರಾಯ ರೆಡ್ಡಿಯವರೆ ಮತ್ತೆ ಧುರೀಣರಾಗಿ ಆರಿಸಲ್ಪಟ್ಟಿದ್ದರೂ ಕೆ. ಹನುಮಂತಯ್ಯನವರು ಉಪಧುರೀಣರಾಗಿ ಆರಿಸಲ್ಪಟ್ಟಿದ್ದರಿಂದ ಸದ್ಯದ ಮಂತ್ರಿಮಂಡಲದಲ್ಲಿ ಬದಲಾವಣೆಯನ್ನು ನಿರೀಕ್ಷಿಸಬಹುದಾಗಿದೆ. ಮಂತ್ರಿಮಂಡಲದಲ್ಲಿ ಯಾರೇ ಬರಲಿ ಅವರು ಹೊಸ ಪರಿಸ್ಥಿತಿಯಲ್ಲಿ ತಮ್ಮ ಹೊಣೆಗಾರಿಕೆಯನ್ನು ಪೂರ್ಣವಾಗಿ ತಿಳಿದುಕೊಂಡು ವರ್ತಿಸುವರೆಂದು ಆಶಿಸುತ್ತೇವೆ.

ದಿವಾಣ ಪದವನ್ನು ರದ್ದುಗೊಳಿಸಿ ಮೈಸೂರು ಒಂದು ಹೆಜ್ಜೆ ಮುಂದೆ ಇಟ್ಟಿರುವದು. ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷರನ್ನು ಶಾಸನಸಭೆಯ ಸದಸ್ಯರೇ ಆರಿಸಬೇಕೆಂದು ನಿರ್ಧರಿಸಿ, ಅದರಂತೆ ಹೊಸಅಧ್ಯಕ್ಷರನ್ನಾರಿಸಿಕೊಂಡು ಮತ್ತೊಂದು ಪ್ರಗತಿಪರವಾದ ಹೆಜ್ಜೆಯನ್ನಿಟ್ಟಿದೆ. ಈ ವರೆಗೆ ದಿವಾಣರೆ ಶಾಸನಸಭೆಗಳ ಅಧ್ಯಕ್ಷರಾಗಿ ಇರುತಿದ್ದುದರಿಂದ ತಮಗೆ ಅನುಕೂಲವಾದ ರೀತಿಯಲ್ಲಿ ಶಾಸನಸಭೆಯ ಕಾರ್ಯಕಲಾಪಗಳಲ್ಲಿ ಹಸ್ತಕ್ಷೇಪ ಮಾಡಲು ಅವರಿಗೆ ಅವಕಾಶ ದೊರೆಯುತಿತ್ತು. ಆದರೀಗ ಆ ಬಗೆಯ ಅವಕಾಶಕ್ಕೂ ಎಡೆಗೊಡಲೊಪ್ಪದೆ ಮೈಸೂರು ಶಾಸನಸಭೆಯವರು ತಮಗೆ ಹೊಣೆಗಾರರಾದ ಅಧ್ಯಕ್ಷರನ್ನಾರಿಸಿಕೊಂಡರು. ಈ ಬಗೆಯ ಎರಡು ಮಹತ್ವದ ಬದಲಾವಣೆಗಳನ್ನು ಮಾಡಿಕೊಂಡದ್ದಕ್ಕಾಗಿ ಮೈಸೂರು ಪ್ರಜೆಗಳು ಮತ್ತು ಅವರಿಗೆ ಹೊಣೆಗಾರರಾಗಿರುವ ಶಾಸನಸಭಾ ಸದಸ್ಯರು ಅಭಿನಂದನಾರ್ಹರಾಗಿರುವರು.

ಮೈಸೂರು ಪ್ರಜೆಗಳಿಂತು ತಮ್ಮ ಆಡಳಿತೆಯಲ್ಲಿ ಪ್ರಗತಿಪರ ಹೆಜ್ಜೆ ಇಡಹತ್ತಿದ್ದರೂ ಭಾರತದಲ್ಲಿಯ ಪ್ರಾಂತಗಳ ಮಟ್ಟಕ್ಕಿಳಿಯುವ ವರೆಗೆ ಅಲ್ಲಿನಪ್ರಜೆಗಳಿಗೆ ಸಂಪೂರ್ಣ ಸ್ವಾತಂತ್ರ್ಯ ದೊರೆತಂತಾಗಲಾರದು. ಅರಸರನ್ನಿಟ್ಟುಕೊಳ್ಳುವದು ಒಂದು ಬಗೆಯಿಂದ ಎಷ್ಟೇ ಅವಶ್ಯವೆನಿಸಿದರೂ ಸದ್ಯದ ಬದಲಾದ ಪರಿಸ್ಥಿತಿಯಲ್ಲಿ ಅದು ಪ್ರಗತಿಪರವೆನಿಸದು. ಹಳೆಯ ಕಾಲದ ಪ್ರತೀಕವದೆಂದು ಆಧುನಿಕರು ಅದನ್ನು ತೆಗಳುವರು. ಅಲ್ಲದೆ ಕನ್ನಡ ಜನತೆಯನ್ನು ಸಂಸ್ಥಾನ ಮತ್ತು ಒಕ್ಕೂಟದ ಪ್ರಜೆಗಳೆಂದು ವಿಭಜಿಸುವ ಸದ್ಯದ ಘಟನೆಯೂ ಅನಿಷ್ಟವಾಗಿದೆಯೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅಂತೆಯೆ ಇಡೀ ಕನ್ನಡ ಜನಾಂಗವನ್ನು ಒಂದೇ ಆಡಳಿತೆಯಲ್ಲಿ ತರುವ ಪ್ರಯತ್ನಗಳು ಭರದಿಂದ ಸಾಗಿವೆ. ಮೈಸೂರು ಕರ್ನಾಟಕ ಪ್ರಾಂತದಲ್ಲಿ ವಿಲೀನವಾಗಿ ಬಿಟ್ಟರೆ ಕನ್ನಡ ಪ್ರಜೆಗಳೆಲ್ಲ ಒಂದೇ ಆಡಳಿತೆಯಲ್ಲಿ ಬಂದು ಸ್ವತಂತ್ರ, ಸ್ವಾಯತ್ತ ಕರ್ನಾಟಕ ಪ್ರಾಂತ, ಮಹಾಕರ್ನಾಟಕ ಪ್ರಾಂತವಾಗಿ ಮಾರ್ಪಟ್ಟು ಪ್ರಜೆಗಳಿಗೆ ಈಗಿನಕಿಂತ ಹೆಚ್ಚು ಹಕ್ಕುಬಾಧ್ಯತೆಗಳು ದೊರೆವುವು. ಕರ್ನಾಟಕದ ಪ್ರಜೆಗಳಾದರೊ ಇದಕ್ಕೆ ಒಪ್ಪುತಿದ್ದರೂ ಮೈಸೂರಿಗರು ಮಾತ್ರ ಇದಕ್ಕಿನ್ನೂ ಪೂರ್ಣವಾಗಿ ಸಿದ್ಧರಾಗಲೊಲ್ಲರು. ಮೇಲೆ ಉಲ್ಲೇಖಿಸಿದಂತೆ ೧೮೮೧ ಇಸ್ವಿಯಷ್ಟು ಹಿಂದಿನಿಂದ ಸ್ವರಾಜ್ಯದ ಛಾಯೆಯಲ್ಲಿ ಬೆಳೆದು ಬಂದಿರುವ ಮೈಸೂರಿಗರು ಅರಸರನ್ನು ಬಿಟ್ಟುಗೊಡುವ ಈ ಮಹತ್ವದ ಬದಲಾವಣೆಗೆ ಸಿದ್ಧರಾಗಲೊಲ್ಲರು. ಆದರೆ ಮಹಾಕರ್ನಾಟಕಪ್ರಾಂತರಚನೆಯಾಗುವದರಿಂದ ಮೈಸೂರಿನ ಜನತೆಗೆ ಯಾವ ಬಗೆಯಿಂದಲೂ ಹಾನಿಯಿಲ್ಲ, ಇಷ್ಟೇ ಅಲ್ಲ; ಹೆಚ್ಚು ಲಾಭವೇ ಆಗುವದೆಂಬಲ್ಲಿ ಸಂದೇಹವಿಲ್ಲ. ಮೈಸೂರಿನ ಜನರಿಗೆ ಇದು ಮುಂದಟ್ಟಾದರೆ ಅವರ ವಿರೋಧವು ನಿಲ್ಲದಿರಲಾರದು.

ನಿರರ್ಥಕ ಅಪಪ್ರಚಾರ

ವಾಯುವ್ಯಸೀಮಾಪ್ರಾಂತದವರಿಗೆ, ಭಾರತ ಮತ್ತು ಅಫಗಾನ ಸರಹದ್ದಿಗಳಲ್ಲಿ ಒಳಸಂಚು ನಡೆದಿದೆಯೆಂದು ಇತ್ತೀಚೆ ಆರೋಪಿಸಲಾಗುತಿದೆ. ಪಠಾಣರಿಗೆ ಅವರ ಹಕ್ಕುಬಾಧ್ಯತೆಗಳು ಅಬಾಧಿತವಾಗಿ ಉಳಿಯತಕ್ಕದ್ದು, ಅವುಗಳಿಗೆ ವ್ಯತ್ಯಾಸ ಬರಬಾರದೆಂದು ಹಿಂದುಸ್ತಾನವು ಎಂದಿನಿಂದಲೂ ಸಾರುತ್ತ ಬಂದಿದೆ, ಈಗಲೂ ಸಾರುತಿದೆ. ಸ್ವಾತಂತ್ರ್ಯ ಸಮರದಲ್ಲಿ ಭಾರತೀಯರ ಹೆಗಲಿಗೆ ಹೆಗಲು ಹಚ್ಚಿ ಹೋರಾಡಿದ ವೀರ ಪಠಾಣರ ಸ್ವಾತಂತ್ರ್ಯಹರಣವನ್ನು ಭಾರತೀಯರೆಂತು ಸಹಿಸಬೇಕು? ಇಷ್ಟು ಮಾತ್ರಕ್ಕೆ ಭಾರತವು ಅಫಗಾನಿಸ್ತಾನವ ಗೂಡ ಈ ಸಂಬಂಧದಲ್ಲಿ ಒಳಸಂಚು ನಡೆಸಿದೆ ಎಂಬ ಅಪಪ್ರಚಾರವನ್ನು ಪಾಕಿಸ್ತಾನವು ಸಾಗಿಸಿದೆ. ಹಿಂದುಸ್ತಾನದಲ್ಲಿ ಪಾಕಿಸ್ತಾನದ ರಾಯಭಾರಿಗಳಾಗಿರುವ ಸರದಾರ ನಜೀಬಉಲ್ಲಾರು ಈ ಸಂಬಂಧದಲ್ಲಿ ಪತ್ರಿಕಾ ಕರ್ತರ ಸಭೆಯಲ್ಲಿ ಸ್ಪಷ್ಟೀಕರಿಸುತ್ತ ಪಾಕಿಸ್ತಾನದ ವಿರುದ್ಧ ಯಾವದೇ ಬಗೆಯ ಒಳಸಂಚು ನಡೆದಿಲ್ಲ ಎಂದು ಹೇಳಿದ್ದುಂಟು. ಪಠಾಣರು ವಾಸಿಸುತಿರುವ ಗುಡ್ಡಗಾಡು ಪ್ರದೇಶವನ್ನು ಅಫಗಾಣಿಸ್ತಾನದಲ್ಲಿ ಸಮಾವೇಶ ಮಾಡಿಕೊಳ್ಳಲು ಪ್ರಯತ್ನಿಸಲಾಗುತಿದೆ ಎಂಬ ಆರೋಪವು ಸುಳ್ಳಿನ ಕಂತೆಯೆಂದು ಅವರು ಸಾರಿರುವದು. ಈ ಬಗೆಯ ಅಪಪ್ರಚಾರದಿಂದ ಪಾಕಿಸ್ತಾನದ ಸಮಸ್ಯೆ ಹೆಚ್ಚು ಜಟಿಲವಾಗುತ್ತ ನಡೆಯುವದಲ್ಲದೆ ಪಾಕಿಸ್ತಾನದ ಜನರಲ್ಲಿ ತಪ್ಪು ತಿಳುವಳಿಕೆಯುಂಟಾಗಿ ಈ ಭಾಗದಲ್ಲಿ ಶಾಂತಿ ಸೌಹಾರ್ದ ಭಾವನೆ ಬೆಳೆಯುವುದಕ್ಕೆ ಅಷ್ಟೇ ಏಕೆ ಉಳಿಯುವದಕ್ಕೆ ಕೂಡ ತಡೆಯುಂಟಾಗುವದೆಂದು ಅವರು ಅಭಿಪ್ರಾಯಪಟ್ಟರು. ಕಾಯದೆ ಆಜಂ ಜಿನ್ನಾರು ಪಠಾಣರ ಹಕ್ಕುಬಾಧ್ಯತೆಗಳ ಬಗ್ಗೆ ಕೊಟ್ಟ ಆಶ್ವಾಸನ, ಅನಂತರ ಗವರ್ನರ ಜನರಲ್‌ರು ಬರೆದು ಕಳಿಸಿದ ಆಶ್ವಾಸನಗಳಲ್ಲಿ ಮಹದಂತರವಿದೆ. ಇತ್ತಿತ್ತಲೆ ನಡೆದ ಬಾಂಬ ದಾಳಿಯಿಂದ ಇಲ್ಲಿನ ಜನರಲ್ಲಿ ಮತ್ತಷ್ಟು ದ್ವೇಷಭಾವನೆ ಹೆಚ್ಚುತಿದೆಯೆಂದೂ ಅವರು ಅಭಿಪ್ರಾಯಪಟ್ಟರು. ತಮ್ಮ ಸ್ವಾತಂತ್ರ್ಯ ಮತ್ತು ಹಕ್ಕುಬಾಧ್ಯತೆಗಳ ಪ್ರಶ್ನೆಯನ್ನು ಸಮಾಧಾನಕರವಾಗಿ ಬಗೆಹರಿಸಿಕೊಳ್ಳಬೇಕೆಂದು ಪಠಾಣರು ಬಯಸುತಿದ್ದು ಅಫಗಾನಿಸ್ತಾನ ಸರಕಾರವೂ ಅದಕ್ಕೆ ಪೋಷಕವಾದ ರೀತಿಯಲ್ಲಿ ವರ್ತಿಸುತಿದೆಯಷ್ಟೇ ಅಲ್ಲ ಪಠಾಣರು ಯಾವದೇ ಬಗೆಯ ಸಶಸ್ತ್ರ ಕ್ರಮಗಳನ್ನು ಕೈಕೊಳ್ಳುವದನ್ನು ತಡೆಹಿಡಿದಿದೆ. ಹೀಗಿದ್ದರೂ ಪಾಕಿಸ್ತಾನ ಸರಕಾರದವರು ಅಫಗಾಣಿಸ್ತಾನ ಸರಕಾರದ ಮೇಲೆ ಅಕ್ರಮಕ ಧೋರಣದ ಆರೋಪ ಮಾಡುತಿರುವದು ಸಖೇದಾಶ್ಚರ್ಯಕರವಾಗಿದೆ. ಈ ಬಗೆಯ ಅಪಪ್ರಚಾರದಿಂದ ಪಾಕಿಸ್ತಾನಿಗಳಿಗೆ ಯಾವ ಬಗೆಯ ಪುರುಷಾರ್ಥವೂ ಸಾಧಿಸದು. ಅವರು ಇದನ್ನು ಬೇಗ ತಿಳಿದುಕೊಂಡಷ್ಟು ಅವರಿಗೂ ಹಿತಕರ ಉಳಿದ ರಾಷ್ಟ್ರಗಳಿಗೂ ಕ್ಷೇಮಕರ.

ಕಾಶ್ಮೀರಸಮಸ್ಯೆ

ಕಾಶ್ಮೀರ ಸಮಸ್ಯೆಯ ಸಂಬಂಧದಲ್ಲಿ ಹಿಂದುಸ್ತಾನ ಮತ್ತು ಪಾಕಿಸ್ತಾನ ಸರಕಾರಗಳು ತಮ್ಮ ಸೂಚನೆಗಳನ್ನು ಯು. ರಾ. ಸಂಘದ ಕಾಶ್ಮೀರ ಸಮಿತಿಗೆ ಕಳಿಸಿದ್ದು ಸಮಿತಿಯವರು ಅವನ್ನು ಸೂಕ್ಷ್ಮರೀತಿಯಿಂದ ಪರಿಶೀಲಿಸುತಿರುವರು. ಈ ಸಂಬಂಧದಲ್ಲಿಯೂ ಪಾಕಿಸ್ತಾನ ಸರಕಾರದವರು ವಿಸಂಗತ ಧೋರಣವನ್ನು ತಾಳಿರುವರು. ಆಜಾದ ಸೈನಿಕರನ್ನು ವಿಸರ್ಜನಮಾಡಲು ಅವರು ಒಪ್ಪದ್ದರಿಂದ ಶಾಂತ ಸೌಹಾರ್ದ ಪರಿಸ್ಥಿತಿಯುಂಟಾಗದು ಇದಲ್ಲದೆ ಜನಮತಗಣನೆ ನಡೆಯಬೇಕಾದರೆ ಈ ಬಗೆಯ ಪರಿಸ್ಥಿತಿ ಅವಶ್ಯವಾಗಿದೆ. ಕಾಶ್ಮೀರವು ಹಿಂದುಸ್ತಾನದ ಅವಿಭಾಜ್ಯ ಅಂಗವಾಗಿದ್ದು ಜಗತ್ತಿನ ಯಾವ ಶಕ್ತಿಯೂ ಅದನ್ನು ಪ್ರತ್ಯೇಕಿಸಲಾರದೆಂದೂ ಪಾಕಿಸ್ತಾನಿಗಳು ಕಾಶ್ಮೀರ ಜನತೆಯ ಸ್ವಾತಂತ್ರ್ಯದ ಬಗ್ಗೆ ತೋರುತಿರುವ ಆಸ್ಥೆ ಕೇವಲ ನಟನೆಯೆಂದೂ ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಶ್ರೀನಗರದಲ್ಲಿ ಭಾಷಣ ಮಾಡುತ್ತ ಹೇಳಿದರು. ಕಾಶ್ಮೀರ ಸಮಿತಿಯು ಈ ಪ್ರಶ್ನೆಯನ್ನು ನಿಷ್ಪಕ್ಷಪಾತ ರೀತಿಯಿಂದ ವಿಚಾರಿಸಿ ಪರಿಸ್ಥಿತಿಯನ್ನು ಪೂರ್ಣವಾಗಿ ತಿಳಿದುಕೊಂಡು ಯೋಗ್ಯವಾದ ನಿರ್ಣಯ ಕೊಡುವದಲ್ಲದೆ ಅದರಂತೆ ನಡೆಯಲು ಒತ್ತಾಯಪಡಿಸುವದೆಂದು ನಂಬುತ್ತೇವೆ.

ಭಾರತದ ಘಟನೆಯ ಬಗ್ಗೆ ವಿದೇಶೀಯರ ಅಭಿಪ್ರಾಯ

ಶಾಸನಸಭೆಯ ಸ್ವರೂಪ—ಅಧ್ಯಕ್ಷ ಮತ್ತು ಗವರ್ನರರ ಸ್ಥಾನಮಾನಗಳು— ನಾಗರಿಕ ಹಕ್ಕುಗಳು—ನ್ಯಾಯ ಶಾಖೆಯ ಸ್ವಾತಂತ್ರ್ಯ- ಘಟನೆಯನ್ನು ಬದಲಾಯಿಸುವ ಬಗೆ

೧೯೫೦ ರ ಹೊತ್ತಿಗೆ ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವಾಗಲಿರುವ ಭಾರತದ ಘಟನೆಯ ಪರಿಚಯಾತ್ಮಕ ಅವಲೋಕನವನ್ನು ಅಮೇರಿಕದ ಪ್ರಸಿದ್ಧ ಲೇಖಕರಾದ ಹೋಲ್ಡನ್ ಫ್ಲ್ಯೂಬರ್ಟರು 'ಫಾರ್ ಈಸ್ಟರ್ನ್ ಸರ್ವೆ' ಯಲ್ಲಿ ಮಾಡಿದ್ದರ ಸಾರವನ್ನು ಈ ಕೆಳಗೆ ಕೊಡಲಾಗಿದೆ. ಹಿಂದುಸ್ತಾನದ ಪ್ರಜೆಗಳ ಜೀವನಪದ್ಧತಿಯನ್ನು ರೂಪಿಸುವುದರಲ್ಲಿ ಮೂಲಭೂತವೆನಿಸಿದ ಈ ರಾಜ್ಯಘಟನೆಯ ಸ್ವರೂಪವನ್ನು ಕನ್ನಡಿಗರು ಚೆನ್ನಾಗಿ ತಿಳಿಮುಕೊಂಡು ಸ್ವತಂತ್ರ ಹಿಂದುಸ್ತಾನದಲ್ಲಿ ತಂತಮ್ಮ ಅದೃಷ್ಟವನ್ನು ರೂಪಿಸಿಕೊಳ್ಳುವುದರಲ್ಲಿ ಸಮರ್ಥರಾಗುವುದು ಅವಶ್ಯಕವಲ್ಲವೇ ?

೧೯೪೬ರಲ್ಲಿ ಸ್ಥಾಪಿತವಾದ ಭಾರತೀಯ ಘಟನಾ ಸಮಿತಿ ಘಟನೆಯ ಕರಡನ್ನು ಸಿದ್ಧಪಡಿಸಿ ಕ್ರಮಶಃ ಅದರ ಪರಿಚ್ಛೇದಗಳನ್ನು ಪರಿಶೀಲಿಸಿ ಒಂದಾದ ಮೇಲೊಂದರಂತೆ ಸ್ವೀಕರಿಸತೊಡಗಿದೆ. ೧೯೫೦ರಲ್ಲಿ ಘಟನೆಯನ್ನು ಅಮಲಿನಲ್ಲಿ ತರುವ ಉದ್ದೇಶ ಅದಕ್ಕಿದೆ.

ಘಟನಾಸಮಿತಿಯಲ್ಲೀಗ ಒಟ್ಟು ೩೦೩ ಸದಸ್ಯರಿದ್ದಾರೆ. ಅದರಲ್ಲಿ ೨೩೫ ಜನರು ಹಿಂದಿನ ಬ್ರಿಟಿಶ ಭಾರತದ ಪ್ರಾಂತಗಳ ಪ್ರತಿನಿಧಿಗಳು ಮತ್ತು ಮಿಕ್ಕ ೬೮ ಜನರು ಸಂಸ್ಥಾನಗಳಿಂದ ಕಳಿಸಲ್ಪಟ್ಟವರು. ಈ ಸದಸ್ಯರ ಚುನಾವಣೆ ೧೯೩೫ರ ಭಾರತ ಸರಕಾರದ ಕಾಯದೆಯನ್ವಯವಾಗಿ ಒಟ್ಟು ಜನಸಂಖ್ಯೆಯಲ್ಲಿ ನೂರಕ್ಕೆ ೧೧ ರಷ್ಟು ಜನರಿಗೆ ಮತದಾನಾಧಿಕಾರವಿದ್ದ ಕಾಲದ ನಿಯಮಗಳಂತೆ ನಡೆದದ್ದು. ಸಂಸ್ಥಾನೀ ಪ್ರತಿನಿಧಿಗಳಲ್ಲಿ ಕೆಲವರನ್ನು ಸಂಸ್ಥಾನಗಳ ಶಾಸನ ಸಭೆ, ಮತ್ತೆ ಕೆಲವರನ್ನು ಸಂಸ್ಥಾನ ಸರಕಾರಗಳು ಆರಿಸಿ ಕಳಿಸಿವೆ. ಅನೇಕ ಸಂಸ್ಥಾನಗಳು ಲೀನವಾಗಿರುವದರಿಂದ ಸಂಸ್ಥಾನೀ ಪ್ರತಿನಿಧಿಗಳ ಪರಮಾವಧಿ ಪ್ರಾತಿನಿಧ್ಯದ ೯೦ ಸ್ಥಳಗಳನ್ನು ಅವರು ಆಕ್ರಮಿಸ-ವುದು ಅಸಾಧ್ಯವಾಗಿದೆ.

೧೯೪೮ ರ ನವೆಂಬರ ಒಂದರಲ್ಲಿ ಘಟನೆಯ ಕರಡು ಸಿದ್ಧವಾಯಿತು- ಅದರಲ್ಲಿ ೩೧೫ ವಿಷಯುಗಳು ಅಡಕವಾಗಿವೆ. ೧೯೪೯ ರ ಜನವರಿ ೮ ರೊಳಗೆ ೬೮ ವಿಷಯುಗಳ ವಿಮರ್ಶನವಾಗಿ ಸ್ವೀಕಾರವಾಗಿತ್ತು. ಈಗ ೧೯೪ ನೆಯ ವಿಷಯುವನ್ನು ಎತ್ತಿಕೊಳ್ಳಲಾಗಿದೆ.

ಆಂಗ್ಲೋ—ಅಮೇರಿಕನ್ ಮಾದರಿ

ಈ ಕರಡು ಘಟನೆ ಆಂಗ್ಲೋ-ಅಮೇರಿಕನ್ ಭೂತಘಟನೆಗಳಿಗೆ ಮತ್ತು ಹಿಂದಿನ ಸಾಮ್ರಾಜ್ಯಶಾಹಿಗೆ ಹೆಚ್ಚಾಗಿ ಋಣಿಯಾಗಿದೆ. ಘಟನಾರಚಕರ ಬಗೆ—ಎಲ್ಲ ಪ್ರಭುಶಕ್ತಿಯೂ ಕೆಲ ಅನ್ಯವಚ್ಛೇದ್ಯ ಹಕ್ಕುಗಳುಳ್ಳ ನಾಗರಿಕರಿಂದಲೇ ಹುಟ್ಟಿಬರಬೇಕು ಎಂಬ ಅಪೇಕ್ಷೆ ಮತ್ತು ಹಿಂದಿನ ಸರಕಾರದಂತೆ ಕೇಂದ್ರ ಸರಕಾರವು ಬಲಿಷ್ಠವೂ ಸಮರ್ಥವೂ ಆಗಿರಬೇಕು ಎಂಬಬಯಕೆ—, ಈ ಯೆರಡರ ನಡುವೆ ಜೊಯ್ಯಾಡುತ್ತಿರುವಂತೆ ತೋರುತ್ತದೆ. ಸಂಕ್ಷೇಪವಾಗಿ ಹೇಳುವುದಾದರೆ ಘಟನೆಯ ಅಂಗರಚನೆ ಮಹಾಮಂಡಲದ್ದು (Federal) ಎನ್ನುವುದಕ್ಕಿಂತ ಹೆಚ್ಚಾಗಿ ಒಕ್ಕೂಟದ್ದು (Unitary) ಎನ್ನಬೇಕಾಗುತ್ತದೆ. ಅಲ್ಲದೆ, ಕಾರ್ಯವಾಹಕ ವಿಭಾಗದ ಆಪತ್ಕಾಲಿಕ ಅಧಿಕಾರಗಳು ಬಹಳ ದೊಡ್ಡವೆ; ಆದರೆ ಘಟನೆಯ ತಿದ್ದುಪಡಿಯನ್ನು ಮಾತ್ರ ಬಹಳ ಸುಲಭವನ್ನಾಗಿ ಮಾಡಲು ಅನುಕೂಲ ಮಾಡಿಕೊಡಲಾಗಿದೆ.

ಘಟನೆಯ ಪೀಠಿಕೆಯಲ್ಲಿ ಆಡಳಿತೆಯ ಸಾಮಾನ್ಯ ಸೂತ್ರಗಳನ್ನು ಕೊಡಲಾಗಿದೆ. ಅದು ಕಾಂಗ್ರೆಸ್ಸಿನ ಸಾಮಾಜಿಕ ತತ್ವಜ್ಞಾನದಂತೆ ರೂಪಿಸಲ್ಪಟ್ಟಿದೆ. ಅದರಲ್ಲಿ ಐಶ್ವರ್ಯ ಮತ್ತು ಉತ್ಪಾದನಸಾಧನಗಳು ಕೇಂದ್ರೀಕೃತವಾಗದಂತೆ ನೋಡಿಕೊಳ್ಳಬೇಕೆಂಬುದು ಮುಖ್ಯವಾದುದು. ಸ್ತ್ರೀಪುರುಷರಲ್ಲಿ ಭೇದವಿಲ್ಲದೆ 'ಇಂತಿಷ್ಟು ಕೆಲಸಕ್ಕೆ ಇಂತಿಷ್ಟು ಸಂಬಳ' ಎಂಬ ಸಮದರ್ಶಿತ್ವದ ತತ್ವವನ್ನು ಸ್ವೀಕರಿಸಲಾಗಿದೆ. ವೃದ್ಧಾಪ್ಯ, ನಿರುದ್ಯೋಗ ಮತ್ತು ಅಸ್ವಾಸ್ಥ್ಯಗಳ ಕಾಲದಲ್ಲಿ ಪ್ರಜೆಗಳಿಗೆ ನೆರವೀಯುವುದನ್ನು ಮಾನ್ಯಮಾಡಲಾಗಿದೆ. ೧೪ ವರ್ಷಗಳೊಳಗಿನ ಎಲ್ಲ ಮಕ್ಕಳಿಗೂ ಉಚಿತವಾಗಿ [ಬಲಾತ್ಕಾರಶಿಕ್ಷಣ ಕೊಡುವುದನ್ನು ೧೦ ವರ್ಷಗಳೊಳಗೆ ಸಾಧಿಸಬೇಕೆಂದು ಉಕ್ತವಾಗಿದೆ.

ನಾಗರಿಕ ಹಕ್ಕುಗಳು

ನಾಗರಿಕ ಹಕ್ಕುಗಳ ಪಟ್ಟಿಯನ್ನು ಸಮಗ್ರವಾಗಿ ನೋಡಿದರೆ ಅದು ಬ್ರಿಟನ್ನಿನ ಮಾದರಿಗಿಂತ ಹೆಚ್ಚಾಗಿ ಅಮೇರಿಕನ್ ಮಾದರಿಯನ್ನೇ ಅನುಸರಿಸಿದೆ ಎಂದು ತೋರುತ್ತದೆ. ಅಸ್ಪೃಶ್ಯತಾನಿವಾರಣೆ ಮತ್ತು ಧರ್ಮ ಸ್ವಾತಂತ್ರ್ಯಗಳು ಅದರಲ್ಲಿ ಉಲಿಖಿತವಾಗಿವೆ. ಪೂರ್ಣವಾಗಿ ಇಲ್ಲವೆ ಪಾಕ್ಷಿಕವಾಗಿ ಸಾರ್ವಜನಿಕ ಹಣದಿಂದ ನಡೆಯುವ ಸಂಸ್ಥೆಗಳಿಗೆ, ರಸ್ತೆ, ಕೆರೆ, ಬಾವಿ ಇಲ್ಲವೆ ಇತರ ಸಾರ್ವಜನಿಕ ವಿಹಾರಗಳಿಗೆ, ಅಂಗಡಿ ಉಪಾಹಾರ ಗೃಹ ಮುಂತಾದವುಗಳಿಗೆ ಹೋಗಲು ಧರ್ಮ, ಕುಲ, ಜಾತಿ ಮತ್ತು ಲಿಂಗಭೇದವನ್ನು ಮುಂದೆಮಾಡಿ ಯಾರನ್ನೂ ತಡೆಯಲು ಯಾರಿಗೂ ಅಧಿಕಾರವಿಲ್ಲವೆಂದು ಹೇಳಲಾಗಿದೆ. ಹಿಂದುಳಿದ ವರ್ಗಗಳಿಗೆ ಕೆಲ ನೌಕರಿಯ ಸ್ಥಳಗಳನ್ನು ಕಾದಿಡುವುದನ್ನು ಬಿಟ್ಟರೆ ಮತ್ತೆಲ್ಲವಿಷಯುಗಳಲ್ಲೂ ಸರಕಾರವು ಎಲ್ಲ ಪ್ರಜೆಗಳನ್ನು ಒಂದೇ ದೃಷ್ಟಿಯಿಂದ ನೋಡುವುದು. ಧರ್ಮಕ್ಕೆ ಸಂಬಂಧಿಸಿದ ಅರ್ಥಶಾಸ್ತ್ರೀಯ, ಹಣಕಾಸಿನ, ರಾಜಕೀಯ ಅಥವಾ ಇತರ ಲೌಕಿಕ ಕಾರ್ಯಗಳಲ್ಲಿ ಸುಧಾರಣೆ ಮಾಡುವ ಹಕ್ಕು ಸರಕಾರಕ್ಕಿದೆ. (ಹೋಲಿಸಿರಿ: 'ವಿವಾಹವೆನ್ನುವುದು ದೈವಿಕವಾದ ಘಟನೆ'—ವೇದ ೧೦-೨೭-೧೧-೧೨)

ಸಾರ್ವಜನಿಕ ಹಿಂದು ಧಾರ್ಮಿಕ ಸಂಸ್ಥೆಗಳನ್ನು ಎಲ್ಲ ಹಿಂದುಗಳಿಗೂ ಮುಕ್ತದ್ವಾರ ಮಾಡಿರುವುದು ಅಂಥ ಒಂದು ಸುಧಾರಣೆ. ಘಟನೆಯ ಒಂದು ವಿಭಾಗದಲ್ಲಿ ಸಾರ್ವಜನಿಕ ವಿದ್ಯಾಲಯಗಳಲ್ಲಿ ಶಿಕ್ಷಣ ಕಾಲದ ಹೊರಗೆ ಖಾಸಗಿಯಿಂದ ಧಾರ್ಮಿಕ ಶಿಕ್ಷಣಕೊಡುವ ವ್ಯವಸ್ಥೆಗೆ ಅವಕಾಶಕೊಡಲಾಗಿದೆ. ಇದು ಅಮೇರಿಕದ ಸುಪ್ರೀಂ ಕೋರ್ಟಿನ ಇತ್ತೀಚಿನ ನಿರ್ಣಯುಗಳನ್ನು ಹೋಲುತ್ತದೆ.

ಕಡೆಯದಾಗಿ ಕರಡನ್ನು ಶುದ್ಧೀಕರಿಸುವಾಗ ಆಂಗ್ಲೋ-ಅಮೇರಿಕನ್ ಶಾಸನಿಕ ಖಾತ್ರಿಗಳನ್ನು ಸ್ಪಷ್ಟಪಡಿಸಬಹುದೆಂದು ತೋರುತ್ತದೆ: "ಸಭ್ಯತೆಗೆ ಇಲ್ಲವೆ ನೀತಿಮತ್ತೆಗೆ ಭಂಗತರುವ ಅಥವಾ ಸರಕಾರದ ಅಧಿಕಾರ ಇಲ್ಲವೆ ತಳಹದಿಗೆ ಧಕ್ಕೆಯನ್ನುಂಟು ಮಾಡುವ" ವಿಷಯಗಳಬಗ್ಗೆ ಕಾಯದೆ ಮಾಡುವ ಹಕ್ಕನ್ನು ಸರಕಾರ ಇಟ್ಟುಕೊಂಡಿರುವುದು ಪ್ರಜೆಗಳ ವಾಕ್ ಸ್ವಾತಂತ್ರ್ಯದ ಮಿತಿಯನ್ನು ಸೂಚಿಸುತ್ತದೆ. ನಿರಾಯುಧವಾಗಿ ಶಾಂತ-ರೀತಿಯಿಂದ ಸಭೆ ಸೇರುವ ಹಕ್ಕು ಎಲ್ಲ ಪ್ರಜೆಗಳಿಗೂ ಇದೆ.

ಶಾಸನ ಸಭೆ ಮತ್ತು ಚುನಾವಣೆ

ಘಟನೆಯಲ್ಲಿ ಭಾರತವು "ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯ" ವಾಗುವುದೆಂದು ಹೇಳಿದೆ. ಈ ಲಕ್ಷಣಕ್ಕೆ ಬಾಧೆ ಬಾರದಂತೆ ಭಾರತವೀಗ ಕಾಮನ್‌ವೆಲ್ತಿನಲ್ಲಿ ಉಳಿಯುವುದೆಂದು ಮೊನ್ನೆ ನಡೆದ ಅಧಿರಾಜ್ಯ ಮಂತ್ರಿ ಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು. ಪ್ರಜಾರಾಜ್ಯದ ಅಧ್ಯಕ್ಷನನ್ನು ಪರೋಕ್ಷವಾಗಿ ಚುನಾಯಿಸಬೇಕೆಂದೂ ಅವನ ಅಧಿಕಾರ ಐದು ವರ್ಷಗಳ ವರೆಗೆಂದೂ ಹೇಳಲಾಗಿದೆ. ಆ ಅಧ್ಯಕ್ಷನು ಪ್ರಾಂತಿಕ ಗವರ್ನರರನ್ನು ನಿಯಮಿಸುವ ಅಧಿಕಾರವನ್ನು ಪಡೆದಿದ್ದಾನೆ; ಮತ್ತು ಶಿಕ್ಷೆಗೊಳಗಾದವರ ಶಿಕ್ಷೆಯನ್ನು ಕ್ಷಮಿಸುವ ಹಕ್ಕು ಅವನಿಗಿದೆ. ಇಷ್ಟಲ್ಲದೆ ಅವನಿಗೆ ಇನ್ನಾವ ಅಧಿಕಾರವೂ ಇಲ್ಲ. ಅವನು ಮಂತ್ರಿಗಳ ಸಲಹೆಯ ಮೇರೆಗೆ ವರ್ತಿಸಬೇಕು. ಮಂತ್ರಿಗಳು ಇಮ್ಮನೆಯ ಶಾಸನಸಭೆಗೆ ಹೊಣೆಗಾರರು. ಪ್ರತಿಯೊಬ್ಬ ಮಂತ್ರಿಯೂ ಶಾಸನ ಸಭೆಯ ಎರಡರೊಳಗೊಂದು ಮನೆಯ ಸದಸ್ಯನಾಗಿರಬೇಕು. ಹಾಗೆ ಆಗಿಲ್ಲವಾದರೆ ಅವುಗಳಲ್ಲಿ ಒಂದು ಸ್ಥಳವನ್ನು ಪಡೆಮುಕೊಳ್ಳಲು ಅವನಿಗೆ ಆರು ತಿಂಗಳ ಅವಧಿಯನ್ನು ಕೊಡಲಾಗುವುದು. ಕೆಳಮನೆಗೆ ಜನಜಾಗೃತವೆಂದೂ ಮೇಲ್ಮನೆಗೆ ರಾಜ್ಯಗಳ (ಪ್ರಾಂತಗಳ) ಸಂಘವೆಂದೂ ಕರೆಯಲಾಗಿದೆ. ಕೆಳಮನೆಯಲ್ಲಿ (House of the People) ೫೦೦ ಸದಸ್ಯರೂ ಮೇಲ್ಮನೆಯಲ್ಲಿ ೨೫೦ ಸದಸ್ಯರೂ ಇರತಕ್ಕದ್ದು. ಮೇಲ್ಮನೆಯ ೨೫೦ ಸದಸ್ಯರಲ್ಲಿ ವಿವಿಧ ಕಾರ್ಯಕ್ಷೇತ್ರಗಳಲ್ಲಿ ಖ್ಯಾತಿವೆತ್ತ ೧೫ ಜನರನ್ನು ಅಧ್ಯಕ್ಷನು ಆರಿಸಿ ನಿಯಮಿಸುವನು; ಮಿಕ್ಕ ೨೩೫ ಜನರನ್ನು ಕೆಳಮನೆಯ ಸದಸ್ಯರು ಚುನಾಯಿಸುವರು. ಕೆಳಮನೆಯ ಸದಸ್ಯರನ್ನು ೫ ಲಕ್ಷ ಜನಸಂಖ್ಯೆಗೆ ಕಡಿಮೆಯಿಲ್ಲದ ೭½ ಲಕ್ಷಕ್ಕೆ ಹೆಚ್ಚಿರದ ಚುನಾವಣೆಯ ಕ್ಷೇತ್ರಗಳಿಂದ ಸಾರ್ವತ್ರಿಕ ಪ್ರೌಢ ಮತದಾನಪದ್ಧತಿಯ ಮೇರೆಗೆ ಚುನಾಯಿಸಲಾಗುತ್ತದೆ. ಸಂಸ್ಥಾನಗಳಿಗೆ ನೂರಕ್ಕೆ ೪೦ಕ್ಕಿಂತ ಹೆಚ್ಚಿನ ಪ್ರಾತಿನಿಧ್ಯವಿಲ್ಲ. ಒಟ್ಟಿನಲ್ಲಿ ಪ್ರಾತಿನಿಧ್ಯ ಜನಸಂಖ್ಯೆಯ ಪ್ರಮಾಣವನ್ನು ಅವಲಂಬಿಸಿದೆ. ಗಂಡಾಂತರ ಪರಿಸ್ಥಿತಿಯ ಘೋಷಣೆಯಿಲ್ಲದ ಸಾಮಾನ್ಯಕಾಲದಲ್ಲಿ ಮೇಲ್ಮನೆಯ ಅಧಿಕಾರ ೫ ವರ್ಷಗಳ ಅಂತ್ಯದಲ್ಲಿ ಮುಗಿದು ಹೊಸ ಚುನಾವಣೆಗೆ ಬ್ರಿಟಿಶ್ ರೂಢಿಯಂತೆ ಅನುಕೂಲಮಾಡಿಕೊಡಲಾಗುತ್ತದೆ. ಮೇಲ್ಮನೆಯ ಸದಸ್ಯರಲ್ಲಿ ಮೂರನೆಯ ಒಂದಂಶದ ಅಧಿಕಾರ ಪ್ರತಿ ಎರಡು ವರ್ಷಗಳ ಅಂತ್ಯದಲ್ಲಿ ಮುಗಿಯುವಂತೆ ವ್ಯವಸ್ಥೆಮಾಡಲಾಗಿದೆ. ಅವರ ಸ್ಥಳಗಳಿಗೆ ಬೇರೆಯವರನ್ನು ಕೆಳಮನೆ ಚುನಾಯಿಸಿ ಕಳಿಸುತ್ತದೆ. ಬ್ರಿಟಿಶ್ ಪಾರ್ಲಿಮೆಂಟಿನಲ್ಲಿರುವಂತೆಯೇ ಮೇಲ್ಮನೆಗೆ ಹಣಕಾಸಿನ ಮಸೂದೆಗಳ ಮೇಲೆ ಯಾವ ಅಧಿಕಾರವೂ ನಿಲ್ಲ. ಶಾಸನ ಕಾರ್ಯದಲ್ಲಿ ಅದು ಪ್ರತಿಬಂಧಕವಾಗಿ ನಿಂತಾಗ ಎರಡೂ ಮನೆಗಳ ಸಂಯುಕ್ತ ಸಭೆಕರೆದು ಬಹುಸಂಖ್ಯಮತದಾನದಿಂದ ತೀರ್ಮಾನಿಸುವ ವ್ಯವಸ್ಥೆಯನ್ನಿಟ್ಟು ಅದರ ವಿಘ್ನಕಾರಿತ್ವವನ್ನು ಕುಂಠಿತಗೊಳಿಸಲಾಗಿದೆ.

ಬಲಿಷ್ಠ ಕೇಂದ್ರ ಸರಕಾರ

ಘಟನಾರಚಕರ ಒಲಿತ ಬಲಿಷ್ಠ ಕೇಂದ್ರ ಸರಕಾರದತ್ತ ಇರುವುದರಿಂದ ಪ್ರಾಂತಗಳಿಗೆ ಅತಿಶಯ ಮಿತವಾದ ಶಾಸನರಚನಾಧಿಕಾರವನ್ನು ಕೊಡಲಾಗಿದೆ. ಅಧ್ಯಕ್ಷ ಮತ್ತು ಅವನಿಗೆ ಅಧೀನರಾದ ಗವರ್ನರರ ಆಪತ್ಕಾಲಿಕ ಅಧಿಕಾರಗಳು ಪ್ರಾಂತಿಕ ಶಾಸನ ಸಭೆಗಳ ಅಧಿಕಾರವನ್ನು ಬಹುಮಟ್ಟಿಗೆ ಮಿತಗೊಳಿಸಿಬಿಟ್ಟಿದೆ. ಇದು ೧೯೩೫ ರ ಭಾರತ ಶಾಸನದ ೯೩ ನೆಯ ಪರಿಚ್ಛೇದವನ್ನು ಹೋಲುತ್ತದೆ.

ನ್ಯಾಯಶಾಖೆಯನ್ನು ಸ್ವತಂತ್ರಗೊಳಿಸಿದ್ದರೂ ಮೇಲ್ತರಗತಿಯ ಕೋರ್ಟುಗಳ ನ್ಯಾಯಾಧೀಶರ ನಿಯಮನವನ್ನು ಮುಖ್ಯಮಂತ್ರಿಯ ಸಲಹೆಯ ಮೇರೆಗೆ ಅಧ್ಯಕ್ಷನೇ ಮಾಡುತ್ತಾನೆ. ನ್ಯಾಯಾಧೀಶರ ಸ್ವಾತಂತ್ರ್ಯವನ್ನು ಬ್ರಿಟನ್ನಿನ ಪದ್ಧತಿಯಂತೆ ರಕ್ಷಿಸಲಾಗುತ್ತದೆ. ಸುಪ್ರೀಂ ಕೋರ್ಟೆಂಬುದು ಘಟನೆಯ ಪಾಲಕತ್ವವನ್ನೂ ವ್ಯಾಖ್ಯಾತೃತ್ವವನ್ನೂ ವಹಿಸಿಕೊಳ್ಳುತ್ತದೆ. ಒಕ್ಕೂಟದ ಶಾಸನ ಸಭೆ ಅಗತ್ಯವಿದ್ದರೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸುವ ಅಧಿಕಾರವನ್ನು ಹೊಂದಿದೆ. ಅಲ್ಪಸಂಖ್ಯರಿಗೆ ಸ್ಥಳಗಳನ್ನು ಕಾದಿರಿಸುವುದನ್ನು ನಿಲ್ಲಿಸಲಾಗಿದೆ. ಕೇವಲ ಪರಿಶಿಷ್ಟ ವರ್ಗಕ್ಕೆ ಮಾತ್ರ ೧೦ ವರ್ಷಗಳ ತನಕ ಅಂಥ ಸ್ಥಳಗಳನ್ನು ಕಾದಿಡಬೇಕೆಂದು ಗೊತ್ತುಮಾಡಲಾಗಿದೆ. ಒಕ್ಕೂಟದ ಶಾಸನ ಸಭೆ ೧೦ ವರ್ಷಗಳ ಬಳಿಕ ಮೂರನೆಯ ಎರಡಂಶ ಬಹುಮತದಿಂದ ಘಟನೆಯ ಪರಿಚ್ಛೇದಗಳಲ್ಲಿ ತಿದ್ದುಪಡಿಯನ್ನು ಮಾಡಬಹುದು. ಆದರೆ ಕೇಂದ್ರ ಮತ್ತು ಪ್ರಾಂತ ಪ್ರಾತಿನಿಧ್ಯ ಸುಪ್ರೀಂ ಕೋರ್ಟಿನ ಅಧಿಕಾರ ಇವುಗಳಲ್ಲಿ ಮಾತ್ರ ಬದಲಾವಣೆಮಾಡುವ ಅಧಿಕಾರ ಅದಕ್ಕಿಲ್ಲ. ಒಂದುವೇಳೆ ಅಂಥ ಬದಲಾವಣೆ ಮಾಡಬೇಕಾದರೆ ಹಿಂದಿನ ಬ್ರಿಟಿಶ್ ಆಳಿಕೆಯಲ್ಲಿಯ ಪ್ರಾಂತಗಳ ಮತ್ತು ಸಂಸ್ಥಾನಗಳ ಮೂರನೆಯ ಒಂದಂಶದ ಒಪ್ಪಿಗೆ ತೆಗೆದುಕೊಳ್ಳಬೇಕು. ಒಕ್ಕೂಟದ ಶಾಸನಸಭೆಯ ಬಹುಮತವನ್ನು ಪಡೆದರೆ ಪ್ರಾಂತಿಕ ಶಾಸನ ಸಭೆಗಳು ತಮ್ಮ ಗವರ್ನರರ ಆಯ್ಕೆಯ ರೀತಿಯನ್ನು ಅಥವಾ ತಮ್ಮ ಎರಡುಮನೆಗಳನ್ನು ಒಂದುಗೂಡಿಸುವುದನ್ನು ಸಾಧಿಸಿಕೊಳ್ಳಬಹುದು.

ವರಿಷ್ಠ ಸತ್ತೆ

ಭಾರತದ ಕರಡು ಘಟನೆ ಕೆಲವೇ ಪ್ರಸಿದ್ಧ ಪುರುಷರಿಂದ ರಚಿತವಾಗಿದೆ. ಸೋಶಲಿಸ್ಟ ಪಕ್ಷವೊಂದನ್ನು ಬಿಟ್ಟು ಮಿಕ್ಕೆಲ್ಲ ಪ್ರಾಂತಿಕ ಶಾಸನ ಸಭೆಗಳೂ ಮೇಲೆ ಹೇಳಿದಂತೆ ಬಲಿಷ್ಠ ಕೇಂದ್ರ ಸರಕಾರವನ್ನು ಪುರಸ್ಕರಿಸುತ್ತವೆ. ಘಟನಾರಚನೆ ಜನತೆಗೆ ಕೇವಲ ಅಪರಿಚಿತವಾಗಿದೆ. ಭಾರತವು ಕಾಮನ್‌ವೆಲ್ತಿನಲ್ಲಿ ಉಳಿಯಬೇಕೋ ಬೇಡವೋ ಎಂಬ ಒಂದೇ ಒಂದು ಅಂಶದ ಬಗ್ಗೆ ಮಾತ್ರ ಜನಜನಿತವಾಗಿ ಚರ್ಚೆ ನಡೆಯಿತು. ರಾಜಕೀಯ ಜ್ಞಾನ ಜನರಿಗಿಲ್ಲವಾದ ಕಾರಣ ಹೀಗೆ ಅಲ್ಪಸಂಖ್ಯರಿಂದ ಘಟನೆ ರಚಿತವಾಗುವುದು ಸ್ವಾಭಾವಿಕವಾಗಿಯೇ ಇದೆ. ಜನರಲ್ಲಿ ವಿದ್ಯೆ ಮತ್ತು ರಾಜಕೀಯ ಅನುಭವಗಳು ಬೆಳೆದು ಬರುವ ವರೆಗೆ ಈ ಘಟನೆಯ ಮೇರೆಗೆ ಭಾರತದಲ್ಲಿ ಒಂದು ವಿಧದ ವರಿಷ್ಠರ ಆಳಿಕೆ (Oligarchic rule) ನಡೆಯುವುದು. ಪ್ರೌಢ ಮತದಾನವೇ ಮೊದಲಾದ ಘಟನೆಯ ವಿವಿಧಾಂಶಗಳನ್ನು ಅಮಲಿನಲ್ಲಿ ತರಲು ಸದ್ಯದ ಪರಿಸ್ಥಿತಿಯಲ್ಲಿ ಬಹಳ ಕಷ್ಟವಾಗಬಹುದು. ಅಮೇರಿಕದ ಗೆಳೆಯರು ಆಂಗ್ಲೋ-ಅಮೇರಿಕನ್ ಪರಂಪರೆಯಲ್ಲಿ ತರಬೇತಾದ ಭಾರತೀಯ ಮುಖಂಡರು ಧೈರ್ಯದಿಂದ ಪ್ರಜಾತಂತ್ರ ಪದ್ಧತಿಯನ್ನು ಅಭಿವೃದ್ಧಿಗೊಳಿಸುವುದನ್ನು ಕುತೂಹಲದಿಂದ ನಿರೀಕ್ಷಿಸುವರು.

---

೪೦೦ ಗಂಡರನ್ನಾಳಿದವಳು !



ಆಫ್ರಿಕದಲ್ಲಿ ತಾರಿಫಾ ಎಂಬ ಒಂದು ಪಟ್ಟಣವುಂಟು. ನೂರು ವರ್ಷಗಳ ಹಿಂದೆ ಅದು ಶಾಂತವೂ ಸಮೃದ್ಧವೂ ಆದ ಒಂದು ಬಂದರಾಗಿತ್ತು. ಅಲ್ಲಿ ಸಮುದ್ರಚೋರರು ೨೦೦ ವರ್ಷಗಳತನಕ ಹಡಗುಗಳಿಂದ ಸುಂಕವನ್ನು ವಸೂಲು ಮಾಡುತ್ತಿದ್ದರು. ಈಗ ಅವರಿಲ್ಲ; ಆದರೂ ಅವರ ನೀತಿ ಅಳಿದಿಲ್ಲ. ಅಂದರೆ ಈಗಲೂ ಅಲ್ಲಿಯ ಅಲ್ಜೀರಿಯನ್ನರು ತಾವು ಮೂಕರೆಂದೂ ಕಿವುಡರೆಂದೂ ನಟಿಸಿ ಹಣಗಳಿಸಿ ಬಾಳುತ್ತಿದ್ದಾರೆ. ಅಲ್ಲಿಯ ದೊರೆ ಮೊಲ್ಲಾ ಇಸ್ಮೇಲನಿಗೆ ೮೮೮ ಮಕ್ಕಳಿದ್ದರು. ೧೨ ಚಪ್ಪರಬದನೆ ಡಬ್ಬಿಗಳನ್ನು ಕೊಟ್ಟು ಒಬ್ಬ ಹೆಂಡತಿಯನ್ನು ಅಲ್ಲಿ ಕೊಳ್ಳಬಹುದಿತ್ತು. ಒಮ್ಮೆ ಅಲ್ಲಿ ರಾಣಿ ಒಬ್ಬಳು ಆಳುತ್ತಿದ್ದಳು. ಅವಳ ಹೆಸರು ಕಹೇನಾ ಎಂದು. ಆ ಬರ್ಬರ ರಾಣಿಯ ರಾಣೀವಾಸದಲ್ಲಲ್ಲ— ರಾಜವಾಸದಲ್ಲಿ ೪೦೦ ಜನ ಗಂಡಂದಿರಿದ್ದರಂತೆ!

● ಮದ್ರಾಸು ಸರಕಾರದ ರೀಜನಲ್ ಫಿರ್ಕಾ ಡೆವಲಪ್‌ಮೆಂಟ್ ಅಧಿಕಾರಿ ಶ್ರೀ ಲಕ್ಷ್ಮೀರತ್ನಂ ಭಾರತಿಯವರು ತಾ. ೧೯ ರಂದು ಒಂದು ವಾರದ ಪ್ರವಾಸಕ್ಕಾಗಿ ಕುಂಬಳೆಗೆ ಬಂದಿರುತ್ತಾರೆ. ಈ ವರೆಗೆ ಅವರು ಈ ಅಭಿವೃದ್ಧಿ ಕೇಂದ್ರದ ಹಲವು ಸ್ಥಳಗಳನ್ನು ಸಂದರ್ಶಿಸಿದರು.

● ೨೯ನೇ ತಾರೀಕು ರಾಯಚೂರ ಜಿಲ್ಹಾ ಹರಿಜನಸೇವಾ ಸಂಘದ ಉದ್ಘಾಟನೆಯು ಪ್ರಮುಖ ಕಾಂಗ್ರೆಸ ಕಾರ್ಯಕರ್ತರಾದ ಡಾ. ಮೇಲ್ಕೋಟೆಯವರಿಂದ ಜರುಗಿತು. ಈ ಸೇವಾ ಸಂಘವು ಹೈದರಾಬಾದ ಸಂಸ್ಥಾನ ಹರಿಜನ ಸೇವಾ ಸಂಘದ ಕೂಡ ಸಂಬಂಧವಿಟ್ಟುಕೊಳ್ಳುವದು. ಡಾ. ಮೇಲ್ಕೋಟೆಯವರಿಗೆ ಹರಿಜನ ಸೇವಕ ಸಂಘದವರು ಮಾನಪತ್ರವನ್ನರ್ಪಿಸಿದರು.

● ಹರಿಜನರಿಗೆ ಸಾಮಾಜಿಕ ಬಹಿಷ್ಕಾರ ಹಾಕುವದನ್ನು ಅಪರಾಧವೆಂದು ಸರಕಾರವು ನಿರ್ಧರಿಸಿದೆಯೆಂದು ಪೂರ್ವಪಂಜಾಬ ಸರಕಾರದ ಕೂಲಿಕಾರಮಂತ್ರಿ ಪೃಥ್ವೀಸಿಂಗರು ಒಂದು ಸಭೆಯಲ್ಲಿ ಹೇಳಿದರು.

ಸತ್ತವನ ಸಲ್ಲಾಪ

ಲೇ— ದಿ. ಹಣಮಂತರಾವ ಕೌಜಲಗಿಯವರು

ಮರಣಾನಂತರದ ಜೀವನದ ಬಗ್ಗೆ ಅನುಭವಪೂರ್ಣವಾಗಿ ಹೇಳಲು ಜೀವವಿದ್ದವರಿಗೆ ಸಾಧ್ಯವಿಲ್ಲ. ಆದರೆ ಆತ್ಮ ಅಮರನೆಂಬುದು ತರ್ಕಸಿದ್ಧವಿರುವದಾಗಿ ಆತ್ಮಗುಣನಾದ ಜ್ಞಾನಕ್ಕೆ ಆಶ್ರಯವಾದ ಬುದ್ಧಿಗೆ ವಿಸ್ಮೃತಿಯಿಲ್ಲದೆ ನಾಶವಿರಲಾರದು. ಇಂಥ ಬುದ್ಧಿಗೆ ದೇಹತ್ಯಾಗದ ಆಶ್ಚರ್ಯಕರ ಘಟನೆಯ ನಂತರ ತಾನು ವಿದೇಹರೊಡನೆ ವ್ಯವಹರಿಸಲಾರೆನೆಂಬುದರ ಅರಿವಾಗಲು ೧೫-೧೬ ದಿನಗಳು ಹಿಡಿದ ಒಂದು ಸ್ವಾಭಾವಿಕವೆನಿಸುವ ಚಿತ್ರವನ್ನು ಇಲ್ಲಿ ಲೇಖಕರು ಕೊಟ್ಟಿದ್ದಾರೆ.

ನಾನು ಸತ್ತಿರುವೆನೆಂದು ಜನರು ಅನ್ನುತ್ತಾರೆ, ದುಃಖಪಡುತ್ತಾರೆ, ಕೆಲವರು ದುಃಖಪಡುವವರಿಗೆ ಸಮಾಧಾನದ ಮಾತು ಹೇಳುತ್ತಾರೆ. ಹೀಗಿದ್ದರೂ ನಾನು ಸತ್ತಿಲ್ಲ, ಜೀವದಿಂದಿರುವೆನೆಂದು ನನಗೆ ಅನಿಸುವದು. ಬಹುಜನರ ಮತವು ನಾನು ನಿಜವಾಗಿ ಮೃತಪಟ್ಟೆನೆಂದು ಮತ್ತು ನನ್ನ ಅನುಭವವು ನಾನು ಮೃತಪಟ್ಟಿಲ್ಲವೆಂದಿರುವದರಿಂದ ಈ ವ್ಯತ್ಯಾಸವು ಹೋಗಿ ಏಕಮತ್ಯವಾಗುವ ಬಗೆಯು ತೋರದಂತಾಗಿರುವದು. ನಿಜಸ್ಥಿತಿಯನ್ನು ಹೇಳಿದರೆ ಕೇಳುವರೆಂಬ ಆಶೆಯಿಂದ ನಾಲ್ಕು ಶಬ್ದಗಳನ್ನು ಹೇಳಲುದ್ಯುಕ್ತನಾಗಿರುವೆನು.

ಸ್ವಲ್ಪ ಥಂಡಿಯಾಗಿ ಜ್ವರ ಬಂದವೆಂದು ಮನೆಯಲ್ಲಿ ಹೋಗಿ ಮಲಗಿಕೊಂಡೆನು. ಜ್ವರವು ಆರಲಿಲ್ಲ. ಉಪಚಾರಗಳು ಹೆಚ್ಚು ಹೆಚ್ಚು ಆದಂತೆ ಬೇನೆಯು ಬೆಳೆಯುತ್ತ ನಡೆಯಿತು. ಮೈಯಲ್ಲಿ ಜ್ವರವಿದ್ದಾಗ ಗಾಳಿತಾಗಿದ್ದರಿಂದ ಕಫವುಂಟಾಯಿತು. ವೈದ್ಯರು ಚಿಂತಾಕ್ರಾಂತರಾದರು. ವಿಲಾಯತಿಯ ಔಷಧಗಳಿಂದ ಏನೂ ಗುಣ ಬಾರದ್ದರಿಂದ ಆಯುರ್ವೇದದ ಪಂಡಿತರ ಕಡೆಗೆ ಆಪ್ತೇಷ್ಟರು ಎಡತಾಕಹತ್ತಿದರು. ನನ್ನ ಬೇನೆಯ ಬಗ್ಗೆ ಮಾತಾಡುವದಾದರೆ ಖೋಲಿಯಿಂದ ಹೊರಗೆ ಹೋಗಿ ಸದ್ದು ಮಾಡದೆ ಮಾತಾಡಹತ್ತಿದರು. ಜ್ವರದಿಂದಾಗುವ ವಿಕಾರಗಳು ನನ್ನ ಬೆನ್ನು ಬಿಡಲಿಲ್ಲ. ಹಸ್ತಪಾದಗಳಿಗೆ ಜುಂಜುಹಚ್ಚಿದಂತೆ ಅಥವಾ ಕಣ್ಣಮುಂದೆ ಸಾವಿರಾರು ವಿದ್ಯುದ್ದೀಪಗಳನ್ನು ಒಮ್ಮೆಲೆ ಬೆಳಗಿದಂತೆ ಅನಿಸಹತ್ತಿತು. ಒಮ್ಮೊಮ್ಮೆ ನಾನು ಮಲಗಿದಲ್ಲಿಯೇ ನನ್ನ ಮೇಲೆ ಅರಳೆಯ ದಿಂಬುಗಳನ್ನು ಇಟ್ಟಂತೆ ಅನಿಸುವದು. ಕಾರಣವಿಲ್ಲದೆ ನನ್ನ ಮೇಲೆ ಈ ದಿಂಬುಗಳನ್ನು ಯಾರು ಇಡುವರು, ಯಾಕೆ ಇಡುವರು ಇದು ನನಗೆ ತಿಳಿಯುತ್ತಿದ್ದಿಲ್ಲ. ಅಥವಾ ದಿಂಬುಗಳನ್ನು ಇಡಬೇಡಿರೆಂದು ಹೇಳುವ ಬುದ್ಧಿಯಾದರೂ ನನಗೆ ತೋಚುತ್ತಿದ್ದಿಲ್ಲ. ದಿಂಬುಗಳ ಭಾರವು ಅಸಹ್ಯವಾದ ಕೂಡಲೆ ನಾನು ಒದರುತ್ತಿದ್ದೆನು. ಆರೈಕೆಗಾಗಿ ನನ್ನ ಹತ್ತಿರ ಕೂತ ಜನರು ನನ್ನನ್ನು ಎಚ್ಚರಿಸಿದ ಮೇಲೆ ಚೀರಾಟವು ನಿಲ್ಲುತ್ತಿತ್ತು. ಸ್ವಲ್ಪ ಸಮಯದಲ್ಲಿಯೇ ಮತ್ತೆ ಸ್ಮೃತಿ ತಪ್ಪಿ ಬೇರೊಂದು ತರದ ಮಾಯಾತರಂಗವು ಮನಸಿನಲ್ಲಿ ಹುಟ್ಟುತ್ತಿತ್ತು. ಮಂಚದ ಮೇಲೆ ಬಿದ್ದ ದೇಹವು ತನ್ನಿಂದ ತಾನೆ ಎದ್ದು ಅಂತರಾಳದಲ್ಲಿ ಸಂಚರಿಸಿದಂತೆ ಅನಿಸುವದು. ಸಂಚರಿಸುತ್ತ ಗಿಮಿ ಗಿಮಿ ತಿರುಗುತ್ತ ಅದು ಮೇಲೆ ಹೋದಂತೆ ನನಗೆ ಒಂದು ಬಗೆಯ ಆನಂದವಾಗುತ್ತಿತ್ತು. ಆದರೆ ಅತ್ಯುಚ್ಚ ಸ್ಥಾನಕ್ಕೆ ಮುಟ್ಟಿದಕೂಡಲೆ ಒಮ್ಮೆಲೆ ದೇಹದಲ್ಲಿಯ ಹಾರಾಡುವ ಶಕ್ತಿಯು ನಷ್ಟವಾಗಿ ಅದು ಭೂತಲಕ್ಕೆ ಅಪ್ಪಳಿಸುವಂತೆ ಅನಿಸಿ ಭೂಮಿಯ ಮೇಲೆ ಬಿದ್ದರೆ ಛಿನ್ನಭಿನ್ನವಾಗುವೆನೆಂದು ಅಂಜಿ ನಾನು ಚೀರುತ್ತಿದ್ದೆನು. ಜನರು ಎಚ್ಚರಿಸಿ ಹೇಳಿದಮೇಲೆ ನಾನು ಹಾಸಿಗೆಯ ಮೇಲೇ ಇರುವೆನೆಂದು ಸಮಾಧಾನಪಡುತ್ತಿದ್ದೆನು.

ಹೀಗೆ ಮೂರು ದಿನಗಳು ಹೋದವು. ಆ ಮೇಲೆ ಎದೆಯಲ್ಲಿ ಕಫ ಕೂಡಿ ಶ್ವಾಸೋಚ್ಛ್ವಾಸಕ್ಕೆ ತೊಂದರೆಯಾಗಹತ್ತಿತು. ಈ ಸ್ಥಿತಿಯಲ್ಲಿ ನಾನು ಬೇಶುದ್ಧನಾಗಿ ಇರುವದು ಹೆಚ್ಚಾಯಿತು. ವೇದನೆಗಳು ಉತ್ಕಟವಾದವು. ಶುದ್ಧಿಯಲ್ಲಿ ಇದ್ದಾಗ ವೇದನೆಗಳ ತಾಪಕ್ಕಿಂತ ಮರಣವು ಒಳಿತೆಂದೆನಿಸುವದು. ಈ ದಶೆಯಲ್ಲಿ ಬಹಳ ಹೊತ್ತು ಇರಬೇಕಾಗಿಲ್ಲ. ಒಮ್ಮೆಲೆ ಎಲ್ಲ ವೇದನೆಗಳು ನಿಂತಂತಾಯಿತು. ದೇಹದ ಮೇಲೆ ಈ ವರೆಗೂ ಇಟ್ಟಂಥ ಒಂದು ದೊಡ್ಡಭಾರವು ಹಗುರಾದಂತೆ ಆಯಿತು. ಹೀಗೇಕೆ ಆಯಿತು, ಹೇಗೆ ಆಯಿತು ನನಗೇ ತಿಳಿಯಲಿಲ್ಲ. ನನ್ನ ಹತ್ತರ ಜನರು ಮಾಡುವರು (?) ಮುಂತಾದ ಕೃತಿಗಳು ನನಗೆ ಸ್ಪಷ್ಟವಾಗಿ ತಿಳಿಯಹತ್ತಿದವು. ಒಬ್ಬ ಮನುಷ್ಯನು ನನ್ನ ಕಾಲುಗಳನ್ನು ತಿಕ್ಕುತ್ತ ಅವುಗಳಲ್ಲಿ ಉಷ್ಣತೆ ಉಂಟು ಮಾಡಲು ಯತ್ನಿಸುತ್ತಿದ್ದನು. ಮತ್ತೊಬ್ಬನು ಲವಂಗ ತೇಯ್ದು ನನ್ನ ಕಣ್ಣಿಗೆ ಹಚ್ಚುತ್ತಿದ್ದನು. ನಮ್ಮ ತಂಗಿ ನನ್ನ ಕಿವಿಗೆ ಬಾಯಿಹಚ್ಚಿ ಜೋರಿನಿಂದ ನನ್ನ ಹೆಸರುಗೊಂಡು ಚೀರುತ್ತಿದ್ದಳು. ಇಷ್ಟೆಲ್ಲ ಉಪಚಾರಗಳನ್ನು ಅನುಭವಿಸುತ್ತಿದ್ದರೂ ಈ ಉಪಚಾರಗಳ ಪ್ರಯೋಜನವಾತ್ರ ನನಗೆ ತಿಳಿಯಲೊಲ್ಲದು. ಒಂದೆರಡು ನಿಮಿಷದಲ್ಲಿ ನನ್ನ ವೇದನೆಗಳಿಗೆ ಮತ್ತೆ ಪ್ರಾರಂಭವಾಯಿತು. ಪುನಃ ನಾನು ನರಳಹತ್ತಿದ್ದನ್ನು ನೋಡಿ ಎಲ್ಲರೂ ಆನಂದೋದ್ಗಾರಗಳನ್ನು ತೆಗೆದರು. ಸ್ವಲ್ಪ ಸ್ಮೃತಿ ಬಂದಮೇಲೆ ನನ್ನ ಜೀವವು ಹೋಗಿದ್ದು ತಿರುಗಿತೆಂದು ಯಾರೋ ಹೇಳಿದರು. ಜೀವ ಹೋಗಿ ತಿರುಗುವ ಈ ಚಮತ್ಕಾರವು ಒಮ್ಮೆ ಆಗಿನಿಲ್ಲಲಿಲ್ಲ. ಆ ದಿವಸ ಮತ್ತೆ ಎರಡು ಸಾರೆ ಮೇಲಿನಂತೆ ಆಯಿತು.

ಮರುದಿನ ಬೆಳಗಿನ ಜಾವದಲ್ಲಿ ನಮ್ಮ ಮನೆಯಲ್ಲಿ ಬಹಳ ಜನರು ಬಂದಂತೆ ಅನಿಸಿತು. ಶ್ವಾಸೋಚ್ಛ್ವಾಸದ ತೊಂದರೆಯಿಂದ ನನ್ನ ವೇದನೆಗಳು ಹೆಚ್ಚಿದ್ದರಿಂದ ಇಷ್ಟು ಜನರು ಬಂದ ಕಾರಣವು ನನಗೆ ತಿಳಿಯಲಿಲ್ಲ. ಮತ್ತೊಮ್ಮೆ ನನ್ನ ಎಲ್ಲ ವೇದನೆಗಳೂ ನಿಂತಂತಾಯಿತು. ಆದರೆ ಮೇಲೆ ಹೇಳಿದಂತೆ ವೇದನೆಗಳು ತಿರುಗಿಲ್ಲ. ಈ ರೀತಿಯಿಂದ ಮುಕ್ತನಾದ ನಾನು ಮನೆಯಲ್ಲಿ ಅಡ್ಡಾಡಹತ್ತಿದೆ. ಆದರೆ ನನಗೆ ತಿಳಿಯದಂಥ ಒಂದು ಚಮತ್ಕಾರವನ್ನು ಮಾತ್ರ ಕಂಡೆನು. ನನ್ನಂಥ ಆಕಾರವುಳ್ಳ ಒಂದು ದೇಹದ ಸುತ್ತಲೂ ಕುಳಿತು ನನ್ನ ಆಪ್ತೇಷ್ಟರು ಎದೆ ಎದೆ ಬಡಿದುಕೊಂಡು ಅಳುತ್ತಿದ್ದರು. ಯಾಕೆ ಅಳುತ್ತಿರುವರೋ ತಿಳಿಯಲೊಲ್ಲದು. ಅವರ ಶಬ್ದಗಳನ್ನು ಕೇಳಿದ ಮೇಲೆ ನಾನು ಸತ್ತೆನೆಂದು ಅಳುತ್ತಿರುವುದಾಗಿ ಗೊತ್ತಾಯಿತು. ನಾನು ಇದ್ದಾಗ್ಯೂ ಸತ್ತೆನೆಂದು ಭಾವಿಸುವದನ್ನು ನೋಡಿ ಆಶ್ಚರ್ಯವಾಯಿತು. "ನಾನು ಸತ್ತಿಲ್ಲ ಅಳಬೇಡಿ" ಎಂದರೆ ಕೇಳಿಸುವಂತೆ ತೋರಲಿಲ್ಲ ಅವರ ಆಕ್ರೋಶವು ಜೋರಿನಿಂದ ನಡೆಯಿತು. ನನ್ನ ಶಬ್ದವು ಏಕೆ ಕೇಳಿಸಬಾರದು? ಇದೂ ನನಗೆ ತಿಳಿಯಲಿಲ್ಲ. ಈ ಸಂದರ್ಭದಲ್ಲಿ ಮತ್ತೊಂದು ಆಶ್ಚರ್ಯದ ಸಂಗತಿಯು ಇತ್ತು. ನನ್ನಂತೆ ಕಾಣಿಸುವ ದೇಹವು ನನ್ನ ಬಳಗದವರ ಮಧ್ಯದಲ್ಲಿ ಬಿದ್ದಿದ್ದರೂ ಆ ದೇಹವೆಂದರೆ ನಾನಲ್ಲ, ಅದು ನನ್ನಂತೆ ಕಾಣಿಸುತ್ತಿರಬಹುದು; ಆದರೆ ಅದು ನನ್ನ ಛಾಯಾಚಿತ್ರವೆನಬಹುದೆಂದು ನನಗೆ ಭಾವನೆಯಾಯಿತು. ತನ್ನ ಬಾಲ್ಯದಲ್ಲಿಯ ಛಾಯಾಚಿತ್ರವನ್ನು ನೋಡಿ ಒಬ್ಬ ಮಧ್ಯವಯಸ್ಕನಾದ ಮನುಷ್ಯನಿಗೆ ಏನೆನಿಸುವದೋ ಅದೇ ಭಾವನೆಯು ನನಗೆ ಆಯಿತು. ಭೂಮಿಯ ಮೇಲೆ ಬಿದ್ದ ಆ ದೇಹದ ಮೇಲಿನ ಮಮತ್ವವು ಪೂರಾ ಹೋಗದಿದ್ದರೂ ಅದೂ ನಾನೂ ಬೇರೆ, ಒಂದೇ ಅಲ್ಲ, ಅದರ ಅಸ್ತಿತ್ವಕ್ಕೆ ಸಂಬಂಧವಿಲ್ಲವೆಂದು ಕಂಡಿತು. ಹೀಗೆ ನಾನು ಎಲ್ಲ ವೇದನೆಗಳಿಂದ ಮುಕ್ತನಾಗಿ ನಾನು ಸತ್ತಿಲ್ಲ, ಜೀವದಿಂದ ಸುರಕ್ಷಿತನಾಗಿರುವೆನೆಂದು ಎಷ್ಟು ಹೇಳಿದರೂ ನನ್ನ ಬಾಂಧವರ ಆಕ್ರೋಶವು ನಿಲ್ಲಲಿಲ್ಲ. ಒಂದೆರಡು ತಾಸಿನ ನಂತರ ನನ್ನ ಛಾಯಾಚಿತ್ರವಾದ ಆ ದೇಹವನ್ನು ಸ್ಮಶಾನಕ್ಕೆ ಒಯ್ದು ಸುಟ್ಟು ಬಂದರು. ಆ ಮೇಲೆ ಹತ್ತು ಹದಿನಾರು ದಿವಸದ ವರೆಗೆ ನಮ್ಮ ಮನೆಯಲ್ಲಿ ಗೊಂದಲವೇ ನಡೆಯಿತು. ನಾನು ಸತ್ತೆನೆಂದು ದುಃಖಪಡುವ ನನ್ನ ಕುಟುಂಬದವರ ಸಮಾಧಾನ ಮಾಡುವದಕ್ಕೆ ಊರ ಜನರು ಬರುತ್ತಿದ್ದರು. ಅವರು ಬಾಗಿಲದಲ್ಲಿ ಬಂದ ಕೂಡಲೆ ನಮ್ಮ ಮನೆಯ ಜನರು ಜೋರಿನಿಂದ ಅಳಲಿಕ್ಕೆ ಪ್ರಾರಂಭ ಮಾಡುತ್ತಿದ್ದರು. ಬಂದವರು ನಾಲ್ಕು ಉಪಚಾರದ ಮಾತು ಹೇಳಿ ತಾವೂ ಸ್ವಲ್ಪ ಸ್ವಲ್ಪ ಅತ್ತು ದುಃಖ ಪ್ರದರ್ಶನ ಮಾಡುತ್ತಿದ್ದರು. ಈ ಜನರು ಹುಚ್ಚರಂತೆ ಕಾರಣವಿಲ್ಲದೆ ಅಳುವದನ್ನು ನೋಡಿ ನನಗೆ ಬೇಸರ ಬಂತು. ಅವರು ಅಳಬಾರದು, ದುಃಖ ಪಡಬಾರದೆಂದು ನಾನು ಅವರಿಗೆ ಪರಿಪರಿಯಿಂದ ಹೇಳಿದೆನು. ನಾನು ಎದುರಿನಲ್ಲಿ ಕುಳಿತು ಎಷ್ಟು ಚೀರಿದರೂ ನನ್ನ ಶಬ್ದವೇ ಅವರ ಲಕ್ಷ್ಯಕ್ಕೆ ಬಾರದಂತೆ ಕಂಡಿತು; ಮತ್ತು ನನ್ನ ಶಬ್ದವೇ ಅವರಿಗೆ ಕೇಳಿಸದಂತೆ ಅವರು ವರ್ತಿಸಿದರು. ಮನೆಯಲ್ಲಿ ಈ ಹಾಡಾಯಿತು. ನಿಶ್ಚಯ ಹೋಗುವಂತೆ ಖಾದೀ ಭಾಂಡಾರಕ್ಕೆ ಹೋದೆನು. ಅಟ್ಟಿಯ ಮೇಲೆ ಖರಿ ನಿಶ್ಚದ ಸ್ಥಳದಲ್ಲಿ ಕುಳಿತೆನು; ಆದರೆ ಭಾಂಡಾರದಲ್ಲಿಯ ವ್ಯವಸ್ಥಾಪಕನು ನನ್ನ ಸಂಗಡ ಮಾತಾಡುವದಂತೂ ಇರಲಿ ನನ್ನ ಕಡೆಗೆ ಅವನು ಕಣ್ಣೆತ್ತಿ ಸಹ ನೋಡಲಿಲ್ಲ. ಇಷ್ಟೇ ಅಲ್ಲ, ಯಾರೋ ವ್ಯಾಪಾರಕ್ಕೆ ಬಂದಾಗ್ಗೆ ಅವರ ಸಂಗಡ ಅವನು ಸಹ ನನ್ನ ಮರಣದ ಸುದ್ದಿಯನ್ನೇ ಮಾತಾಡಹತ್ತಿದನು. ನನಗೆ ಸಿಟ್ಟು ಬಂದಿತು. ನಾನು ಸತ್ತಿಲ್ಲವೆಂದು ಅವರ ಮನವರಿಕೆ ಮಾಡಲು ಇಲ್ಲಿ ಆದರೂ ಪ್ರಯತ್ನಪಟ್ಟೆನು. ಅದು ವ್ಯರ್ಥವಾಯಿತು.

ಅಲ್ಲಿಂದ ವಾಚನಾಲಯಕ್ಕೆ ಹೋದೆನು. ಅಲ್ಲಿ ಪರಿಚಯಸ್ಥರು ಎದುರಿನಲ್ಲಿ ಭೆಟ್ಟಿಯಾದರೂ ಮಾತಾಡಿಸದೆ ಹಾಗೇ ಹೋದರು. ಕೆಲಹೊತ್ತು ಕಳೆದ ಮೇಲೆ ನಮ್ಮ ನಿತ್ಯದ ಮಿತ್ರಸಮಾಜಕ್ಕೆ ಹೋದೆನು. ಅಲ್ಲಿ ನನ್ನ ಮಿತ್ರರು ಇಸಪೇಟ ಆಡುತಿದ್ದರು. ಕೆಲವರು ಸುಮ್ಮನೆ ಹರಟೆ ಹೊಡೆಯುತ್ತಿದ್ದರು. ಅವರೊಡನೆ ಏನಾದರೂ ಮಾತಾಡಿ ಕಾಲಕಳೆದು ಮನೆಗೆ ಹೋಗಬೇಕೆನ್ನುವಷ್ಟರಲ್ಲಿ ಅವರಾದರೂ ನನ್ನ ಮರಣದ ಸುದ್ದಿಯನ್ನೇ ಮಾತಾಡುವದನ್ನು ಕೇಳಿದೆನು; ಮುಗಿಯಿತು. ಕಡೆಯ ಯತ್ನವೆಂದು ಇವರ ಮುಂದಾದರೂ ನಾನು ಸತ್ತಿಲ್ಲ ಇರುವೆನೆಂದು ಹೇಳಲಿಕ್ಕೆ ಪ್ರಯತ್ನಿಸಿದೆನು. ಇವರಾದರೂ ನನ್ನ ಶಬ್ದಗಳು ಕೇಳಿಸದವರಂತೆ ಆಚರಿಸಿದರು. ನಿರಾಶನಾಗಿ ಮನೆಗೆ ಹೋದೆನು. ನನ್ನ ಮಾತು ಕೇಳುವವರಿಲ್ಲ, ನನಗೆ ಮಾತು ಹೇಳುವವರಿಲ್ಲ. ಇಂಥ ಸ್ಥಿತಿಯಲ್ಲಿ ಕಾಲಹರಣ ಮಾಡಲಿಕ್ಕೆ ಬೇಸರ ಬರಹತ್ತಿತು. ಮಿತ್ರಹೀನವಾದ ಆಯುಷ್ಯವನ್ನು ಹೇಗೆ ಕಳೆಯಬೇಕೆಂಬ ವಿವಂಚನೆಯಲ್ಲಿ ಮನಕ್ಕೆ ಬಂದಂತೆ ಅಡ್ಡಾಡುವಾಗ ದಣಿದು ಒಂದು ಶಾಂತ ಸ್ಥಳದಲ್ಲಿ ಕುಳಿತೆನು. ಶ್ರಮದಿಂದ ಸ್ವಲ್ಪ ಝುಂಪುಹತ್ತಿತು. ಎಚ್ಚರಾಗಿ ನೋಡುವಷ್ಟರಲ್ಲಿ ನನ್ನ ಎದುರಿನಲ್ಲಿ ನನ್ನ ಗುರುತಿನವರು ಯಾರೋ ಕುಳಿತಂತೆ ಕಾಣಿಸಿತು. ಆ ಗೃಹಸ್ಥನ ಮೋರೆಯನ್ನು ನೋಡಿ ಚಕಿತನಾದೆನು. ನಾನು ನಿದ್ದೆಯಲ್ಲಿ ಇರುವೆನೋ ಎಚ್ಚರಾಗಿರುವೆನೋ ಎಂಬ ಶಂಕೆ ಬಂದಿತು. ಏಕೆಂದರೆ ಯಾವನ ಮೃತ್ಯುಲೇಖವನ್ನು ನಾನೇ ಬರೆದು ವೃತ್ತಪತ್ರಕ್ಕೆ ಕಳಿಸಿದ್ದೆನೋ ಅದೇ ರಾಮುರಾಯನು ನನ್ನೆದುರಿನಲ್ಲಿ ಕುಳಿತು ನನ್ನ ಕಡೆಗೆ ನೋಡುತ್ತ ನಸು ನಗುತ್ತಿದ್ದನು. ನಾನು ಸ್ತಂಭಿತನಾದದ್ದನ್ನು ಕಂಡು ಅವನೇ ಬಂದು, 'ಏಕೆ ರಾಯರೇ ಗುರುತು ಹತ್ತಲೊಲ್ಲದೋ?' ಎಂದು ಮಾತಾಡಿಸಿದನು. ನಾನು ದಿಙ್ಮೂಢನಾದೆನು. ಕಳೆದ ಹದಿನಾರು ದಿನದಲ್ಲಿ ನನ್ನ ಕಣ್ಣಿಗೆ ಕಣ್ಣು ಹಚ್ಚಿ ನನ್ನನ್ನು ಯಾರೂ ಮಾತಾಡಿಸಿದ್ದಿಲ್ಲ; ಈ ಹೊತ್ತು ಇಷ್ಟು ಪ್ರೇಮದಿಂದ ಮಾತಾಡಿಸುವವನು ಭೆಟ್ಟಿಯಾದದ್ದರಿಂದ ನನಗೆ ಆನಂದವಾಗಬೇಕಾದ್ದು ಸರಿ. ಆದರೆ ಭೆಟ್ಟಿಯಾದ ವ್ಯಕ್ತಿಯು ದಿವಂಗತನಾದ ರಾಮುರಾಯನಾದ್ದರಿಂದ ನನ್ನ ಹೊಟ್ಟೆಯಲ್ಲಿ ತಣ್ಣಗಿನ ಕಲ್ಲು ಇಟ್ಟಂತಾಯಿತು. ಇಷ್ಟು ದಿನ ಮೇಲೆ ಬಿದ್ದು ಮಾತನಾಡಿಸುವವನ ನನ್ನು ಬಿಟ್ಟು ಬಿಡುವದೆಂದರೆ ಹೀನತನವೆಂದು ಭಾವಿಸಿ ಮನಸ್ಸನ್ನು ಗಟ್ಟಿ ಮಾಡಿ 'ಬನ್ನಿ ರಾಮುರಾಯರೇ, ದೃಷ್ಟಿಯು ಸ್ವಲ್ಪ ಮಂದವಾದ್ದರಿಂದ ಬೇಗನೆ ಗುರುತು ಹತ್ತಲಿಲ್ಲ. ಕ್ಷಮಿಸಿರಿ' ಅಂದೆನು. 'ಅದೇನು ರಾಯರೆ ಕ್ಷಮಿಸುವದು? ಈ ವಯಸ್ಸಿಗೆ ಎಲ್ಲರ ದೃಷ್ಟಿಯೂ ಮಂದವಾಗುವದೇ?' ಎಂದು ರಾಮುರಾಯನು ಅಂದನು. ಹದಿನಾರು ದಿನಗಳ ವರೆಗೆ ನಾನು ಎಷ್ಟು ಚೀರಿದರೂ ನನ್ನ ಶಬ್ದವು ಯಾರಿಗೂ ಕೇಳಿಸಲಿಲ್ಲ; ಆದರೆ ರಾಮುರಾಯನಿಗೆ ಹೇಗೆ ಕೇಳಿಸಿತು? ಇದೇ ಒಂದು ಸೋಜಿಗವಾಯಿತು. ನನ್ನ ಕೂಡ ಮಾತಾಡುವವನು ಒಬ್ಬನಾದರೂ ಸಿಕ್ಕನೆಂದು ನನಗೆ ಆನಂದವಾಯಿತು. ಮತ್ತು ಆ ಆನಂದದಲ್ಲಿ ಮೊದಲು ಉಂಟಾದ ಭಯವು ಮಾಯವಾಯಿತು. ಇತ್ತ ರಾಮುರಾಯನ ಸಂಗಡ ಕೇವಲ ಮೋಲುಪಚಾರದ, ಕ್ಷೇಮ ಸಮಾಚಾರದ ಮಾತುಗಳನ್ನೇ ಆಡಹತ್ತಿದೆನು. ಅವನು ಮೃತನಾಗಿ ಹದಿನೆಂಟು ...

[illegible] ರಾಮುರಾಯನಿಗೆ ಹೇಳಿದೆನು. ಇದೆಲ್ಲವ ಕೇಳುವ ಮುಂದೆ ರಾಮುರಾಯನು ನಗುತ್ತಿದ್ದನು. ನನ್ನ ಕತೆ ಮುಗಿದ ಮೇಲೆ ಸಹ ರಾಮುರಾಯನ ನಗೆ ನಿಲ್ಲಲಿಲ್ಲ. ಕಡೆಗೆ ಸ್ವಲ್ಪ ನಿಂತು ರಾಮುರಾಯನು ಅಂದ: "ನೀವು ಮಾತಾಡೇತಿ, ನಮ್ಮ ಮನೆಮಕ್ಕಳಿಗೆ ನಾವು ನಗುವೆವೆಂದು ತಿಳಿಯಬೇಡಿರಿ. ಕೇವಲ ನಿಮ್ಮಂತೆಯೇ ನನ್ನದಾದರೂ ಭಾವನೆಯಾಗಿತ್ತು. ಆಗ ನಾನೂ ನಿಮ್ಮಂತೆಯೇ ನಿರಾಶನಾಗಿದ್ದೆನು. ಆದರೆ ಚಿಂತೆ ಇಲ್ಲ; ಬನ್ನಿ." ರಾಮುರಾಯನು ನನ್ನ ಕೈಹಿಡಿದು ಕರೆದುಕೊಂಡು ಒಂದು ಸ್ಥಳಕ್ಕೆ ಹೋದನು.


ದಿ ನೂತನ ಆಯುರ್ವೇದ ಕಾರ್ಯಾಲಯ, ಲಿ. ವಿಜಾಪುರ

ಪೋಷಕ-ಔಷಧಿ-ಆಹಾರ

ಚ್ಯವನಪ್ರಾಶ

ರಸ-ರಕ್ತಾದಿಧಾತುಗಳನ್ನು ಪೋಷಿಸಿ, ಬುದ್ಧಿ, ಸ್ಮರಣ ಶಕ್ತಿಗಳನ್ನು ಬೆಳೆಸಿ, ಕಾರ್ಯಕ್ಷಮತೆ, ಉತ್ಸಾಹಗಳನ್ನು ಹೆಚ್ಚಿಸಿ ಶರೀರವನ್ನು ಪರಿಪುಷ್ಟವಾಗಿ ಮಾಡುವ ಉತ್ತಮ ಧಾತುಪೌಷ್ಟಿಕ ಔಷಧ.

ಹುಬ್ಬಳ್ಳಿ ಶಾಖೆ:- ಕೊಪ್ಪೀಕರರೋಡ, ಹುಬ್ಬಳ್ಳಿ



ದಮ್ಮು ನೆಟ್ಟಗಾದೀತು ಆದರೆ

ಪುರೋಹಿತ ಫಾರ್ಮಸಿಯಿಂದಲೇ



ಪುರೋಹಿತ ಫಾರ್ಮಸಿ

DR. PUROHIT PHARMACY

ಹುಬ್ಬಳ್ಳಿ ಸ್ಟಾಕಿಸ್ಟರು— [illegible]

ಮೈಸೂರಿನಲ್ಲಿ ದಿವಾಣ ಪದಕ್ಕೆ ಅರ್ಧಚಂದ್ರ !

ಒಕ್ಕೂಟ ಪ್ರಾಂತಗಳ ಗವರ್ನರರನ್ನು ಅಧ್ಯಕ್ಷನೇ ನೇಮಿಸತಕ್ಕದ್ದು

ಘಟನಾಸಮಿತಿಯಲ್ಲಿ ಮಹತ್ವದ ಚರ್ಚೆ

ಗವರ್ನರರ ನೇಮಕದ ಪ್ರಶ್ನೆ

ಕಳೆದವಾರ ಘಟನಾಸಮಿತಿಯಲ್ಲಿ ರಾಜ್ಯ ಘಟನೆಯ ಕರಡಿನ ಚರ್ಚೆ ಮುಂದೆಸಾಗಿ ಮಹತ್ವದ ಕೆಲವು ಕಲಮುಗಳು ಸ್ವೀಕೃತವಾದವು. ಹಿಂದುಸ್ಥಾನದಲ್ಲಿ ಈಗಿರುವ ೯ ಪ್ರಾಂತಗಳು ಒಕ್ಕೂಟದ ಘಟಕಗಳೆಂದು ತಿಳಿಯಲಾಗುವವೆಂಬುದಕ್ಕೆ ಒಪ್ಪಿಗೆ ದೊರೆಯಿತು. ಪ್ರತಿಯೊಂದು ಘಟಕಕ್ಕೂ ಗವರ್ನರ ಇರಬೇಕೆಂಬ ೧೨೯ ನೇ ಕಲಮಿನ ಚರ್ಚೆ ನಡೆದು ಬಂದ ತಿದ್ದುಪಡಿ ನಿರಾಕೃತವಾಗಿ ಮೂಲ ಸೂಚನೆ ಸ್ವೀಕೃತವಾಯಿತು. ಪ್ರತಿಯೊಂದು ಘಟಕದಿಂದಲೂ ಓರ್ವ ಗವರ್ನರನಿರಬೇಕೆಂಬ ಸಾಹೂ ಇವರ ತಿದ್ದುಪಡಿಯ ಮೇಲೆ ಚರ್ಚೆಯಾಗಿ ಅದೂ ನಿರಾಕೃತವಾಯಿತು. ಅನಂತರ ಗವರ್ನರರ ನೇಮಕದ ೧೫೧ ನೇ ಕಲಮಿನ ಬಗ್ಗೆ ದೀರ್ಘ ಚರ್ಚೆನಡೆಯಿತು, ಈ ಗವರ್ನರನು ಮತದಾರಸಂಘದಿಂದ ಪ್ರತ್ಯಕ್ಷ ರೀತಿಯಿಂದ ಚುನಾಯಿಸಲ್ಪಡಬೇಕು ಇಲ್ಲವೆ ಶಾಸನ ಸಭೆಗಳು ಸಾದರ ಪಡಿಸಿದ ೮ ಹೆಸರಿನ ಯಾದಿಯಲ್ಲಿಯ ಓರ್ವನನ್ನು ಒಕ್ಕೂಟದ ಅಧ್ಯಕ್ಷರು ನೇಮಿಸಬೇಕು ಎಂದು ಈ ಕಲಮಿನಲ್ಲಿ ಹೇಳಿದೆ. ಇದಕ್ಕೆ ಬಿಹಾರದ ಪ್ರಜೇಶ್ವರ ಪ್ರಸಾದರು ಘಟಕದ ಗವರ್ನರರನ್ನು ಒಕ್ಕೂಟನ ಅಧ್ಯಕ್ಷರೇ ನಾಮಕರಣ ಮಾಡಬೇಕು ಎಂದು ತಿದ್ದುಪಡಿಯನ್ನು ಮಂಡಿಸಿದರು–ಚುನಾಯಿತ ಗವರ್ನರನಿರಬೇಕೆಂದು ಈ ಮೊದಲು ಘಟನಾಸಮಿತಿಯು ತೀರ್ಮಾನಿಸಿರುವಾಗ ಈಗ ಅದಕ್ಕೆ ವಿರೋಧಕವಾಗಿ ತಿದ್ದುಪಡಿಯನ್ನು ಮಂಡಿಸಬಹುದೆ?ಎಂಬ ವಿಧಿಬಿಂದುಗೆ, ಅಧ್ಯಕ್ಷರು ಮೊದಲಿನ ನಿರ್ಣಯವನ್ನು ಬದಲಿಸುವ ಅಧಿಕಾರ ಘಟನಾಸಮಿತಿಗೆ ಇದೆಯೆಂದು ನಿರ್ಣಯ ಕೊಟ್ಟರು. ಈ ತಿದ್ದುಪಡಿಗೆ ಶ್ರೀ ಎಚ್. ವಿ. ಕಾಮತ್, ಅಲ್ಲಾಡಿ ಕೃಷ್ಣಸ್ವಾಮಿ, ಬಾಳಾಸಾಹೇಬ ಖೇರ, ಪಂಡಿತ ಜವಾಹರಲಾಲ ಮೊದಲಾದವರು ಬೆಂಬಲ ಕೊಡುತ್ತ ಭಾಷಣ ಮಾಡಿದರು. ಹಲವರು ವಿರೋಧ ಮಾಡಿದರು. ಡಾ. ಅಂಬೇಡಕರರು ಉತ್ತರ ಕೊಡುತ್ತ ಗವರ್ನರರು ಅಧ್ಯಕ್ಷನಿಯುಕ್ತರಿರಬೇಕೊ–ಇಲ್ಲವೆ ಚುನಾಯಿತರಾದವರಿರಬೇಕೊ ಎಂಬುದು ಮಹತ್ವದ ಪ್ರಶ್ನೆಯಾಗಿರದೆ ಅವರಿಗೆ ಯಾವ ಯಾವ ಅಧಿಕಾರಗಳಿರಬೇಕೆಂಬುದು ಮಹತ್ವದ್ದಾಗಿದೆಯೆಂದು ಮುಂತಾಗಿ ಹೇಳಿದ ಬಳಿಕ ಪ್ರಜೇಶ್ವರಿಯವರ ತಿದ್ದುಪಡಿ ಸ್ವೀಕೃತವಾಯಿತು. ಗವರ್ನರನ ಅಧಿಕಾರಾವಧಿ ಐದು ವರುಷಗಳದಿದ್ದು ಅಧ್ಯಕ್ಷರ ಅನುಗ್ರಹವಿರುವವರೆಗೆ ಮಾತ್ರ ಅವನು ಅಧಿಕಾರದಲ್ಲಿ ಉಳಿಯುವನು. ಅವನು ಅಧ್ಯಕ್ಷನಿಗೆ ತನ್ನ ರಾಜೀನಾಮೆಯನ್ನ ಒಪ್ಪಿಸಬಹುದು ಎಂಬ ಕಲಮಿನ ಚರ್ಚೆ ನಡೆದು ಅದು ಸ್ವೀಕೃತವಾಯಿತು— ಗವರ್ನರರಿಗೆ ವಿರಾಮವೇತನ ಕೊಡಬೇಕೆಂಬ ಸೂಚನೆ ನಿರಾಕೃತವಾಯಿತು. ದೇವರ ಹೆಸರಿನಲ್ಲಿ ಅಧಿಕಾರ ಸ್ವೀಕಾರದ ಪ್ರತಿಜ್ಞೆಯನ್ನು ತೆಗೆದುಕೊಳ್ಳಬಯಸುವವರು ಹಾಗೆ ಮಾಡ ಬಹುದೆಂಬ ಕಾಮತರ ಸೂಚನೆಯು ಸ್ವೀಕೃತವಾಯಿತು. ಗವರ್ನರನ ಅಧಿಕಾರಗಳು ಮತ್ತು ಮಂತ್ರಿಮಂಡಳದ ಅಧಿಕಾರ ಮೊದಲಾದ ಕಲಮುಗಳ ಚರ್ಚೆಯಾಗಿ ಅದು ಸ್ವೀಕೃತವಾಯಿತು. ಅಡಿಟರ ಜನರಲ್ಲರ ಅಧಿಕಾರ ಮತ್ತು ಕರ್ತವ್ಯದ ಬಗ್ಗೆ ಇದ್ದ ಕಲಮುಗಳ ಚರ್ಚೆ ನಡೆದು ಹಿಂದುಸ್ಥಾನ ಸರಕಾರದ ಕಾಗದ ಪತ್ರಗಳನ್ನಲ್ಲದೆ ಸರಕಾರವು ನೇಮಿಸಿದ ಯಾವದೇ ಖಾತೆಯ ಕಾಗದಪತ್ರಗಳನ್ನೂ ಪರಿಶೀಲಿಸುವ ಅಧಿಕಾರವಿರಬೇಕೆಂಬ ಪಂಡಿತ ಕುಂಜರು ಇವರ ತಿದ್ದುಪಡಿಯೊಂದಿಗೆ ಅದು ಸ್ವೀಕೃತವಾಯಿತು.

ಗವರ್ನರನ ಅಧಿಕಾರಕ್ಕೆ ಸಂಬಂಧಿಸಿದ ಕಲಮುಗಳು ಸ್ವೀಕೃತವಾದ ಬಳಿಕ ಗವರ್ನರನ ಸಲಹೆಗೆಮಂತ್ರಿಮಂಡಳವಿರತಕ್ಕದ್ದು. ಆದರೂ ಗವರ್ನರರಿಗೆ ಕೆಲ ವಿಶೇಷಾಧಿಕಾರಗಳಿರಬೇಕು ಎಂಬ ಕಲಮುಗಳುಸ್ವೀಕೃತವಾದವು. ಗವರ್ನರನು ಮುಖ್ಯ ಮಂತ್ರಿಯನ್ನು ನೇಮಿಸಿ ಅವನ ಸಲಹೆಯ ಮೇರೆಗೆ ಉಳಿದ ಮಂತ್ರಿಗಳನ್ನು ಗವರ್ನರನೆ ನೇಮಿಸಬೇಕು ಎಂಬ ಕಲಮೂ ಸ್ವೀಕೃತವಾಯಿತು. ಗವರ್ನರನ ಅನುಗ್ರಹವಿರುವ ವರೆಗೆ ಮಾತ್ರ ಇವರು ಅಧಿಕಾರದಲ್ಲಿ ಉಳಿಯುವರು. ಇದಕ್ಕೂ ಮೊದಲು ಸುಪ್ರೀಮ ಕೋರ್ಟಿನ ರಚನೆ ಮೊದಲಾದ ಕಲಮುಗಳು ಸ್ವೀಕೃತವಾದವು.

ಮೈಸೂರ ಪ್ರಜಾಪ್ರತಿನಿಧಿ ಸಭೆ

ಮೈಸೂರ ಪ್ರಜಾಪ್ರತಿನಿಧಿ ಸಭೆಯು ಬೆಂಗಳೂರಿನಲ್ಲಿ ಕಳೆದ ೩೦ ನೇ ತಾರೀಖಿನಿಂದ ಪ್ರಾರಂಭವಾಗಿದೆ. ದಿವಾಣ ಸರ್ ರಾಮಸ್ವಾಮಿ ಮುದ್ಲಿಯಾರರು ಸಂಸ್ಥಾನ ಸರಕಾರದ ಬರುವ ವರ್ಷದ ಮುಂಗಡ ಪತ್ರಿಕೆಯನ್ನು ಮಂಡಿಸುತ್ತ ಮಹತ್ವದ ಭಾಷಣವನ್ನು ಮಾಡಿದರು. ಅಗಸ್ಟ ೬ ರಿಂದ ಸಂಸ್ಥಾನದಲ್ಲಿಯ ದಿವಾಣರ ಸ್ಥಾನವು ರದ್ದಾಗುವದು ಎಂದು ಅವರು ಸಾರಿದಾಗ ಸಭಿಕರು ಸಂಭ್ರಮದಿಂದ ಅದನ್ನು ಸ್ವಾಗತಿಸಿದರು. ಸದ್ಯದ ದಿವಾಣರು ಅಂದು ನಿವೃತ್ತರಾಗುವರು. ಬರುವ ವರ್ಷದ ಮುಂಗಡ ಪತ್ರಿಕೆಯಲ್ಲಿಯ ಮುಖ್ಯ ಅಂಶಗಳು ಇಂತಿವೆ–ಹೊಸ ವರುಷದಲ್ಲಿ ಆದಾಯವು ೧೩೨೧.೪೧ ಲಕ್ಷ ರೂಪಾಯಿ ಇದ್ದು ವೆಚ್ಚವು ೧೪೧೭.೪೮ ರೂಪಾಯಿಗಳಿಗೇರುವದೆಂದು ಅಂದಾಜು. ಕಾದಿಟ್ಟ ನಿಧಿಯೊಳಗಿಂದ ೧೩೬.೫೮ ಲಕ್ಷ ರೂಪಾಯಿಗಳನ್ನು ವೆಚ್ಚಕ್ಕೆ ತೆಗೆದುಕೊಳ್ಳುವುದರಿಂದ ಕೊರತೆಯು ೯.೪೫ ಲಕ್ಷಕ್ಕೆ ಇಳಿಯುವದು. ಪೆಟ್ರೋಲ ಹಾಗು ಮೋಟಾರುಗಳಿಗೆಬೇಕಾಗುವ ಉಳಿದವಿಷ್ಣಗಳ ಮೇಲೆ ಕರವನ್ನು ಹೇರಿ ಈ ಕೊರತೆಯನ್ನು ತುಂಬಿಕೊಳ್ಳಬೇಕೆಂದು ಯೋಜಿಸಲಾಗಿವೆ. ಉತ್ಪಾದಕ ಯೋಜನೆಗಳಿಗಾಗಿ ಹೊಸ ವರುಷದಲ್ಲಿ ೧೦ ಕೋಟಿ ರೂಪಾಯಿ ಮಂಜೂರು ಮಾಡಲಾಗುವದು. ಸೆಕ್ಯುರಿಟಿಗಳನ್ನು ಮಾರಿ ಇಲ್ಲವೆ ಸಾಲ ತೆಗೆದು ಇದನ್ನು ಪೂರಯಿಸಲಾಗುವದು. ಸಂಸ್ಥಾನದಲ್ಲಿಯ ಅರ್ಧದಷ್ಟು ಪ್ರದೇಶವನ್ನು ನಿರ್ಮಾದಕ ಮಾಡುವ ಯೋಜನೆಯನ್ನು ಕೈಕೊಂಡರೂ ಸಂಸ್ಥಾನಗಳಿಗೆ ಹಾನಿಯಾಗುವದಿಲ್ಲ. ಚಿನ್ನದ ಮೇಲಿನ ಕರವನ್ನು ರದ್ದು ಮಾಡುವದರಿಂದ ೩೦-೪೦ ಲಕ್ಷ ರೂ. ಹಾನಿಯಾಗುವದು. ಶಿಕ್ಷಣ ಖಾತೆಗೆ ಇಷ್ಟು ಉತ್ಪನ್ನದಲ್ಲಿ ೧೦೦ ಕ್ಕೆ ೨೭ ರಷ್ಟು ಪ್ರತ್ಯೇಕವಾಗಿ ಇರಿಸಲಾಗಿದೆ.

ಮೈಸೂರು ಸಂಸ್ಥಾನದ ದಿವಾಣರ ಸ್ಥಾನವು ಅನಸ್ಟದಿಂದ ರದ್ದಾಗುತಿದ್ದರೆ ಶಾಸನ ಸಭೆಗೆ ಚುನಾಯಿತ ಅಧ್ಯಕ್ಷನನ್ನು ಆರಿಸಿಕೊಳ್ಳುವ ಹಕ್ಕು ಈ ಸಲದ ಅಧಿವೇಶನದಿಂದಲೆ ಸದಸ್ಯರಿಗೆ ಬಂದಿತು. ಅದಕ್ಕನುಸಾರವಾಗಿ ಅಧ್ಯಕ್ಷರಾಯ್ಕೆ ನಡೆದು ಕಾಂಗ್ರೆಸಪಕ್ಷದಶ್ರೀ ವಿ. ವೆಂಕಟಪ್ಪನವರು ೨೦೨ ಮತಗಳನ್ನು ದೊರಕಿಸಿ ವಿಜಯಿಗಳಾದರು. ಪ್ರತಿಸ್ಪರ್ಧಿಗಳಾಗಿದ್ದ ಎಸ್ ಸಿ ಮಲ್ಲಯ್ಯನವರಿಗೆ ೮೦ ಮತಗಳು ಬಿದ್ದವು.

ಹೊಸದಾಗಿ ಚುನಾಯಿಸಲ್ಪಟ್ಟ ಅಧ್ಯಕ್ಷರನ್ನು ಆಸನಾರೂಢಮಾಡುವ ಸಮಾರಂಭವು ೩೧ ನೇ ತಾರೀಕಿಗೆ ಜರುಗಿತು. ದಿವಾಣ ಸರ್ ಅರ್ಕಾಟ ರಾಮಸ್ವಾಮಿ ಮುದ್ಲಿಯಾರರು ಈ ಆಯ್ಕೆಗೆ ಮಹಾರಾಜರ ಅನುಮತಿ ದೊರೆತಿದೆಯೆಂದು ತಿಳಿಸಿ ಶ್ರೀ ವೆಂಕಟಪ್ಪನವರನ್ನು ಬರಮಾಡಿಕೊಂಡು ಅಧ್ಯಕ್ಷಸ್ಥಾನದಲ್ಲಿ ಕುಳ್ಳಿರಿಸಿದರು. ಸಭಿಕರು ಹರ್ಷೋದ್ಗಾರಗಳನ್ನು ಪ್ರದರ್ಶಿಸಿದ ಅನಂತರ ಮುಖ್ಯ ಮಂತ್ರಿಗಳಾದ ಶ್ರೀ ಚೆಂಗಲರಾಯ ರೆಡ್ಡಿಯವರು ಅಧ್ಯಕ್ಷರನ್ನಭಿನಂದಿಸಿ ಭಾಷಣ ಮಾಡಿದ ಮೇಲೆ ಸರ್ ರಾಮಸ್ವಾಮಿಯವರು ಅಧ್ಯಕ್ಷರನ್ನಭಿನಂದಿಸುತ್ತ ತಮಗೆ ಮೈಸೂರಿನೊಡನೆ ಬಂದ ಈ ನಿಕಟ ಸಂಬಧವನ್ನು ತಾವು ಎಷ್ಟೇ ದೂರ ಇದ್ದರೂ ಮರೆಯಲಾರವೆಂದು ಮುಂತಾಗಿ ಹೇಳಿದರು. ಅನಂತರ ವೆಂಕಟಪ್ಪನವರು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತ ನಿಷ್ಪಕ್ಷಪಾತ ರೀತಿಯಿಂದ ತಮ್ಮ ಕರ್ತವ್ಯವನ್ನು ಮಾಡುತ್ತ ಹೋಗುವದಾಗಿ ಆಶ್ವಾಸಿಸಿದರು.

ಒಂದನೇ ತಾರೀಕು ಹೊಸ ಅಧ್ಯಕ್ಷ ಶ್ರೀ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಕಾರ್ಯಕಲಾಪಗಳು ಮುಂದೆ ಸಾಗಿದವು. ಪ್ರಜಾಮಂಡಲ ಪಕ್ಷದ ಧುರೀಣರಾದ ಶ್ರೀ ಎಚ್. ಲಿಂಗಪ್ಪನವರು ತಂದಿದ್ದ ನಿಲುವಳಿ ಸೂಚನೆಯನ್ನು ಅಧ್ಯಕ್ಷರು ನಿರಾಕರಿಸಿದ್ದರಿಂದ ಪ್ರಜಾಮಂಡಲದ ಸದಸ್ಯರು ಸಭಾತ್ಯಾಗಮಾಡಿದರು. ಪ್ರಜಾಪ್ರತಿನಿಧಿ ಸಭೆಯ ಒಟ್ಟು ಸದಸ್ಯರ ಸಂಖ್ಯೆ ೩೧೦ ಇದ್ದು ಪ್ರಜಾಮಂಡಲ ಪಕ್ಷದ ಸದಸ್ಯರ ಸಂಖ್ಯೆ ಕೇವಲ ೨೫ ಇದೆ. ಸದಸ್ಯರಿಗೆ ಸಾಕಷ್ಟು ಅವಧಿಯನ್ನು ಕೊಡದೆ ಅಧ್ಯಕ್ಷರ ಆಯ್ಕೆಯಾದ್ದರಿಂದ ಉದ್ಭವಿಸಿದ ಪರಿಸ್ಥಿತಿಯನ್ನು ಚರ್ಚಿಸಬೇಕೆಂದು ಪ್ರಜಾಮಂಡಲ ಪಕ್ಷದವರು ಮೇಲೆ ಉಲ್ಲೇಖಿಸಿದ ನಿಲುವಳಿ ಸೂಚನೆಯನ್ನು ತಂದಿದ್ದರು. ಸೋಮವಾರ ದಿನ ಸದಸ್ಯರ ಹಕ್ಕಿನ ಗೊತ್ತುವಳಿಯ ವಿಚಾರ ನಡೆದಾಗ ಈ ಬಗ್ಗೆಯೂ ವಿಚಾರವಾಗಿದೆಯೆಂದು ಹೇಳಿ ಅಧ್ಯಕ್ಷರು ನಿಲುವಳಿ ಸೂಚನೆಯನ್ನು ನಿರಾಕರಿಸಿದರು.

ಕಾಂಗ್ರೆಸ ಪಕ್ಷದ ಉಪಧುರೀಣರಾಗಿ ಆರಿಸಿಬಂದ ಶ್ರೀ ಕೆ. ಹನುಮಂತಯ್ಯನವರನ್ನು ಉಪಮುಖ್ಯಪ್ರಧಾನರನ್ನಾಗಿ ನೇಮಿಸಬೇಕೆಂಬ ಬಗ್ಗೆ ಕಾಂಗ್ರೆಸಪಕ್ಷದಲ್ಲಿ ತೀವ್ರತಿಕ್ಕಾಟ ನಡೆದಿದೆಯೆಂದು ತಿಳಿಯುತ್ತದೆ. ಜಿನಿವಾಕ್ಕೆ ತೆರಳಲಿದ್ದ ಶ್ರೀ ಕೆ. ಟಿ. ಭಾಷ್ಯಂ ಇವರು ತಮ್ಮ ಪ್ರವಾಸವನ್ನು ಮುಂದಕ್ಕೆ ಹಾಕಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ನೋಡಿಕೊಳ್ಳಬೇಕೆಂಬ ಪ್ರಯತ್ನಗಳೂ ನಡೆದಿವೆ.

ಶಿಷ್ಟಮಂಡಲದ ಮನವಿ


ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ಶಿಷ್ಟಮಂಡಲವು ಕಾಂಗ್ರೆಸ ವರಿಷ್ಠರನ್ನು ಕರ್ನಾಟಕ ಸ್ವತಂತ್ರ ಪ್ರಾಂತ ರಚನೆಯ ಸಂಬಂಧದಲ್ಲಿ ಕಂಡು ಅವರಿಗೊಂದು ಮನವಿಯನ್ನು ಸಮರ್ಪಿಸಿದೆಯಷ್ಟೆ. ಆ ಮನವಿಯನ್ನೀಗಪ್ರಸಿದ್ಧಿಗೆಕೊಟ್ಟದ್ದು ಅವರಮುಖ್ಯಾಂಶಗಳು ಇಂತಿವೆ. ಸಾಮಾನ್ಯವಾಗಿ ಭಾಷಾನ್ವಯ ಪ್ರಾಂತ ರಚನೆಯ ಮತ್ತು ವಿಶೇಷತಃ ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ಕಾಂಗ್ರೆಸ್ಸು ೧೯೨೧ ರಿಂದ ಅನೇಕ ಸಂದರ್ಭಗಳಲ್ಲಿ ಆಶ್ವಾಸನ ಕೊಡುತ್ತ ಬಂದಿದೆ. ಇಷ್ಟೆ ಅಲ್ಲ, ತನ್ನ ಕಾರ್ಯಕಲಾಪಗಳಲ್ಲಿ ಸ್ವತಂತ್ರ ಪ್ರಾಂತವನ್ನೂ ರಚಿಸಿಕೊಂಡಿದೆ. ಕಾಂಗ್ರೆಸ ವರಿಷ್ಠರೂ ಆಗಾಗ ಈ ಬಗ್ಗೆ ಸ್ಪಷ್ಟೀಕರಣ ಮಾಡುತ್ತ ತಪ್ಪು ತಿಳಿವಳಿಕೆಗಳನ್ನು ದೂರ ಮಾಡುತ್ತ ಬಂದಿದ್ದಾರೆ. ಇದನ್ನೆಲ್ಲ ನೋಡಿ ಕರ್ನಾಟಕಕ್ಕೆ ಯಾವದೇಬಗೆಯ ಅನ್ಯಾಯವಾಗಲಿಕ್ಕಿಲ್ಲೆಂದು ನಂಬಿದ್ದೆವು. ಆದರೆ ಘಟನಾ ಸಮಿತಿಯು ನೇಮಿಸಿದ ದರ್ ಸಮಿತಿ ನಮಗೆ ಮೊದಲ ಸಲ ನಿರಾಶೆಯ ಹೊಡೆತವನ್ನು ಕೊಟ್ಟಿತು. ಸಮಗ್ರ ಕರ್ನಾಟಕವು ಅದನ್ನು ವಿರೋಧಿಸಿದ್ದರಿಂದ ಜಯಪುರ ಕಾಂಗ್ರೆಸ್ಸು ತ್ರಿಮೂರ್ತಿ ಸಮಿತಿಯನ್ನು ನೇಮಿಸಿತು. ಅವರ ವರದಿಯೂ ಗಾಯದ ಮೇಲೆ ಬರೆಕೊಟ್ಟಂತಾಗಿದೆ. ಈ ವರದಿ ಹೊರಬಿದ್ದ ಬಳಿಕ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯು ಅದನ್ನು ಪೂರ್ಣವಾಗಿ ವಿಚಾರಮಾಡಿ ನಿರ್ಣಯ ಕೈಕೊಂಡಿದೆ. ಕರ್ನಾಟಕ ಪ್ರಾಂತರಚನೆಯನ್ನು ಇನ್ನು ಮುಂದೂಡುವದು ಅನ್ಯಾಯದ್ದು. ಇದರಿಂದ ಕಾಂಗ್ರೆಸ್ಸು ವಚನಭಂಗ ಮಾಡಿದಂತಾಗುವದೆಂದು ನಾವು ಹೇಳಬಯಸುತ್ತೇವೆ. ಜನತೆಯಲ್ಲಿ ಇದರಿಂದ ತೀವ್ರ ಅಸಮಾಧಾನವಾಗಿದೆ. ಹೀಗೆಯೆ ಇದನ್ನು ಬೆಳೆಯಗೊಟ್ಟರೆ ಕಾಂಗ್ರೆಸ್ಸಿನ ಗೌರವಕ್ಕೆ ಭಂಗ ಬರಬಹುದು. ಕೊನೆಯ ನಿರ್ಣಯ ಕೈಕೊಳ್ಳುವ ಮೊದಲು ಶಿಷ್ಟಮಂಡಲವನ್ನು ಕಳಿಸಬೇಕೆಂದು ಗೊತ್ತಾದ್ದರ ಮೇರೆಗೆ ನಾವೀಗ ಬಂದಿರುವೆವು. ಈಗಾಗಲೆ ಕಾಂಗ್ರೆಸ್ಸಿಗೆ ವಿರೋಧಕವಾಗಿ ಅನೇಕ ಪಕ್ಷಪಂಗಡಗಳು ಕೆಲಸ ಮಾಡುತಿವೆ. ನಮ್ಮ ಬೇಡಿಕೆಯನ್ನು ಮುಂದಕ್ಕೆ ಹಾಕಿದರೆ ಇಂಥ ವಿರೋಧಿ ಪಕ್ಷಗಳಿಗೆ ನಾವೇ ಆಸ್ಪದವನ್ನು ಮಾಡಿಕೊಟ್ಟಂತಾಗುವದು. ಇದೆಲ್ಲ ವಿಷಯವನ್ನು ಸೂಕ್ಷ್ಮವಾಗಿ ತಿಳಿದುಕೊಂಡು ಕಾಂಗ್ರೆಸ ಸಮಿತಿಯವರು ಶಿಷ್ಟಮಂಡಳದ ಬೇಡಿಕೆಗಳನ್ನು ಪೂರ್ಣವಾಗಿ ವಿಚಾರಮಾಡಿ ಕರ್ನಾಟಕ ಪ್ರಾಂತ ನಿರ್ಮಾಣದ ಬಗ್ಗೆ ಸ್ಪಷ್ಟವಾದ ಆಶ್ವಾಸನವನ್ನು ಕೊಡಬೇಕು. ಈ ಹೊಸ ಘಟನೆಯಲ್ಲಿ ಕರ್ನಾಟಕದ ನಾಮನಿರ್ದೇಶಮಾಡಿ ಅದನ್ನು ಕಾರ್ಯರೂಪಕ್ಕಿಳಿಸಲು ತಕ್ಕ ಏರ್ಪಾಡುಮಾಡುವದನ್ನಾದರೂ ಕನಿಷ್ಠ ಪಕ್ಷಕ್ಕೆ ಮಾಡಬೇಕೆಂದು ಸೂಚಿಸುತ್ತೇವೆ ಎಂದು ಮುಂತಾಗಿ ಮನವಿಯಲ್ಲಿ ಕೇಳಿಕೊಳ್ಳಲಾಗಿದೆ. ಸಮಿತಿಯು ಒಪ್ಪಿಸಿದ ಮನವಿಯು ಸುಸ್ಪಷ್ಟವಾಗಿದ್ದು ಕಾಂಗ್ರೆಸು ಸೂಕ್ತವಾದ ಕ್ರಮ ಕೈಕೊಳ್ಳುವದೆಂದು ಆಶಿಸುತ್ತೇವೆ.

ಕೊಚ್ಚಿ—ತಿರುವಾಂಕೂರು ಒಕ್ಕೂಟ

ದಕ್ಷಿಣದಲ್ಲಿಯ ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳ ಒಕ್ಕೂಟದ ಪ್ರಶ್ನೆ ಬಹಳ ದಿನಗಳಿಂದ ಸಂಸ್ಥಾನ ಖಾತೆಯು ತಲೆ ತಿನ್ನುತಿದ್ದಿತು. ತಿರುವಾಂಕೂರಿನ ಅರಸರು ಪದ್ಮನಾಭದೇವರ ಪ್ರತಿನಿಧಿ ತಾವೆಂದು ತಮಗೆ ನೇರವಾದ ಅಧಿಕಾರಗಳಿಲ್ಲೆಂದೂ ಮುಂತಾಗಿ ಹೇಳಹತ್ತಿದ್ದರಿಂದ ಸ್ವಲ್ಪ ತಡೆಯುಂಟಾಗಿದ್ದಿತು. ಆದರೀಗ ಆ ಎರಡೂ ಸಂಸ್ಥಾನಗಳ ಒಕ್ಕೂಟ ಸ್ಥಾಪನೆ ಬರುವ ಜುಲೈ ಒಂದಕ್ಕೆ ಆಗುವದಿದ್ದು, ಸರದಾರ ವಲ್ಲಭಭಾಯಿ ಪಟೇಲರೇ ಅದರ ಉದ್ಘಾಟನೆಗೆ ಬರಲಿರುವರೆಂದು ತಿಳಿಯುತ್ತದೆ. ಸಂಸ್ಥಾನ ಖಾತೆಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್ನರು ಈ ಒಕ್ಕೂಟದ ಸಂಬಂಧದಲ್ಲಿ ಮಾತನಾಡುತ್ತ ಒಕ್ಕೂಟ ರಚನೆಯ ಯಾದಿಯಲ್ಲಿ ಈ ಸಂಸ್ಥಾನಗಳಲ್ಲೂ ಕೊನೆಯವೆಂದೂ ಇನ್ನಾವ ಸಂಸ್ಥಾನಗಳೂ ಒಕ್ಕೂಟ ರಚನೆಯ ವಿಚಾರವಿಲ್ಲದೆಂದೂ ಸಾರಿದರು. ಈ ಹೊಸ ಒಕ್ಕೂಟದ ಕ್ಷೇತ್ರ ಸುಮಾರು ೯ ಸಾವಿರ ಚದರ ಮೈಲಿಗಿಂತಲೂ ಸ್ವಲ್ಪ ಹೆಚ್ಚಿಗಿದ್ದು ಜನಸಂಖ್ಯೆ ೮ ಲಕ್ಷದಷ್ಟಿದೆ ವಾರ್ಷಿಕ ಉತ್ಪನ್ನವು ೧೦ ಕೋಟಿ ರೂಪಾಯಿ ಇರುವದು. ಈ ಒಕ್ಕೂಟ ರಚನೆ ಭಾಷಾನ್ವಯ ಪ್ರಾಂತ ರಚನೆಯ ದೃಷ್ಟಿಯಿಂದ ಮಹತ್ವದ್ದಾಗಿದೆ. ಸ್ವತಂತ್ರ ಸ್ವಾಯತ್ತ ಕೇರಳ ಪ್ರಾಂತವನ್ನು ರಚಿಸಿ ಕೊಡಬೇಕೆಂಬ ಬೇಡಿಕೆ ಬಹಳ ದಿನಗಳಿಂದ ಇತ್ತು. ಇನ್ನು ಜುಲೈಯಿಂದ ಸ್ಥಾಪಿತವಾಗುವ ಈಒಕ್ಕೂಟದಿಂದ ಅದು ಕಾರ್ಯರೂಪದಲ್ಲಿಬರಲು ಅವಕಾಶ ದೊರೆತಂತಾಗಿದೆ.

✻ ತುಮಲುಕ ಸಬ್ ಡಿವ್ಹಿಜನದ ಒಂದು ಹಳ್ಳಿಯಲ್ಲಿ ಆಹಾರದಲ್ಲಿ ವಿಷ ಮಿಶ್ರಿತವಾಗಿದ್ದರಿಂದ ೧೨ ಜನರು ಸತ್ತಿರುವರಲ್ಲದೆ ಕೆಲವರು ಹಾಸಿಗೆ ಹಿಡಿದಿರುವರು.

೩೦೦ ರೂಪಾಯಿ ಪುಕ್ಕಟೆ ಇನಾಮು



ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದುಃಖಿ · ಹಾಗು ನಿರಾಶರಾಗಿರುವವರು ಒಮ್ಮೆ ನಮ್ಮ ಅಸಲಿ ಮಹಾಕಾಳಿ ಯಂತ್ರ (ತಾಯಿತ)ವನ್ನು ಧರಿಸಿ ತಮ್ಮ ಆಶೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಬಹುದು. ಈ ಯಂತ್ರವನ್ನು ನಿಮ್ಮ ಹತ್ತರ ಇಟ್ಟುಕೊಳ್ಳುವದರಿಂದ, ನೀವು ಮನಸ್ಸಿನಲ್ಲಿ ಯಾರನ್ನು ನೆನಸುವಿರೊ, ಅವರು ಎಂಥ ಕಲ್ಲೆದೆಯವರು, ಅಭಿಮಾನಿಗಳು ಹಾಗೂ ದುರ್ಲಭರು ಇದ್ದರೂ ನಿಮ್ಮನ್ನು ಕಾಣಲು ಅತ್ಯಂತ ಆತುರರಾಗುವರು. ಮತ್ತು ನೀವು ಅವರ ಹತ್ತರ ಹೋದ ಕೂಡಲೇ ನಿಮ್ಮ ಮೇಲೆ ಮೋಹಗೊಂಡು ಪ್ರೀತಿಸಹತ್ತುವರು. ಕಳಕೊಂಡ ಮಾಲಿನ ಪತ್ತೆ ಹಚ್ಚುವದಕ್ಕೆ, ಮೃತಾತ್ಮದ ಕೂಡ ಮಾತನಾಡುವದು ಮುಂತಾದವುಗಳ ಬಗ್ಗೆ ನೀವು ಕೇಳಿದ ಪ್ರಶ್ನೆಗೆ ಉತ್ತರ ಸಿಗುವದು. ನೀವು ಸಾವಿರಸಾರೆ ಯತ್ನಿಸಿದರೂ ಫಲಿಸದೆ ಉಳಿದ ನಿಮ್ಮ ಇಷ್ಟಾರ್ಥಗಳೂ ಸಹ ಈ ಮಹಾಕಾಳಿ ತಾಯಿತದಿಂದ ಕೆಲವೇ ದಿವಸಗಳಲ್ಲಿ ಪೂರ್ತಗೊಳ್ಳುವವು. ಕಿಮ್ಮತ್ತು ಒಂದು ತಾಯಿತಕ್ಕೆ ರೂ. ೧-೪-೦ ಮೂರು ತಾಯಿತಗಳಿಗೆ ರೂ. ೩-೮-೦. ಮಾತ್ರ. ಅತಿ ತೀವ್ರ ಪರಿಣಾಮಕಾರಿಯಾದ ಸ್ಪೇಶಲ ಮಹಾಕಾಳಿ ತಾಯಿತಕ್ಕೆ ರೂ. ೩-೧೫-೦ ಒಂದರಿಂದ ಮೂರು ತಾಯಿತಗಳ ವರೆಗೆ ಕಳಿಸುವ ಅಂಚೆವೆಚ್ಚ ರೂ. ೧-೨-೦ ತಾಯಿತದಿಂದ ಲಾಭವಾಗದೆ ಇದ್ದರೆ, ಕಿಮ್ಮತ್ತು ತಿರುಗಿ ಕೊಡುವೆವು. ಅದರಲ್ಲಿ ದೋಷ ಸಿದ್ಧಮಾಡಿ ಕೊಟ್ಟವರಿಗೆ ರೂ. ೩೦೦ ರೋಖ ಇನಾಮು ಕೊಡಲಾಗುವದು. ತರಿಸಿಕೊಳ್ಳಲು ಬರೆಯಿರಿ:–

Prof: Bengal Mesmerism House (K.V. H.) Hoshiarpur

ಇಂದಿನ ಭಾರತದ ಅರ್ಥಸಂಕಟ
ಮತ್ತು
ಅದರ ಮುಂದಡಿ

ಲೇ:— ಶ್ರೀ ಗಜಾನನ ಶರ್ಮಾ, ಕಲ್ಲಾಳೆ, ಕಾಶೀ ವಿದ್ಯಾಪೀಠ

ಭಾರತವು ರಾಜಕೀಯ ದೃಷ್ಟಿಯಿಂದ ಸ್ವತಂತ್ರವಾದರೂ ಆರ್ಥಿಕ ದೃಷ್ಟಿಯಿಂದ ಸ್ವತಂತ್ರವಾಗಿಲ್ಲವೆಂಬದು ಎಲ್ಲರಿಗೂ ತಿಳಿದ ವಿಷಯ. ಸಹನೆಯುಳ್ಳವರು ಭಾರತ ಸರಕಾರದ "ಸುರಾಜ್ಯದ" ಭವಿಷ್ಯತ್ತಿನ ಕಲ್ಪನೆಯಲ್ಲಿ ವಿಶ್ವಾಸವಿಟ್ಟು ಇಂದಿನ ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಭಾರತದ ಆರ್ಥಿಕ ಸುಧಾರಣೆಯಲ್ಲಿ ಆಮೂಲ ಪರಿವರ್ತನೆಯಾಗಬೇಕೆನ್ನುವವರು ವಿವಿಧ ಪಕ್ಷಸಂಘಟನಗಳ ಮುಖಾಂತರ ಇಂದಿನ ಹಿಂದ ಸರಕಾರವನ್ನು 'ಅಸಮರ್ಥ, ನಿಷ್ಪ್ರಯೋಜಕ'ವೆಂದು ದೂರುತ್ತಿದ್ದಾರೆ. ಇನ್ನು ಕೆಲವರು ಸರಕಾರದ ಕೆಲಸಗಳಲ್ಲಿ ವಿಶ್ವಾಸವಿಟ್ಟು ಮನಗೊಟ್ಟು ನೆರವಾಗುತ್ತಿದ್ದಾರೆ. ಆದರೆ ಇದರಿಂದ ಜನತೆಗೇನು? ಅದಕ್ಕೆ ಕೂಡಲೇ ಅನ್ನಬೇಕು, ಬಟ್ಟೆಬೇಕು, ಶಿಕ್ಷಣ ಬೇಕು, ಜೀವನ ಮಟ್ಟ ಉನ್ನತವಾಗಬೇಕು, ಅದುಬೇಕು, ಇದುಬೇಕು, ಎಲ್ಲವೂ ಆಗಬೇಕು. ಈ "ಬೇಕು"ಗಳ ಬೇಡಿಕೆ ಭಾರತದ ಮೂಲೆಮೂಲೆಗಳಿಂದ ದಿನದಿನವೂ ಹೆಚ್ಚುತ್ತಿದೆ. ಬೇಡಿಕೆ ಸಹಜವೂ ಆಗಿದೆ. ಅದಕ್ಕಲ್ಲವೇ ಎಷ್ಟೋ ದಶಾಬ್ದಗಳಿಂದ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದುದು? ಜನತೆಯು ಸರಕಾರವು ಭಾರತದ ಏಳ್ಗೆಗಾಗಿ ಯಾವ ಕಾರ್ಯ ಕೈಕೊಳ್ಳುತ್ತಿದೆ?

ಭಾರತವನ್ನು ಇನ್ನುಳಿದ ಮುಂದುವರಿದ ರಾಷ್ಟ್ರಗಳ ಮಟ್ಟಕ್ಕೊಯ್ಯುವ ಎಲ್ಲ ಕಾರ್ಯಗಳನ್ನೂ ಭಾರತ ಸರಕಾರವು ಕೈಕೊಂಡಿದೆ, ಕೈಕೊಳ್ಳುತ್ತಿದೆ. ನೀರಾವರಿಯ ಯೋಜನೆ, ವಿದ್ಯುಚ್ಛಕ್ತಿ ಮತ್ತು ಔದ್ಯಮಿಕ ಪ್ರಗತಿಯ ಯೋಜನೆಗಳು, ಕೃಷಿ ಸುಧಾರಣೆಯ ಕೆಲಸ, ದೇಶದ ತುಂಬೆಲ್ಲ ಯಾತಾಯಾತವನ್ನು ವ್ಯವಸ್ಥೆಪಡಿಸುವ ಯೋಜನೆ ಮುಂತಾದವು ಹೇಳಿಕೊಳ್ಳುವಂಥವು. ಎರಡು ವರ್ಷಗಳಿಂದ ಸತತ ಪ್ರಯತ್ನ ನಡೆಸುತ್ತಿದ್ದರೂ ಜನತೆಯ "ಬೇಕು"ಗಳನ್ನು ಸ್ವಲ್ಪಾಂಶವಾದರೂ ಕಡಿಮೆ ಮಾಡಲು ಸರಕಾರವು ಶಕ್ತವಾಗಿಲ್ಲ. ಅದಕ್ಕೆ ಕಾರಣ ಬಂಡವಾಳದ ಕೊರತೆ. ಭಾರತ ಸರಕಾರದ ಆರ್ಥಿಕ ಒಳಗುಟ್ಟನ್ನರಿಯದೆ ಅದಕ್ಕೆ ದೋಷಕೊಡುವ ಹವ್ಯಾಸಕ್ಕೆ ಹೋಗುವದೊಳಿತಲ್ಲ. ದೇಶದ ಆರ್ಥಿಕ ಸ್ಥಿತಿ ಹೇಗಿದೆ ಎಂಬದನ್ನು ವಿಚಾರಿಸೋಣ.

ಯಾವದೇ ದೇಶದ ಸರಕಾರದ ಅಂತರಿಕ ಆರ್ಥಿಕ ಸಾಧನ ಮೂರು ಪ್ರಕಾರದ್ದಿದೆ- ಕರ ವೃದ್ಧಿ ಋಣವೃದ್ಧಿ, ನಾಣ್ಯ ಅಥವಾ ನೋಟುಗಳ ವೃದ್ಧಿ. ಈ ಮೂರೂ ತರದ ಸಾಧನಗಳಿಂದ ಸರಕಾರವು ತನ್ನ ಬಂಡವಾಳವನ್ನು ಹೆಚ್ಚಿಸಿಕೊಳ್ಳುತ್ತದೆ ಆದರೆ ಇವುಗಳ ವೃದ್ಧಿಗಾದರೂ ಒಂದು ಮೇರೆಯಿದೆ. ಈ ಮೂರೂ ಪ್ರಕಾರಗಳಿಂದ ಹಣವೆತ್ತುವದರಲ್ಲಿ ಸರಕಾರಕ್ಕೆ ಯಶಸ್ಸು ಸಿಗುವದು ಅದರ ಬಗ್ಗೆ ಜನತೆಯಲ್ಲಿ ದೃಢವಿಶ್ವಾಸ, ಜನರಲ್ಲಿ ಹಣದ ಉಳಿತಾಯ ಹಾಗೂ ದೇಶದ ಉತ್ಪಾದನದಲ್ಲಿ ವೃದ್ಧಿಯಾದಾಗ ಮಾತ್ರ. ಭಾರತದಲ್ಲಿ ಇವು ಯಾವ ಸ್ಥಿತಿಯಲ್ಲಿವೆ?

ಕರವೃದ್ಧಿ

ಭಾರತವು ಕೃಷಿಪ್ರಧಾನವಾದ ದೇಶವಾದರೂ ಇಲ್ಲಿಯ ಜೀವನೋಪಯೋಗಿ ಆಹಾರ ಧಾನ್ಯಗಳು ಇಲ್ಲಿಯ ಜನತೆಗೆ ಸಾಕಷ್ಟಾಗುವದಿಲ್ಲ. ಉದ್ಯಮ ವ್ಯವಸಾಯಗಳಲ್ಲಂತೂ ಇದರ ಸ್ಥಾನ ನಿಮ್ನ ತರಗತಿಯದು. ಅಂದ ಮೇಲೆ ಇಲ್ಲಿಯ ಜನತೆಯ ಜೀವನದ ಮಟ್ಟ ವೆಂತು ಉನ್ನತವಾಗಬೇಕು? ಜನರು ಬಡವರು. ಸಾಲ ಹಾಗೂ ಕರಗಳ ಭಾರದಿಂದ ನುಗ್ಗಾಗಿದ್ದಾರೆ. ಬಡ ಕೃಷಿಕ ಹಾಗೂ ಕೂಲಿಕಾರರ ಮೇಲೆ ಈಗಾಗಲೇ ಸಾಕಷ್ಟು ಕರಗಳ ಪ್ರಭಾವ ಬಿದ್ದಿದೆ. ಹೇರಿದ ಕರಗಳನ್ನು ಕಡಿಮೆ ಮಾಡಿ ಅವರ ಭಾರವನ್ನು ತಗ್ಗಿಸುವ ಪ್ರಯತ್ನವನ್ನು ಸರಕಾರವು ಮಾಡಬೇಕೇ ಹೊರತು ಅವರಮೇಲೆ ಮತ್ತಿಷ್ಟು ಕರಗಳನ್ನು ಹೇರುವದೆಂದರೆ ಜನತೆಯನ್ನು ಉನ್ನತಿಯ ಮಟ್ಟಕ್ಕೊಯ್ಯುವ ಬದಲು ಅವನತಿಗಿಳಿಸಿದಂತೆಯೇ ಸರಿ. ಅದಕ್ಕಾಗಿಯೇ ಅಲ್ಲವೇ ಉಪ್ಪಿನ ಕರ ಮುಂತಾದವುಗಳನ್ನು ತೆಗೆದುದು? ಇಷ್ಟಲ್ಲದೆ, ಬಟ್ಟೆಯ ಮೇಲಿನ ಕರ, ವಿಕ್ರಯಕರ ಮುಂತಾದ ಹೊಸ ಕರಗಳ ಭಾರವು ಇವರ ಮೇಲೆ ಬಿದ್ದಿದೆ. ಭಾರತದ ಜನತೆಯ ಜೀವನವು ಒಟ್ಟನಲ್ಲಿ ಕಷ್ಟಮಯವಾಗಿದೆ. ಹೀಗಿರುವಾಗ ದೇಶದ ದೊಡ್ಡ ದೊಡ್ಡ ಯೋಜನೆಗಳಿಗಾಗಿ ಅತಿಯಾಗಿ ಇನ್ನಿಷ್ಟು ಜನತೆಯ ಮೇಲೆ ಕರ ಹೇರುವದೆಂದರೆ ಅನುಚಿತ-ಅನ್ಯಾಯ-ಜನತೆಯ ವಿನಾಶಕ್ಕೆ ಕಾರಣ. ಬಂಡವಾಳದಾರರ ಮೇಲಿನ ಕರವನ್ನೂ ಸಹ ಅವರು ಪ್ರತ್ಯಕ್ಷ ಪರೋಕ್ಷ ರೀತಿಗಳಿಂದ ಜನತೆಯ ಮೇಲೆ ಜಾರಿಸುವ ಎಲ್ಲ ಪ್ರಯತ್ನವನ್ನೂ ಯಶಸ್ವಿಯಾಗಿ ಮಾಡುತ್ತಿದ್ದಾರೆ. ಅಂದ ಮೇಲೆ ಭಾರತ ಸರಕಾರವು ಕರ ವೃದ್ಧಿಯಿಂದ ಬಂಡವಾಳ ದೊರಕಿಸುವಂತಿಲ್ಲ.

ಋಣವೃದ್ಧಿ

ಸಾಲ ತೆಗೆದುಕೊಳ್ಳುವ ಕೆಲಸ ಭಾರತ ಸರಕಾರಕ್ಕೆ ಹೊಸದಲ್ಲ. ಅವಶ್ಯಕತೆ ಬಿದ್ದಾಗೆಲ್ಲ ಅದು ಸಾಲ ತೆಗೆದುಕೊಂಡಿದೆ, ತೆಗೆದುಕೊಳ್ಳುತ್ತಿದೆ. ಆದರೆ ಈಗ ಜನತೆಯಲ್ಲಿ ಉಳಿತಾಯ ಕಡಿಮೆಯಾಗಿದೆ. ಉಳಿತಾಯವಿದ್ದವರೂ ಸಾಲ ಕೊಡುವ ಮನೋದಶೆಯಲ್ಲಿಲ್ಲ. ಇದಕ್ಕೆ ಭಾರತ ಸರಕಾರದ ಅರ್ಥನೀತಿಯೂ ಕಾರಣವಾಗಿದೆ ಎಂದೆನ್ನಬಹುದು. ಸಾಲ ಕೊಡಲು ಶಕ್ತರಾದ ಬಂಡವಾಳದಾರರು ತಮ್ಮ ವ್ಯಕ್ತಿಗತ ಸ್ವಾರ್ಥದ ಕಾರಣದಿಂದ ಸರಕಾರಕ್ಕೆ ನೆರವು ನೀಡಲು ಸಿದ್ಧರಿಲ್ಲ. ಬಂಡವಾಳಶಾಹಿಗಳ ಬಂಡವಾಳವೆಲ್ಲವನ್ನೂ ಹಸ್ತಗತ ಮಾಡಿಕೊಳ್ಳುವ ಅರ್ಥನೀತಿಯೂ ಭಾರತ ಸರಕಾರದ್ದಿಲ್ಲ. ಕರ ಹೇರಿದ್ದ'ಗ ಪ್ರಭಾವ ಜನತೆಯ ಮೇಲೆ ಬೀಳಬಹುದೆಂಬ ಆಶಂಕೆ ಬೇರೆ; ಲಾಭಕರವನ್ನು ಅತಿಯಾಗಿ ಹೇರಿದರೆ ಉದ್ಯಮಗಳ ವಿಕಾಸವು ನಿಂತೀತೆಂಬ ಸಂಶಯವೂ ಜೊತೆಗಿದೆ. ಹೀಗಾಗಿ ಭಾರತ ಸರಕಾರಕ್ಕೆ ದೇಶದಲ್ಲಿ ಸಾಕಷ್ಟು ಸಾಲ ಸಿಕ್ಕುವಂತಿಲ್ಲ.

ನಾಣ್ಯವೃದ್ಧಿ

ಇದು ಸರಕಾರದ ಹಣಕಾಸಿನ ವೃದ್ಧಿಯ ಮೂರನೆಯ ಉಪಾಯ. ಸರಕಾರವು ಈ ನೀತಿಯಿಂದ ಅವಶ್ಯಕವಿದ್ದಷ್ಟು ನೋಟುಗಳನ್ನು ವೃದ್ಧಿಗೊಳಿಸಿಕೊಳ್ಳುತ್ತದೆ. ಆದರೆ ಇದರಿಂದ ಮುದ್ರಾ ಪ್ರಸಾರವಾಗಿ ದೇಶದ ಆರ್ಥಿಕ ನೆಲೆ ಸಡಿಲವಾಗುತ್ತದೆ. ಅತಿಪ್ರಸರಣದಿಂದ ಸರಕಾರದಲ್ಲಿ ಜನತೆಯ ನಂಬುಗೆ ಕೆಡುತ್ತದೆ. ವಿದೇಶಗಳಲ್ಲಿ ಅದಕ್ಕೆ ಬೆಲೆ ಕಡಿಮೆಯಾಗಿ ದೇಶದ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಧಕ್ಕೆ ತಗಲುತ್ತದೆ. ಭಾರತದ ಅಂದಿನ ವಿದೇಶೀ ಸರಕಾರವು ಯುದ್ಧ ಸಮಯದಲ್ಲಿ ಸ್ಟರ್ಲಿಂಗದ ಆಧಾರದಮೇಲೆ ಮುದ್ರಾಪ್ರಸಾರಗೊಳಿಸಿದ್ದು, ೧೦೦ ಕ್ಕೆ ೪೦೦ ರಷ್ಟು ಈಗ ವಸ್ತುಗಳ ಕ್ರಯದಲ್ಲಿ ವೃದ್ಧಿಯಾಗಿದೆ. ಇಂದಿನ ಜನತಾ ಸರಕಾರವು ಈ ತೆರನಾದ ಪ್ರಸಾರವನ್ನು ತಡೆದು ನೋಟುಗಳ ಕ್ರಯದಲ್ಲಿ ಸ್ಥಿರತೆ ತರುವ ಎಲ್ಲ ಪ್ರಯತ್ನಮಾಡುತ್ತದೆ. ಅಂದ ಮೇಲೆ ಅದು ದೇಶಕ್ಕೆ ಘಾತಕವಾಗುವ ಇಂಥ ಉಪಾಯವನ್ನು ಈಗ ಹೇಗೆ ಕೈಕೊಂಡೀತು? ಈ ಮಾರ್ಗದಿಂದಲೂ ಅದು ಧನವೃದ್ಧಿಯನ್ನು ಮಾಡಿಕೊಳ್ಳುವಂತಿಲ್ಲ.

ಹೀಗೆ ಅಂತರಿಕ ಸಾಧನಗಳು ಇಲ್ಲವಾದ ಮೇಲೆ ವಿದೇಶಗಳ ಕಡೆಗೆ ದೃಷ್ಟಿಯೋಡಿಸುವದಕ್ಕೆ ಮುಂಚೆ ದೇಶದ ಬಂಡವಾಳದಾರರಿಗೇ ಸಾಕಷ್ಟು ಸೌಲಭ್ಯವನ್ನೋ ಅನುಕೂಲವನ್ನೋ ಒದಗಿಸಿಕೊಟ್ಟು ಅವರಿಂದ ಹೆಚ್ಚು ಹೆಚ್ಚು ಬಂಡವಾಳವನ್ನು ದೇಶದ ಉದ್ಯೋಗ ಧಂದೆಗಳಲ್ಲಿ ತೊಡಗಿಸುವಂತೆ ಪ್ರಯತ್ನಿಸುವದು ಸರಕಾರದ ಕೆಲಸ. ಅಂತಯೇ ೧೯೪೭ ನೆಯ ಡಿಸೆಂಬರದಲ್ಲಿ ಔದ್ಯೋಗಿಕ ಸಮ್ಮೇಲನದಲ್ಲಿ ಭಾಷಣ ಮಾಡುತ್ತ ಶ್ಯಾಮಪ್ರಸಾದ ಮುಕರ್ಜಿಯವರು ಹೇಳಿದಂದಿನಿಂದ ಇಂದಿನ ವರೆಗೂ ದೇಶದ ಉನ್ನತಿಗಾಗಿ ಹೆಚ್ಚು ಬಂಡವಾಳ ಒದಗಿಸಲು ಬಂಡವಾಳದಾರರಿಗೆ ಹೆಚ್ಚಿನ ಸೌಲಭ್ಯ ಕೊಡುತ್ತ ಬಂದ ಸರಕಾರದ ನೀತಿ ಸ್ಪಷ್ಟವಿದೆ. ಈ ವರ್ಷದ ಕೇಂದ್ರದ ಆಯವ್ಯಯ ಅಂಕೆ-ಸಂಖ್ಯೆಗಳು ಈ ವಿಷಯವನ್ನು ಇನ್ನಿಷ್ಟು ಸ್ಪಷ್ಟೀಕರಿಸಿವೆ.

ಈ ರೀತಿಯ ಸೌಲಭ್ಯ, ಅನುಕೂಲತೆಗಳು ದೇಶದ ಬಂಡವಾಳದಾರರಿಗೆ ದೊರೆಯುದಿದ್ದಲ್ಲಿ ನಮ್ಮ ದೇಶದ ಬಂಡವಾಳವನ್ನು ಸ್ವಾಗತಿಸಲು ಸಿದ್ಧವಾಗಿದ್ದ ನಮ್ಮ ನೆರೆಹೊರೆಯ ದೇಶಗಳಿಗೆ ತಮ್ಮ ಬಂಡವಾಳವನ್ನು ಸಾಗಿಸುವ ಎಲ್ಲ ಉಪಾಯವನ್ನೂ ಇವರು ಮಾಡಬಹುದೆಂಬುದರಲ್ಲಿ ಸಂದೇಹವಿಲ್ಲ. ಈ ಉಪಾಯದಿಂದ ತನ್ನ ಅರ್ಥನೀತಿಯನ್ನು ಸ್ಪಷ್ಟೀಕರಿಸುತ್ತ ದೇಶದ ಬಂಡವಾಳಕ್ಕೆ ಅಶ್ವಾಸನೆಕೊಟ್ಟಿದ್ದರೂ ವಿದೇಶೀ ಬಂಡವಾಳವನ್ನು ಸ್ವಾಗತಿಸದುದರ ಅರ್ಥವೂ ಇಷ್ಟೆ.

ಈ ಮುದ್ದಿನ ದೊಡ್ಡಪ್ಪನಷ್ಟೇ ಇಷ್ಟು ಘನತೆಗೊಯ್ಯುವ ಸರಕಾರದ ನೀತಿ ಎಂತು? ಬಂಡವಾಳವು ಹೊರದೇಶಗಳಿಗೆ ಹೋಗದಂತೆ ನಿರ್ಬಂಧ ಇಡಬಾರದಲ್ಲ? ಬಂಡವಾಳದಾರರು ಎಷ್ಟು ದಿನ ತಟಸ್ಥ ಕುಳಿತುಕೊಂಡಾರು? ಅವರು ತಾವಾಗಿಯೇ ಬಗ್ಗಿ ಬರುವರು ಎಂದು ಕೆಲವರು ಊಹಿಸಲು ಬಹುದು. ಆದರೆ ಹಿಂದ ಸರಕಾರವು ಈ ಅವಧಿಯ ವರೆಗೆ ದಾರಿ ಕಾಯುತ್ತ ಕುಳಿತುಕೊಳ್ಳುವಂತಿಲ್ಲ. ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳ ಸದಸ್ಯರಾಷ್ಟ್ರವಾದ ಕಾರಣ ಹಿಂದ ಸರಕಾರಕ್ಕೆ ಸಹ ತನ್ನ ಕರ್ತವ್ಯದ ನಿಯಮವನ್ನು ಪಾಲಿಸಲೇ ಬೇಕಾಗುವದು. ಭಾರತದ ಇಂದಿನ ಎಷ್ಟೋ ವ್ಯವಸಾಯ ಉದ್ಯೋಗಗಳು "ರಾಷ್ಟ್ರೀಯ ರಕ್ಷಣೆ"ಯ ಆಧಾರದ ಮೇಲೆ ಜೀವಕಳೆ ತುಂಬಿಕೊಂಡಿವೆ. ಆದರೆ ಈ ಪ್ರಕಾರದ ರಕ್ಷಣೆಯು ಬಹುದಿನಗಳ ವರೆಗೆ ದೊರೆಯಲಾರದು. ಈ ರೀತಿಯ ರಾಷ್ಟ್ರೀಯ ರಕ್ಷಣೆಗಳು ಅಂತಾರಾಷ್ಟ್ರೀಯ ಆರ್ಥಿಕ ಸಂಬಂಧವನ್ನು ಸಡಿಲ ಮಾಡುತ್ತದೆ ಎಂಬದು ಅಂತಾರಾಷ್ಟ್ರೀಯ ಮುದ್ರಾಕೋಶ (Inter National Monetary Fund) ಸಮಿತಿಯ ಸಿದ್ಧಾಂತ. ಈಗ ರಾಷ್ಟ್ರೀಯ ಭಾವನೆಯು ಅತಿ ಬೆಳೆದದ್ದರ ಕಾರಣವಾಗಿಯೇ ನಾಜೀಶಕ್ತಿ ತಲೆಎತ್ತಿ ಪ್ರಪಂಚಕ್ಕೆ ತಂದೊಡ್ಡಿದ ಅನಾಹುತ ನಮ್ಮೆಲ್ಲರ ಎದುರಿಗಿದ್ದ ವಿಷಯ. ಅಂದಮೇಲೆ ಮುಕ್ತವ್ಯಾಪಾರ ನಿಯಮವನ್ನು ಪಾಲಿಸಲೇ ಬೇಕಾದೀತು. ಅನಿವಾರ್ಯವಾಗಿ ಈ ನೀತಿಯನ್ನು ಅನುಸರಿಸುವ ಪ್ರಸಂಗ ಬರುವದರೊಳಗಾಗಿ ದೇಶದ ಔದ್ಯಮಿಕ ಉನ್ನತಿ ಮಾಡಿಕೊಳ್ಳಬೇಕೆಂಬುದು ಸರಕಾರದ ವಿಚಾರ. ವಿದೇಶೀ ವಸ್ತುಗಳ ಮೇಲೆ ಅತಿಯಾಗಿ ಕರವಿದ್ದಾಗಲೂ ನಮ್ಮ ದೇಶದಲ್ಲಿ ವಿದೇಶೀ ವಸ್ತುಗಳು ಕಡಿಮೆ ಬೆಲೆಯಲ್ಲಿ ದೊರೆಯಹತ್ತಿವೆ. ಪುನಃ ಹೊಸದಾಗಿ ಅಮೇರಿಕೆಯ ಸಂರಕ್ಷಣೆಯಲ್ಲಿ ತಲೆ ಎತ್ತುತ್ತಿರುವ ಜಪಾನವೂ ತನ್ನ ಉದ್ಯಮ ವ್ಯವಸಾಯಗಳಲ್ಲಿ ಭರದಿಂದ ಕಾಲಿಡುತಿದ್ದು ಈಗಾಗಲೇ ಅಮೇರಿಕೆಯ ಹಾಗೂ ಇಂಗ್ಲೆಂಡಿನ ವ್ಯಾಪಾರ ಸ್ಥಳವನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳಹತ್ತಿದೆ. ಅಂದಮೇಲೆ ಭಾರತದ ಸ್ಥಿತಿ ಏನು?

ವಿವೇಚನದೃಷ್ಟಿಯಿಂದ ನೋಡಲಾಗಿ ಬೇಗನೆ ಭಾರತದ ಆರ್ಥಿಕ ಸ್ಥಿತಿಯನ್ನು ಉನ್ನತ ಮಟ್ಟಕ್ಕೊಯ್ಯಲೆಣಿಸಿದ ಇಂದಿನ ಸರಕಾರವು ಕೇವಲ ಬಂಡವಾಳದಾರರ ಎದುರು ನೋಡುತ್ತ ಕುಳಿತುಕೊಳ್ಳಲಾರದು. ಅದ ಕಾರಣವೇ ಭಾರತ ಸರಕಾರವು ಅಂತಾರಾಷ್ಟ್ರೀಯ ಬ್ಯಾಂಕಿನಿಂದ ೮೦೦ ಕೋಟಿ ರೂಪಾಯಿಗಳ ಸಾಲ ಬೇಡಿದುದು. ಈ ಬ್ಯಾಂಕು ಪ್ರಪಂಚದ ಸದಸ್ಯ ರಾಷ್ಟ್ರಗಳ ದೀರ್ಘಕಾಲದ ಯೋಜನೆಗಳಿಗೆ ದೀರ್ಘಾವಧಿಯ ಕಂತಿನ ಮೇಲೆ ಸಾಲ ಕೊಡುವ ಸಂಸ್ಥೆ. ಇದರ ಬಂಡವಾಳ ೪೦ ಕೋಟಿ ಡಾಲರು. ಈ ಸಂಸ್ಥೆಯು ಭಾರತದ ಆರ್ಥಿಕ ಸ್ಥಿತಿಗತಿಗಳ ಪರಿಶೀಲನೆಗಾಗಿ ತನ್ನ ನಿಯಮದಂತೆ ಐವರು ಸದಸ್ಯರ ಸಮಿತಿಯೊಂದನ್ನು ಭಾರತಕ್ಕೆ ಕಳಿಸಿತ್ತು. ಸುಮಾರು ಮೂರು ತಿಂಗಳ ನಿರೀಕ್ಷಣೆಯ ಅನಂತರ ಈಗ ಸ್ವಲ್ಪ ದಿನಗಳ ಹಿಂದೆಯೇ ಅದು ತನ್ನ ವರದಿಯನ್ನು ಒಪ್ಪಿಸಿದೆ. ಅದರಲ್ಲಿ ಅದು -ಭಾರತವು ಸಾಲಪಡೆಯಲರ್ಹವಲ್ಲವೆಂದು ಹೇಳಿದ್ದು, ಆ ಬಗ್ಗೆ ಕೆಲವು ಆಕ್ಷೇಪಗಳನ್ನು ನಿರೂಪಿಸಿದೆ- ಭಾರತದಲ್ಲಿ ಉಪ್ಪಿನ ಮೇಲಿನ ಕರ ತೆಗೆದುದರಿಂದಲೂ ಮದ್ಯಪಾನ ನಿರೋಧ ಹಾಗೂ ಜಮೀನುದಾರಿ ಪದ್ಧತಿಯನ್ನು ಕೊನೆಗೊಳಿಸುವದಿದೆಯಾದುದರಿಂದಲೂ ಪ್ರಾಂತಗಳ ಆದಾಯಕ್ಕೆ ಧಕ್ಕೆ ತಗುಲಿದೆ. ಮದ್ಯಪಾನ ನಿರೋಧ ಒಂದರಿಂದ ೧೮ ಕೋಟಿ ರೂಪಾಯಿಗಳ ನಷ್ಟ ಪ್ರಾಂತಗಳಿಗಾಗಿದೆ. ಇಷ್ಟೇ ನಷ್ಟ ಮುಂದೆಯೂ ಆಗಬಹುದೆಂದು ಊಹಿಸಿದೆ. ಪ್ರಾಂತಗಳು ಕೃಷಿಯ ಉನ್ನತಿಯಲ್ಲಿ ಮುಂದಡಿ ಇಟ್ಟಿದ್ದರೂ ಅದಕ್ಕೆ ತಕ್ಕ ಕರವನ್ನು ಮಾತ್ರ ರಾಜಕೀಯ ಕಾರಣಗಳಿಂದ ಹೇರಲಿಲ್ಲವೆಂದು ವರದಿ ಕೊಟ್ಟಿದೆ. ಇದಲ್ಲದೆ ಪ್ರಾಂತಗಳಿಗೂ ಹಾಗೂ ಕೇಂದ್ರಕ್ಕೂ ಇದ್ದ ಆರ್ಥಿಕ ಸಂಬಂಧ ದೃಢವಾಗಿಲ್ಲವೆಂಬ ಆಕ್ಷೇಪವೆತ್ತಿದೆ. ಸಮಿತಿಯ ಹೇಳಿಕೆಯಂತೆ ಭಾರತವು ಕೈಕೊಂಡ ಅನೇಕಾಂಶ ಯೋಜನೆಗಳು ಅನುತ್ಪಾದಕವೂ ಅಲಾಭಕಾರಿಯೂ ಆಗಿವೆ. ಈ ಬಗ್ಗೆ ಕೆಲವು [illegible] ವಿವರವಿಲ್ಲದೆ ಆ ಬಗ್ಗೆ [illegible] ಸಾಲ ಕೊಡಲು ಸಮಿತಿ ಒಪ್ಪಿಲ್ಲ. ಈ [illegible] ಕರಣೆಯ ಮೂಲಕ ಕೈಕೊಳ್ಳಲಿರುವ ಭಾರತ ಸರಕಾರದ ದೊಡ್ಡ ದೊಡ್ಡ ಯೋಜನೆಗಳು [illegible] ಸ್ಥಿತಿ ಜನತೆಗಿದೆ. ಅದರ ಭಾರತ ಸರಕಾರದ ಯೋಜನೆಗಳನ್ನು ಪೂರೈಸಲು ಬೇಕಾಗುವ ಸಹಾಯವೆಂದು ಕೇಳಿದ ಸಾಲದಲ್ಲಿ ಕೇವಲ ೩೦ ರಷ್ಟು (೨೫೦ ಕೋಟಿ ರೂ.) ಸಾಲವನ್ನು ಕೊಡಲೊಪ್ಪಿದೆ.

ಭಾರತ ಸರಕಾರವು ಈ ಸಾಲವನ್ನು ಪಡೆದು ಸುಖಿಯಾಗುವಂತಿಲ್ಲ. ಭಾರತಕ್ಕೆ ಬ್ಯಾಂಕಿನ ನಿಯಮ, ಅದರ ಬಡ್ಡಿಯ ದರ (೪೪ ರೂ.) ಒಗ್ಗದು. ಅಲ್ಲದೆ ಅದರ ಯೋಜನೆಗಳು ಕೊನೆಗೊಳ್ಳುವಷ್ಟು- ಕೇಳಿದಷ್ಟು- ಸಾಲವಾದರೂ ಎಲ್ಲಿ ಸಿಕ್ಕಿದೆ? ಒಟ್ಟು ಸಿಕ್ಕುವ ಧರವಿದ್ದರೂ ಇಂಗ್ಲೆಂಡ್, ಅಮೇರಿಕೆ ಮುಂತಾದ ದೇಶಗಳಿಂದ ಖಾಸಗೀ ಮಾಲುಗಳ ಮೂಲಕವೇ ಅದನ್ನು ಪಡೆಯಬೇಕು- ಅದೂ ನೂರಕ್ಕೆ ೬೫೦ ರಷ್ಟು ಏರಿದ ದರದಲ್ಲಿ! ಒಟ್ಟಿನಲ್ಲಿ ವಿದೇಶೀ ಉದ್ಯೋಗ ವ್ಯವಸಾಯಗಳಿಗೆ ಭಾರತವು ಪೇಟೆಯಾಗಬೇಕು. ಹೆಸರಿಗೆ ಮಾತ್ರ ಭಾರತಕ್ಕೆ ಸಹಾಯ.

ಇನ್ನು ಭಾರತಕ್ಕೆ ಉಳಿದ ಆಶೆಯೆಂದರೆ ಸ್ಟರ್ಲಿಂಗ. ಯುದ್ಧಕಾಲದಲ್ಲಿ ಭಾರತದ ಅವಶ್ಯಕತೆಯನ್ನೂ ಲೆಕ್ಕಿಸದೆ ಕಚ್ಚಾಮಾಲು, ಆಹಾರ ಧಾನ್ಯ ಯುದ್ಧೋಪಯೋಗಿ ಸಾಮಗ್ರಿಗಳನ್ನು ಮನಬಂದಂತೆ ಕಡಿಮೆ ದರದಲ್ಲಿ ಕೊಂಡು ನಗದು ಹಣ ಕೊಡದೆ ಸ್ಟರ್ಲಿಂಗ ಬೆಳೆಸಿದ ರೀತಿ, ಇಂದಿನ ಹಿಂದ ಸರಕಾರವು ಆ ಬಗ್ಗೆ ಚರ್ಚೆ ತೆಗೆದು ಮಾತುಕತೆ ನಡೆಸಿದಾಗ "ನಾನು ಅಸಮರ್ಥ, ಹೆಚ್ಚಿನ ಏರಿದ ಬೆಲೆಯಲ್ಲಿ ಕೊಂಡಿದ್ದು" ಎಂದು ಮುಂತಾಗಿ ಹೇಳಿ ಅದನ್ನು ಕಡಿಮೆ ಮಾಡಿಸಿಕೊಂಡ ಇಂಗ್ಲೆಂಡ್ ಸರಕಾರದ ನೀತಿಯನ್ನು ಕಂಡಾಗ ಅದು ಭಾರತಕ್ಕೆ ಯಾವ ರೀತಿಯಿಂದಲೂ ನೆರವಾಗಲೆಂಬದು ವಿಶದವಾಗಿತ್ತು. ಅದರೂ ಆಶೆ ತೊರೆಯಲಾದೀತೆ? ಅಂತೆಯೇ ಮುಂದಿನ ವರ್ಷದ (೪೯ ನೆಯ ಜುಲಾಯಿಯಿಂದ ೫೦ ನೆಯ ಜೂನ ಅಂತ್ಯದ ವರೆಗೆ) ಕಂತು ಪಡೆಯುವ ಬಗ್ಗೆ ಮಾತುಕತೆ ನಡೆಸಲು ಕೇಂದ್ರ ಸರಕಾರದ ಹಣಕಾಸಿನ ಮಂತ್ರಿಗಳ ನೇತೃತ್ವದಲ್ಲಿ ಪ್ರತಿನಿಧಿ ಮಂಡಲವೊಂದು ಶೀಘ್ರದಲ್ಲಿಯೇ ಇಂಗ್ಲೆಂಡಿಗೆ ತೆರಳುವದಿದೆ. ಈ ವರ್ಷದಲ್ಲಿ ೧೪ ಕೋಟಿ ಡಾಲರು ಸ್ಟರ್ಲಿಂಗದಿಂದ ದೊರೆತಿದ್ದರೂ ಅಂತಾರಾಷ್ಟ್ರೀಯ ಮುದ್ರಾಕೋಶದಿಂದ ೧೦ ಕೋಟಿ ಡಾಲರು ಸಾಲ ತೆಗೆಯಬೇಕಾಯಿತು. ಮುಂದಿನ ವರ್ಷವೂ ಇಷ್ಟೇ ಕೊರತೆಯಾಗಬಹುದೆಂದು ಊಹಿಸಲಾಗಿದೆ.

ಮೇಲಿನ ಎಲ್ಲ ವಿವರಣೆಗಳಿಂದ ಭಾರತ ಸರಕಾರವು ಆರ್ಥಿಕ ಸಂಕಟದಲ್ಲಿದೆ, ಎಂಬುದು ಸ್ಪಷ್ಟವಾಗಿತೋರುತ್ತದೆ. ಯಾವಕಡೆ ನೋಡಿದರೂ ಹಣಕಾಸಿನ ದೃಷ್ಟಿಯಿಂದ ನಿರಾಶೆಯೇ ಕಂಡುಬಂದರೂ ಅದು ತನ್ನ ಕರ್ತವ್ಯದಲ್ಲಿ ಚ್ಯುತಿತಂದಿಲ್ಲ. ಅದು ಮುಂದಡಿಯಿಡುತ್ತಲೇ ಇದೆ. ಶಾಂತಿಮಯ ರೀತಿಯಿಂದ ಭಾರತವನ್ನು ಘನತೆಗೊಯ್ಯಲು ಹೆಜ್ಜೆ ಹೆಜ್ಜೆಗೆ ಬಾರದ ಎಡರುಗಳೆಲ್ಲವನ್ನೂ ಎದುರಿಸುತ್ತ ಇಂದಿನ ಸರಕಾರವು ಶಕ್ತಿಮೀರಿ ಹೆಣಗುತ್ತಿದೆ. ಅದಕ್ಕೆ ಜನತೆಯ ಸಹಕಾರಬೇಕು, ಸಹಾನುಭೂತಿ ಬೇಕು. ತನ್ನ ಕಾರ್ಯಗಳಲ್ಲಿ ಜನತೆ ಮನಮುಟ್ಟಿ ನೆರವಾಗಬೇಕು. ಶಕ್ತಿಗನುಸಾರವಾಗಿ ಜನತೆಯ ಸೇವೆ ಮಾಡಲು ತನಗೆ ಅವಕಾಶ ದೊರೆಯಬೇಕೆಂಬುದೇ ಹಿಂದ ಸರಕಾರದ ಅಪೇಕ್ಷೆ. ಇಂದಿನ ಹಿಂದ ಸರಕಾರವನ್ನು ದೂರುವ ಪಕ್ಷಸಂಘಟನಗಳು ಇವೆಲ್ಲವನ್ನೂ ವಿಚಾರಿಸಬೇಡವೇ?

● ೧೮೫೦ ರಲ್ಲಿ ಮೊದಲನೆಯ ನೆಪೋಲಿಯನ್ನನು ಫ್ರಾನ್ಸಿನಲ್ಲಿ ಆಳುತ್ತಿದ್ದಾಗ ಸಾರ್ವಜನಿಕ [illegible] ಅಂಗರಕ್ಷಕರನ್ನು ಎದುರಿ[illegible]ಂದು ಕೆಮ್ಮು ಹಿಡಿದ [illegible] ಅನಾಗರಿಕನು ಕೆಮ್ಮುತ್ತ 'ಸುಮ್ಮನಿರು [illegible]' ಎಂದು ಅಪ್ಪಳಿಸಿದನು. ಅದರ ಅರ್ಥವನ್ನು ತಿಳಿದ [illegible] ಕೂಡಲೆ ಸಿಪಾಯಿಗಳು [illegible] ಗಳನ್ನು ಗುಂಡಿಕ್ಕಿ ಸುಟ್ಟುಬಿಟ್ಟರು.!

ವಿಚಾರದ್ವಂದ್ವ

ಈ ತಲೆಬರಹದ ಕೆಳಗೆ ಜನಾಭಿಪ್ರಾಯವನ್ನು ಪ್ರಕಟಿಸಬೇಕೆಂದಿದ್ದೇವೆ. ಕೇವಲ ಸ್ಥಾನಿಕ ಕುಂದುಕೊರತೆಗಳನ್ನು ಬೆಳಕಿಗೆ ತರುವದು ಇದರ ಉದ್ದೇಶವಾಗಿರದೆ ಮಹತ್ವದ ವಿಷಯಗಳ ಮೇಲೆ ಚರ್ಚೆ ನಡೆಸಿ ಜನಾಭಿಪ್ರಾಯವನ್ನು ರೂಪಿಸುವದೇ ಗುರಿಯಾಗಿರುವದರಿಂದ ಇಲ್ಲಿ ಬರುವ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

★

ಕರ್ನಾಟಕ ಪ್ರಾಂತನಿರ್ಮಾಣವನ್ನು ಮುಂದೂಡಿದರೆ . . ?

ತ್ರಿಮೂರ್ತಿಗಳ ವರದಿಯು ಹೊರಬಿದ್ದು ಚಿಟ್ಟಿವನ್ನು ಮುಟ್ಟಿದೆ. ಏಕೀಕರಣವಿಚಾರದಲ್ಲಿ ಒಂದು ನಿಶ್ಚಿತ ಧೋರಣೆಯನ್ನು ಅನುಸರಿಸುವಂತೆ ವರದಿಯಲ್ಲಿ ಉಲ್ಲಿಖಿತವಾಗಿದೆ. ಏಕೀಕರಣವಾಗಲು ಒಕ್ಕೂಟ ಕರ್ನಾಟಕದಲ್ಲಿ ಮೈಸೂರು ವಿಲೀನ ಹೊಂದಬೇಕೆಂದು ಸಹ ಸ್ಪಷ್ಟವಾಗಿದೆ. ಎಂದ ಮೇಲೆ ಕರ್ನಾಟಕ ಏಕೀಕೃತ ಪ್ರಾಂತವಾಗಲು ಮೈಸೂರಿನವರ ಮೇಲೆ ಜವಾಬ್ದಾರಿ ಬಹಳವಿದೆ. ಮೈಸೂರೆಂಬ ಮೋಹ ಉಜ್ವಲ ಭವಿಷ್ಯವಿರುವ ಕರ್ನಾಟಕ ಪ್ರಾಂತೀಕರಣಕ್ಕೆ ಅಡ್ಡಿ ಬರಬಾರದು. ಆದ್ದರಿಂದ ಈ ಸಮಯವು ನಮ್ಮ ಮುಖಂಡರುಗಳ ಸತ್ವಪರೀಕ್ಷೆಯ ಕಾಲವೆಂದು ಹೇಳದೆ ವಿಧಿಯಿಲ್ಲ. ದೂರದೃಷ್ಟಿ ಇಲ್ಲದೆ ಸ್ವಾರ್ಥತೆಯಿಂದ ವರ್ತಿಸುವ ಯಾರಾದರೂ ಸರಿಯೆ, ಈ ಮಹಾಪ್ರವಾಹದಲ್ಲಿ ಕೊಚ್ಚಿ ಹೋಗುವುದು ಕತಸಿದ್ಧ; ಅಲ್ಲದೆ, ಪ್ರತಿಗಾಮಿಗಳು ಏಕೀಕರಣವನ್ನು ವಿರೋಧಿಸಿದರೆ ಮತ್ತೆ ಮೈಸೂರು ವಿಲಯನವಾಗದಿದ್ದರೆ ಚಳವಳಿ ಕಟ್ಟಿಟ್ಟದ್ದೇ.

ಮೈಸೂರಿಗೆ ಜವಾಬ್ದಾರೀ ಸರಕಾರ ಬರುವ ಪೂರ್ವದಲ್ಲಿ ಏಕೀಕರಣಕ್ಕಾಗಿ ಅರ್ಭಟಿಸುತ್ತಿದ್ದ ಮುಖಂಡರು, ಜನನಾಯಕರ ಕೈಗೆ ಸರಕಾರ ಬಂದಮೇಲೆ ಮೈಸೂರು ಪ್ರತ್ಯೇಕವಾಗಿರಲೆಂದು ಹಾತೊರೆಯುತ್ತಿರುವುದು ವಿಷಾದಕರ ಹಾಗೂ ಅಕ್ಷಮ್ಯ. ಕೆಲವರು ಅರಸೊತ್ತಿಗೆಯನ್ನು ಮುಂದಿಟ್ಟುಕೊಂಡು ಏಕೀಕರಣವನ್ನು ವಿರೋಧಿಸಿದರೆ ಮತ್ತೆ ಕೆಲವರು ಭವ್ಯಭವಿಷ್ಯವಿರುವ ಕರ್ನಾಟಕದ ಯೋಗ್ಯತೆ ತಿಳಿಯದೆ 'ಕೂಪಕೂರ್ಮನ್ಯಾಯ'ವನ್ನು ಪ್ರದರ್ಶಿಸುತ್ತಿರುವುದು ಹಾಸ್ಯಾಸ್ಪದವಾಗಿದೆ. ಮೈಸೂರು ವಿಲಯನವಾಗಬೇಕಾಗಿದ್ದಲ್ಲಿ ಜನಮತಗಣನೆ ನಡೆಯಲಿ ಎನ್ನುವವರೂ ಇದ್ದಾರೆ. ಮೈಸೂರು ಕರ್ನಾಟಕದ ಹಾಗೂ ಭಾರತದ ಅಂಗವೇ ಹೊರತು ಇದು ಸಾರ್ವಭೌಮತ್ವ ಹೊಂದಿದ ಸಂಸ್ಥಾನವಲ್ಲ ಎನ್ನುವ ಸಂಗತಿ ಈ ಮಹನೀಯರುಗಳಿಗೆ ತಿಳಿಯದಿರುವುದು ಶೋಚನೀಯ. ಸರ್ದಾರ್ ಪಟೇಲರ ಅಪ್ರತಿಮ ರಾಜಕೀಯ ಚಾತುರ್ಯದಿಂದ ಮಾಯವಾದ ೫೬೩ ಸಂಸ್ಥಾನಗಳ ಇತಿಹಾಸವೇ ಇದಕ್ಕೆ ತಕ್ಕ ಉತ್ತರ. ಮೈಸೂರಿನ ಜನತೆ ಪ್ರಾಥಮಿಕವಾಗಿ ಭಾರತದಪ್ರಜೆಗಳಾಗಿದ್ದಾರೆ; ಆದ್ದರಿಂದಲೇ ಮೈಸೂರಿನ ಭವಿಷ್ಯದ ನಿರ್ಧಾರದ ವಿಚಾರದಲ್ಲಿ ಅಖಿಲ ಭಾರತದ ಪ್ರಜೆಗಳಿಗೆ ಹಕ್ಕು ಇದೆ ಮತ್ತು ಅಖಿಲ ಭಾರತ ಪ್ರಜೆಯ ಪ್ರಾತಿನಿಧ್ಯವನ್ನು ಹೊಂದಿರುವ ಭಾರತದ ಘಟನಾಸಮಿತಿಯು ಮೈಸೂರನ್ನು ವಿಲೀನಗೊಳಿಸಬಲ್ಲುದು. ಇದನ್ನು ತಿಳಿದುಕೊಳ್ಳದೆ ಮೈಸೂರಿನ ವಿಚಾರದಲ್ಲಿ ಹೊರಗಿನವರು ಕೈಹಾಕಬಾರದೆಂದು ಕೆಲವುಮೈಸೂರು ಕನ್ನಡಿಗರು ತಮ್ಮ ಅಜ್ಞಾನವನ್ನು ವ್ಯಕ್ತಗೊಳಿಸಿದರೆ ಇದಕ್ಕೆ ಯಾರೂ ಮೋಸ ಹೋಗಲಾರರು. ಇನ್ನೂ ಕೆಲವರು ಕರ್ನಾಟಕಎರಡು ಭಾಗಗಳಾಗಿರಬಹುದೆಂದೂ ಆದ್ದರಿಂದ ಒಕ್ಕೂಟ ಕರ್ನಾಟಕ ಮಾತ್ರ ಪ್ರಾಂತವಾಗಿ ನಿರ್ಮಾಣವಾಗಲಿ ಎಂದೂ ತಮ್ಮ ವಿತಂಡವಾದವನ್ನು ಮುಂದಿಡುತ್ತಾರೆ. ಮೈಸೂರು ಕರ್ನಾಟಕದಲ್ಲಿ ಸೇರ್ಪಡೆಯಾಗದಿದ್ದರೆ ಈಗ ಮದ್ರಾಸು ಪ್ರಾಂತ್ಯದಲ್ಲಿರುವ ಕನ್ನಡ ಪ್ರದೇಶಗಳು ನಡುಗಡ್ಡೆಗಳಾಗಿ ಉಳಿದು ಹೋಗುತ್ತವೆ. ಅಂತಹ ಪ್ರದೇಶದ ವಿಸ್ತೀರ್ಣ ಸುಮಾರು ೧೬ ಸಾವಿರ ಚದುರ ಮೈಲು, ಜನಸಂಖ್ಯೆ ೩೫ ಲಕ್ಷ. ಇಷ್ಟು ಪ್ರದೇಶವನ್ನು ಬೇರೆ ಪ್ರಾಂತಗಳಿಗೆ ಬಿಟ್ಟುಕೊಡುವುದು ಹುಚ್ಚುತನವಾದೀತು. ಅಲ್ಲದೆ ಜನಸಂಖ್ಯೆ ಮತ್ತು ವಿಸ್ತೀರ್ಣಗಳಲ್ಲಿ ಕರ್ನಾಟಕಕ್ಕಿಂತಲೂ ಉನ್ನತವಾಗಿರುವ ಅಂಧ್ರ, ಮಹಾರಾಷ್ಟ್ರ ಮುಂತಾದವುಗಳು ಏಕಭಾಷಾಪ್ರಾಂತಗಳಾಗುವಾಗ ಕರ್ನಾಟಕ ಎರಡು ಭಾಗಗಳಾಗುವುದು ಅಸ್ವಾಭಾವಿಕ ಹಾಗೂ ನ್ಯಾಯವಿಲ್ಲದ್ದು. ಕೆಲವು ಸ್ವಾರ್ಥಿಗಳ ಹಿತಕ್ಕಾಗಿ ಈ ರೀತಿ ಮಾಡಿದರೆ ಕನ್ನಡಿಗರ ಅವನತಿ ಖಂಡಿತ. ಹುರುಳಿಲ್ಲದ ಇಂತಹ ವಾದಕ್ಕೆ ಬೆಲೆ ಇಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಕರ್ನಾಟಕ ಏಕೀಕರಣವನ್ನು ಸದ್ಯದ ಲಾಭನಷ್ಟದೃಷ್ಟಿಯಿಂದಲೂ ವ್ಯಾಪಾರದೃಷ್ಟಿಯಿಂದಲೂ ನೋಡಲಾಗದು. ಸ್ವತಂತ್ರ ಭಾರತದಲ್ಲಿ ಅಖಂಡ ಕರ್ನಾಟಕಕ್ಕಿರುವ ಮಹತ್ವದ ಸ್ಥಾನದ ಕಡೆ ನಮ್ಮ ದೃಷ್ಟಿ ಹೊರಳಿದರೆ ಒಳ್ಳೆಯದು. ಇದನ್ನು ನಮ್ಮ ಮುಖಂಡರುಗಳು ಸಾಧಿಸಿಕೊಡಬೇಕಾದ ಕಾಲ ಈಗ ಸಮೀಪಿಸಿದೆ. ಇಲ್ಲವಾದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದುದಕ್ಕೆ ಅರ್ಥವಿಲ್ಲ.

ಕೊನೆಯದಾಗಿ, ಮೈಸೂರರಸರ ಪ್ರಶ್ನೆಯು ಎರಡು ಕೋಟಿ ಕನ್ನಡಿಗರ ಮಹದಾಶಯಕ್ಕೆ ಅಡ್ಡಿ ಬರಬಾರದು. ಇದನ್ನು ಸರದಾರ್ ವಲ್ಲಭಭಾಯಿಪಟೇಲರಿಗೆಬಿಟ್ಟುಕೊಟ್ಟು ಎಲ್ಲರೂ ಒಟ್ಟಾಗಿ ಏಕೀಕರಣಕ್ಕೆ ದುಡಿಯುವುದರಲ್ಲಿಯೇ ನಮ್ಮ ಶ್ರೇಯಸ್ಸಿದೆ. ಮತ್ತು ನಮ್ಮ ಮುಖಂಡರುಗಳು ಕನ್ನಡ ಜನತೆಯ ಮನಸ್ಸನ್ನು ಅರಿತುಕೊಳ್ಳದೆ ಮಂದಗಾಮಿಗಳಾದರೆ ತಮ್ಮ ಧುರೀಣತ್ವವನ್ನು ಕಳೆದುಕೊಳ್ಳುವುದು ಸಹ ಖಂಡಿತ. ಹೀಗಾಗದೆ ಅವರು ಯೋಗ್ಯ ಹಾದಿ ಹಿಡಿಯಲೆಂಬುದೇ ನನ್ನ ಆಶಯ.

ಹಾಸನ
೧೮..೫..೪೮ ಕೆ. ಎಂ. ರುದ್ರಪ್ಪ

ಲತಾ—ರಂಗಾ, ನೀನು ದಿನಾಲೂ ಶಾಲೆಗೆ ಹೋಗುವಾಗ ನನ್ನತ್ತ ತಿರುಗಿ ನೋಡುವುದೇಕೆ?

ರಂಗ—ಲತಾ, ನಾನು ಹಾಗೆ ನೋಡುವೆನೆಂಬುದನ್ನು ನೀನು ಹೇಗೆ ಕಂಡುಹಿಡಿದೆ?

× × ×

ಹಿಂದುಳಿದ ಪ್ರದೇಶಗಳಿಗೆ ಧನ ಸಹಾಯ ಮಾಡಬೇಕೆಂಬ ಅಧ್ಯಕ್ಷ ಟ್ರೂಮನ್ನರ ಸೂಚನೆಗೆ ಬ್ರಿಟನ್ನು ಬೆಂಬಲ ಕೊಡುತ್ತದೆಂದು ಶ್ರೀ ಕ್ರಿಸ್ಟೋಫರ್ ಮೇಹ್ಯೂ, ವಿದೇಶ ಮಂತ್ರಿಯ ಪರವಾಗಿ ಹೇಳಿಕೆ ಕೊಟ್ಟನು.

ಎಲ್ಲ ನನಗೆ ನಿನಗಾಗಿ

೧

ಎಂತು ಬೆಳಗಿನೊಳಂತೆ ಬೈಗಿನೊ-
ಳೇಕೆ ಬಾಂದಳ ಹೊಳೆವುದು?
ಎಂದಿನಂದದೊಳೇಕೆ ರವಿ, ಶಶಿ
ಮೂಡಿ ಮುಳುಗತಲಿರುವುದು?
ಏಕೆ ತಾರಾನಿವಹ ತೊಳಗುವು-
ದೇಕೆ ಮೆರೆವುದು ಹಿಮಗಿರಿ?
ಏಕೆ ಘೋರಾರಣ್ಯ ಬೆಳೆಯುವು-
ದೇಕೆ ಹರಿವುದು ನದಿ, ಝರಿ?
ಎಲ್ಲ ನಮ್ಮೀರ್ವರಿಗೆ ಭಾವಿಸೆ
ನನಗೆ ನಿನಗಾಗಿ!

೨

ಜೇನು ಝೇಂಕರಿಸುತ್ತಲೈತಂ-
ದೇಕೆ ಮುತ್ತುವುದಲರನು?
ಸುಮ ಕೃತಾರ್ಥನವೋಲದೇತಕೆ
ಅರಳಿ ಕರೆಯುವುದಳಿಯನು?
ಅಹ ಮಧುರ ಮಕರಂದ ಪಾನಾ-
ಸಕ್ತಿಯೇತಕೆ ಜೇನಿಗೆ?
ಹೂ ಪರಾಗವನುಣ್ಣ ಬಯಸುವು-
ದೇಕೆ ಹಸಿವಾ ಮೋಹಿನಿಗೆ?
ಎಲ್ಲ......ನಿನಗಾಗಿ!

೩

ಕಂಪು ಸೂಸುವ ಸೊಂಪುಮಲ್ಲಿಗೆ-
ಮಲರ ಚಪ್ಪರದಡಿಯಲಿ
ಮಂಜುನಾದದೊಳಲರನಾಯುತೆ
ರಾಗದಿಂಪಿನ ಮಡಿಯಲಿ,
ಚಲಿಸಿ ಮೈಕೈ ಬೀಸಿ ಹಾಸುವ
ಮಧುರ ಹೃದಯದ ಕೆಳದಿಯು
ತಂದು ಸೂಡುವಳೇಕೆ ನಲ್ಲಗೆ
ಬರೆ ವಸಂತವಿನೋದಿಯು?
ಎಲ್ಲ......ನಿನಗಾಗಿ!

೪

ತುಂಗೆ ತೊರೆಯಲಿ ತುರುಗಳೆಲ್ಲವ-
ನಿಳಿಸಿ ನೀರೊಳು ಮಿಯಿಸಿ
ದಡದ ಬಳಿಯಲಿ ದಟ್ಟ ಹಸುರಿನ
ಹುಲ್ಲುಮೇವನು ಮೇಯಿಸಿ;
ಗೊಲ್ಲ ಮಾವಿನ ಮರದ ಬಳಿಯಲಿ
ಕುಳಿತು ಕೊಳಲನು ನುಡಿಸುತ,
ಏಕೆ ಕರೆವನು ವಿಶ್ವದೊಂದಾ-
ನಂದ ಲಹರಿಯ ಮಿಡಿಸುತ?
ಎಲ್ಲ......ನಿನಗಾಗಿ!

೫

ಹಣ್ಣುಹಂಪಲು ತುಂಬಿತುಳುಕುವ
ಬನದ ಸಿರಿ ಹಸಿರುಡೆಯಲಿ
ಫಲದ ರಸವನು ನೀಡಿ ಕರೆಯುತ
ಹಾಡಲಿಂಪಿನ ನುಡಿಯಲಿ—
ಹಾರುತೇರುತ ಬಾನಿನಿಂದ-
ಲ್ಲೇಕೆ ತೇಲಿ ವಿಹಂಗಮ
ಸಾರುವನು ಸಮ್ಮೋದಸುಂದರ-
ನೇಕೆ ಬೇಕಾಸಂಗಮ?
ಎಲ್ಲ......ನಿನಗಾಗಿ!

೬

ಭವ್ಯದಿವವನು ಭುವಿಗೆ ತರುವನ-
ದೇಕೆ ಮಳೆಯಲಿ ದೇವನು?
ದೇಹಗೇಹಾಂತರದಿ ನೆಲಸುತ-
ಲೇಕೆ ಬೆಳಗುವ ಸಾವನು?
ವಿವಿಧ ಸತ್ವದ ಸೊಬಗ ತೋರುತ
ಕರೆವನೆಮ್ಮನದೇತಕೆ?
ಸುಭಗ ಸೃಷ್ಟಿಯು ಸುಭಗ ದೃಷ್ಟಿಗೆ
ಎಂದು ಮಾಡಿದನೇತಕೆ?
ಎಲ್ಲ......ನಿನಗಾಗಿ!

—ಕೆ. ವಿ. ಲಿಂಗಪ್ಪ

ನಗೆಯ ನೊರೆ

ಪ್ರಾಯಶ್ಚಿತ್ತ

ಬೆಳಗಿನ ಸಮಯ ಸುಮಾರು ಏಳು ಗಂಟೆಯಾಗಿರಬಹುದು. ಸ್ಥಳ ಭೂಕೈಲಾಸವೆನಿಸಿಕೊಂಡ ಗೋಕರ್ಣದ ರಾಮತೀರ್ಥ.

ನಾನು ಅದೇ ಸ್ನಾನ ತೀರಿಸಿಕೊಂಡು ಮೈ ಒರಸಿಕೊಳ್ಳುತಿದ್ದೆ.

ಬೈಲುಸೀಮೆಯ, ತುಂಬ ಭಾವಿಕರಾಗಿ ಕಾಣುವ ಆಗಂತುಕರಿಬ್ಬರು ಅಲ್ಲಿಗೆ ಬಂದು ಸ್ನಾನಕ್ಕೆ ಮೊದಲುಮಾಡಿದರು.

"ಹೆ-ಹೆ-ಹೆ-ಹೆ ಅಹಹ! ಯಾರದು? ಗೊತ್ತಿಲ್ವೆ ನಿಮಗೆ, ಸಂಕಲ್ಪ ಹೇಳಿಸಿ ತೀರ್ಥ ತಕ್ಕೊಂಡ ಹೊರತು ಸ್ನಾನಕ್ಕೆ ಇಳಿಯುವಂತಿಲ್ಲ ಎಂಬ ಸಂಗ್ತಿ, ಆಃ!" ಅಂತ ಕಣ್ಣುಣ್ಣು ಬಿಟ್ಟು ಬೇಸೂರಿನಲಿ ಸ್ಥಾನಿಕ ಭೂಸುರರಲ್ಲಿಯ ಕೆಲವರು ಹೊಂಚುಹಾಕಿ ಕುಳಿತಿದ್ದವರಂತೆ ಅದೇ ಸಮಯಕ್ಕೆ ಪ್ರಕಟವಾಗಿ ಕೇಕೇ ಕೊಟ್ಟರು.

ಏನೋ ಮಹಾ ಪ್ರಮಾದವಾಯಿತೆಂಬಂತೆ ಆಗಂತುಕರು ಗಾಬರಿಯಾಗಿ ಆರ್ಜವದಿಂದ "ನಮಗ ಗೊತ್ತಿಲ್ರಿ!" ಅಂತ ರಾಗ ಎಳೆದರು.

"ಇನ್ನು ಬೇರೆ ಉಪಾಯವಿಲ್ಲ. ಪ್ರಾಯಶ್ಚಿತ್ತ ಆಗಲೇಬೇಕು. ನೀವೊಬ್ಬೊಬ್ರು ನಮಗೆಲ್ಲರಿಗೆ ತಲಾ ಒಂದೊಂದು ರೂಪಾಯಿಯಂತೆ ಕೊಟ್ಟು ಸ್ನಾನ ಮುಂದರಿಸಬಹುದು"—ಈ ಪ್ರಕಾರ ತೀರ್ಮಾನಿಸಿ, ಯಥಾವಿಧಿ ಸಂಕಲ್ಪ ಮಾಡಿ, ಯಥಾ ಸಂಕಲ್ಪ ಬ್ರಹ್ಮದಂಡ ಹೇರಿ, ಆಗಂತುಕರು ಅಲ್ಲಿಂದ ಜಾರಿದ ಮೇಲೆ, ಈ ಭೂಕೈಲಾಸ ಮುನಿಗಳು ತಂತಮ್ಮೊಳಗೆ ಆಡಿಕೊಳ್ಳುವದು ಕೇಳಿಬಂತು: "ಒಳ್ಳೇ ಸಿಕ್ರೇ ಬೇಟೆ, ಇರಲಿ, ಆ ಮಹಾಬಲೇಶ್ವರನ ಕೃಪೆಯಿಂದ ಈ ಹೊತ್ತಿನ ಚಹಾ ಕಾಸು ಆಯ್ತು!"

ತಿನ್ನಲಾಗದ ಲಾಡು

ಅಂಕೋಲೆಯ ಮಧ್ಯಾಹ್ನ ೨ ಗಂಟೆಯ ಉರಿಬಿಸಿಲು.

ನಾನು ಕಾರವಾರಕ್ಕೆ ಹೊರಟಿದ್ದೆ. ಬಸ್ಸು ಇನ್ನೂ ಬಿಡುವುದರಲ್ಲಿತ್ತು.

"ಏ, ಲಾಡೂ, ಇಲ್ಲಾರೋ!" ಅಂತ ನನ್ನ ಮಗ್ಗಲಿಗಿದ್ದವರಾರೋ ಕೂಗಿದರು.

ಹೊರಳಿ ನೋಡಿದೆ. ಅಜಮಾಸು ೫೦-೫೫ ವಯಸ್ಸಿನ ಆಪಾದಮಸ್ತಕ ಖಾದಿಪೋಷಾಕ ತೊಟ್ಟ ದೇಶಭಕ್ತರೊಬ್ಬರು.

ಆಶ್ಚರ್ಯವಾಯಿತು.

"ಮೇಲಿಂದ ಮೇಲೆ ತಡೆಯಲಾಗದ ಬಾಯಾರಿಕೆಯಾಗುವ ಈ ಸೆಕೆಯಲ್ಲಿ ಲಾಡು ತಿನ್ನುವ ಬಯಕೆಯಾಗುವದಾದರೂ ಹೇಗೋ ನಾ ಕಾಣೆ! ಅದರಲ್ಲೂ ಇಂತಹ ಇಳಿವಯಸ್ಸಿನ ದೇಶಸೇವಕರಿಗೆ!!" ಅಂತ ಯಾರೋ ಉದ್ಗರಿಸಿದ್ದು ಕೇಳಿದೆ.

ಅಷ್ಟರಲ್ಲಿ ಯಾವನೋ ಕೂಲಿಯವನಂತೆ ಕಾಣುವವ ಒಂದು ಹೋಲ್ಡಾಲನ್ನು ಹೊತ್ತುಕೊಂಡು ನಾವಿದ್ದಲ್ಲಿಗೆ ಬಂದ.

"ಲಾಡು, ಅದನ್ನು ಮೇಲೇ ಹತ್ತಿಸಿಬಿಡು" ಅಂದರು ಸದ್ರಿ ದೇಶಭಕ್ತರು.

ಆಗ ಹೊಳೆಯಿತು ನಿಜ ಸಂಗ್ತಿ: 'ಲಾಡು' ಎಂಬುದು ತಿನಸಿನ ಹೆಸರಾಗದೆ ತಿನ್ನುವವನದು ಎಂದು!

"ಸಾಬಣ್ಣ"

"ವೈಜ್ಞಾನಿಕ" ಜ್ಯೋತಿಷಿಗಳೊಬ್ಬರು ಪ್ರಸಿದ್ಧ ಮುಂದಾಳೊಬ್ಬರ ಮುಂದಿನ ಏಳು ವರ್ಷಗಳ ಸಂಪೂರ್ಣ ಭವಿಷ್ಯವನ್ನು ಅವರು ಕೊಟ್ಟ ಜನ್ಮದಿನದ ಆಧಾರದ ಮೇಲೆ ಬರೆದು ಕೊಟ್ಟಿದ್ದಾರಂತೆ. ಅವರು ಕೊಟ್ಟ ಜನ್ಮದಿನ—ಫೆಬ್ರುವರಿ ೩೦, ೧೯೦೫.

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

ಮದನ ಕಾಮಾನಂದ ಗುಟಿ

[ವೀರ್ಯಸ್ತಂಭನವಟಿ ಕಿಮ್ಮತ್ತು ರೂ. ೫—೦—೦]

ಕ್ಷೀಣರಿಗೂ ವಾರ್ಧಕ್ಯ ಹೊಂದದವರಿಗೂ ವಿಷಯಾನಂದದ ಪ್ರೇಮೀ ಹಾಗೂ ರಸಿಕ ಜನರಿಗೆ ಅತ್ಯವಶ್ಯಕ ಔಷಧ


ಶೀಘ್ರ ಸ್ಖಲನವನ್ನು ನಿರ್ಮೂಲ ಮಾಡಿ ಸ್ತಂಭನಶಕ್ತಿ ಹಾಗೂ ಕಾಮಶಕ್ತಿಯನ್ನು ಹೆಚ್ಚಿಸಿ ಸಂಭೋಗದಲ್ಲಿ ಯೌವನದ ಪರಮಾವಧಿಯನ್ನುಂಟು ಮಾಡುವದಕ್ಕಾಗಿ ಇದು ಸಾವಿರಾರು ಜನರಿಂದ ಪರೀಕ್ಷಿಸಲ್ಪಟ್ಟ ಅಪಾಯ ರಹಿತವಾದ ಔಷಧವಾಗಿದೆ.

ಸಂಭೋಗಕ್ಕಿಂತಲೂ ಮುಂಚಿತವಾಗಿ ಒಂದು ಗುಳಿಗೆಯನ್ನು ಸೇವಿಸುವದರಿಂದ ಒಂದೇ ತಾಸಿನಲ್ಲಿ ಶೀಘ್ರ ವೀರ್ಯಸ್ಖಲನವನ್ನು ತಡೆಗಟ್ಟಿ ಸಂಭೋಗದಲ್ಲಿ ಹರ್ಷ, ಅನಂತರ ಪ್ರಚಂಡ ಉತ್ಸಾಹ ಉತ್ಪನ್ನ ಮಾಡಿ ಕಾಮಶಕ್ತಿಯ ಪ್ರಬಲ ವಾಸನೆ ಮತ್ತು ಸ್ತಂಭನ ಶಕ್ತಿ ಹೆಚ್ಚಾಗುವದರಿಂದ ಸಂಭೋಗದಲ್ಲಿ ಸ್ತ್ರೀಯನ್ನು ಪರಾಜಯ ಮನ ಶಕ್ತಿ, ಮದ ಮತ್ತು ತೇಜ ಉಂಟಾಗುತ್ತದೆ.

ಪತ್ತೆ:— ವೈದ್ಯರಾಜ ಏ. ಬಿ. ಶಿದನಾಳ

ಮನೆ ನಂಬರ ೧೩೬೯ (ಕೆ. ವಿ.) ಬಸವನಗಲ್ಲಿ, ಬೆಳಗಾವಿ

೪೦ ವರ್ಷದ ಮೇಲೆ ಕನ್ನಡಕ ಬೇಕು



ನಿಮಗೆ ತಾಗುವ ಕನ್ನಡಕವನ್ನು ಕಳಿಸುತ್ತೇವೆ

ಚೀಲಿ ಗೂಡು ಸಹಿತ ರೂ. ೬—೦—೦. ವ್ಹಿ. ಪಿ. ಖರ್ಚು ಬೇರೆ. ವಯಸ್ಸು ತಿಳಿಸಿದರೆ ಸಾಕು. ಹತ್ತದಿದ್ದರೆ ಬದಲಿಸಲಾಗುವದು.

ಎಸ್. ಎಲ್. ಧಾಕಪ್ಪಾ & ಸನ್

(ಕನ್ನಡಕದ ಶಾಖೆ) ಸಿರಸಿ, ಕ್ಯಾನರಾ

ಲೇಖಕರು :
ಎಂ ನಾಗರಾಜರಾವ್

...ವರಿ ಯೋಜನೆ



...ಟ್ಟಿನ ಅಡಿ ...ಡ್ಡಿ ಹಾಗು ...ದಿವಾಕರ ...ದ ಪ್ರಾಚ್ಯ ...ವರಿಷ್ಠರಾದ ...ಸರಕಾರದ ...ರಾದ ಶ್ರೀ

ಕೋಟಿ ರೂಗಳ ವೆಚ್ಚ ತಗಲುವದು. ಇಲ್ಲಿಯು ನೀರನ್ನು ಹರಿಸುವದಕ್ಕಾಗಿ ೪೦೦ ಮೈಲುಗಳ ಕಾಲುವೆಯನ್ನು ಆರುಕೋಟಿ ರೂಪಾಯಿಗಳ ವೆಚ್ಚದ ಮೇಲೆ ತೋಡಿಸಲಾಗುವದು. ಈ ಅಣೆಕಟ್ಟು ಕಟ್ಟುವದರಿಂದ ೧೩೫ ಚೌರಸ ಮೈಲುಗಳಷ್ಟು ಭೂಮಿಯಲ್ಲಿ ಸದಾ ನೀರು ನಿಲ್ಲುವದು. ಈ ೧೩೫ ಚೌರಸ ಮೈಲಿನಲ್ಲಿ ೭೮ ಮದ್ರಾಸದಲ್ಲಿ, ೫೭ ಹೈದರಾಬಾದದಲ್ಲಿ ಹೀಗೆ ನಿಂತ ನೀರು ೧೨೦-೧೩೦ ಲಕ್ಷ ಘನ ಅಡಿಯಷ್ಟಾಗುವದು. ಈ ನೀರನ್ನು ಮದ್ರಾಸ ಹೈದರಾಬಾದಗಳು ಹಂಚಿಕೊಳ್ಳುವವು. ಈ ನೀರಿನ ಸಹಾಯದಿಂದ ಮದ್ರಾಸ ಸರಕಾರವು ೩ ಲಕ್ಷ ಎಕರೆ ಭೂಮಿಯಲ್ಲಿ ಮತ್ತು ಹೈದರಾಬಾದ ಸರಕಾರವು ಅದರಿಂದ ೭ ಲಕ್ಷ ಎಕರೆ ಭೂಮಿಯಲ್ಲಿ ನೀರಾವರಿಯನ್ನು ಕೈಕೊಳ್ಳುವರು. ಮದ್ರಾಸ ಭಾಗದ ಕಾಲುವೆಯು ೨೨೦ ಮೈಲು ಉದ್ದವಿದ್ದು ಕರ್ನೂಲು ಜಿಲ್ಲೆಯ ಗೊಣೆಗುಂಡ್ಲ ಹಳ್ಳಿಯ ವರೆಗೆ ಹೋಗುವದು.

ಈ ಯೋಜನೆಯಿಂದಾಗುವ ಲಾಭ

ಹತ್ತಿ ಬೆಳೆಯುವ ಎರೆಭೂಮಿಯಲ್ಲಿ ನೀರಾವರಿ ಕೈಕೊಳ್ಳುವದು ಇದುವರೆಗೆ



...ಣೆಕಟ್ಟಿನ ಯೋಜನಾಕ್ರಮ

...ದರಾಬಾದ ...ನೆರವೇರಿಸಿ ...ವು ೧೯೫೩ ...ಅಂದಾಜು ...ಬಳ್ಳಾರಿ ...ಕ್ಕೆ ಮೂರು ...ಪುರ ಎಂಬ ...ಯೋಜನೆಯಲ್ಲಿ ...ಕೆಲಸಗಾರರು ...ವಾಗಿ ಚಿಕ್ಕ ...ನ್ನು ನಿರ್ಮಿಸ ...ರೂಪಾಯಿ ...ಅಂದಾಜು ...ಮದ್ರಾಸ ...ರಗಳು ಸಮ ...ಈ ಯೋಜನೆ ...ಹೊಸಪೇಟೆ, ...ಮತ್ತು ಆದ ...ಕರ್ನೂಲು ...ಟಕದಲ್ಲಿರುವ ...ಲಾಭವಿದೆ. ...೨೦೦ ಅಡಿ ...ದ್ದಾಗುವದು. ...ದಾರು ಏಳು

ಸಾಧ್ಯವಾಗಿದ್ದಿಲ್ಲ. ಆದರೆ ಈ ಅಣೆಕಟ್ಟಿನಿಂದ ದೊರೆಯುವ ನೀರಿನ ಹಂಚುವಿಕೆಯ ಮೇಲೆ ಕ್ರಮಬದ್ಧ ನಿಯಂತ್ರಣವಿಟ್ಟರೆ ಹಾಗು ನೀರಾವರಿಯು ಅತಿರೇಕಕ್ಕೆ ಮುಟ್ಟದಂತೆ ವ್ಯವಸ್ಥೆ ಮಾಡಿದರೆ ನೀರಾವರಿಯನ್ನು ಕೈಕೊಳ್ಳುವದು ಸಾಧ್ಯವಾಗುವದೆಂದು ಸಿದ್ಧಾಂತವಾಗಿದೆ. ಕಾಳುಕಡಿ, ಹತ್ತಿ ಮತ್ತು ಸೇಂಗಾ ಮೊದಲಾದ ಒಣ ಹಾಗು ರೊಕ್ಕದ ಬೆಳೆಗಳನ್ನು ಹತ್ತರಲ್ಲಿ ಒಂಬತ್ತು ಪಾಲು ಭೂಮಿಯಲ್ಲಿ ಬೆಳೆಯಲಿರುವದರಿಂದ ಈ ಭೂಮಿಗಳಿಗೆ ೧೫ ದಿನಕ್ಕೊಮ್ಮೆ ನೀರುಣಿಸಿದರೆ ಎರೆಭೂಮಿ ಕೆಡುವದಿಲ್ಲ. ಮೇಲಾಗಿ ಉದ್ದ ಎಳೆಯ ಅತ್ಯುತ್ತಮವಾದ ಹತ್ತಿಯನ್ನು ಎಕರೆಗೆ ೧೨೦೦ ಪೌಂಡುಗಳಷ್ಟು ಬೆಳೆಯಬಹುದು.

ಈ ನೀರಾವರಿ ಯೋಜನೆಯ ಪರಿಣಾಮವಾಗಿ ವಿದ್ಯುಚ್ಛಕ್ತಿ ಉತ್ಪಾದನೆಯೂ ಹೆಚ್ಚುವದು. ಈ ಯೋಜನೆಯಿಂದ ದೊರೆಯುವ ನೀರಿನ ಸಹಾಯದಿಂದ ವರ್ಷದ ಎಂಟು ತಿಂಗಳಲ್ಲಿ ೨೦೮೦೦ ಕಿಲೊವ್ಯಾಟುಗಳಷ್ಟು ಹಾಗು ಬೇಸಿಗೆಯ ನಾಲ್ಕು ತಿಂಗಳಲ್ಲಿ ೬೮೦೦ ಕಿಲೊವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುವದು. ಈ ಬಗ್ಗೆ ಮುಖ್ಯ ಸಾಗರದಲ್ಲಿ ವಿದ್ಯುದಾಗರವನ್ನು ರಚಿಸಲಾಗಿದೆ. ಹೈದರಾಬಾದ ಸರಕಾರದವರಾದರೊ ೧೦೦೦೦೦ ಕಿಲೊವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಂಚಿಕೆಯಲ್ಲಿದ್ದಾರೆ. ಈ ವಿದ್ಯುಚ್ಛಕ್ತಿಯನ್ನು ಗೃಹೋಪಯೋಗಿ ಬೇಸಾಯಗಳಿಗೂ ಉಪಯೋಗಿಸಿಕೊಳ್ಳಬಹುದಾಗಿದೆ. ಸಕ್ಕರೆ, ಅರಳೆ ಮೊದಲಾದ ಗಿರಣಿಗಳಲ್ಲದೆ ಈ ಪ್ರದೇಶಗಳಲ್ಲಿ ದೊರೆಯುವ ಕಬ್ಬಿಣ, ತಾಮ್ರ ಮೊದಲಾದ ಲೋಹಗಳ ಕಾರಖಾನೆಗಳನ್ನೂ ಈ ವಿದ್ಯುಚ್ಛಕ್ತಿಯ ಸಹಾಯದಿಂದ ಸ್ಥಾಪಿಸಲು ಬೇಕಾದಷ್ಟು ಅವಕಾಶವಿದೆ.

ಈ ಯೋಜನೆಯನ್ನು ಸರ್ ಆರ್ಥರ ಕಾಟನ್ನರೇ ಬಹುಶಃ ೧೮೫೮ ರಲ್ಲಿ ಸೂಚಿಸಿದರು. ಕಾರಣಾಂತರಗಳಿಂದ ಈ ಯೋಜನೆಯನ್ನು ಮುಂದೂಡಲಾಯಿತು. ದತ್ತಮಂಡಳ ಜಿಲ್ಲೆಗಳು ವಿಶೇಷವಾಗಿ ಬಳ್ಳಾರಿ ಹಾಗು ರಾಯಚೂರುಗಳು ಬರಗಾಲಕ್ಕೆ ತುತ್ತಾಗುತ್ತ ಬರುತ್ತಿದ್ದರಿಂದ ಈ ಯೋಜನೆಯನ್ನು ಕೂಡಲೆ ಕೈಕೊಳ್ಳಬೇಕೆಂದು ಕ್ಷಾಮವಿಚಾರಣಾ ಸಮಿತಿಯವರು ೧೯೦೧-೧೯೦೩ ರಲ್ಲಿ ಒತ್ತಿ ಹೇಳಲು ೧೯೦೫ ರಲ್ಲಿ ಇದಕ್ಕೆ ಹಿಂದುಸ್ತಾನ ಸರಕಾರದ ಒಪ್ಪಿಗೆ ದೊರೆಯಿತು. ಆದರೆ ಆಗ ಕೃಷ್ಣಾ ಕಾವೇರಿ ಯೋಜನೆಗಳು ಸರಕಾರದ ಮುಂದಿದ್ದುದರಿಂದ ಈ ಯೋಜನೆಯನ್ನು ಕೈಕೊಳ್ಳಲಿಲ್ಲ. ೧೯೩೭ ರಲ್ಲಿ ಪುನಃ ಈ ಪ್ರಶ್ನೆ ಹೊರಟಾಗ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ತಿಮ್ಮಲಾಪುರದ ಬಳಿ ಈ ತುಂಗಭದ್ರಾನದಿಗೆ ಅಣೆಕಟ್ಟನ್ನು ಕಟ್ಟಬಹುದೋ ಎಂಬದನ್ನು ವಿಚಾರಿಸಲು ಓರ್ವ ಅಧಿಕಾರಿಯನ್ನು ಸರಕಾರವು ನೇಮಿಸಿತು. ಈ ಅಧಿಕಾರಿಯು ಈಗಿನ ಮ್ಯಾಳಾಪುರದಬಳಿಯಲ್ಲೇ ಅಣೆಕಟ್ಟನ್ನು ಕಟ್ಟುವದೇ ಒಳಿತೆಂದು ಸೂಚಿಸಿದನು. ಅದರಂತೆ ಈ ಯೋಜನೆಯು ಪ್ರಾರಂಭವಾಗಿದೆ. ತಿಮ್ಮಲಾಪುರದ ಬಳಿಯ ಅಣೆಕಟ್ಟನ್ನು ಕಟ್ಟಿದರೆ ಕರ್ನಾಟಕಕ್ಕೆ ಹೆಚ್ಚು ಉಪಯೋಗವಾಗುವದೆಂದೂ ಮ್ಯಾಳಾಪುರದ ಯೋಜನೆಯಿಂದ ಆಂಧ್ರರಿಗಷ್ಟೆ ಉಪಯೋಗವಾಗುವದೆಂದೂ ಹೊಸಪೇಟೆಯ ಸಣ್ಣ ಸಂಗಡವೊಂದು ಈಗಲೂ ಚಳವಳಿ ನಡೆಸಿದೆ.

ಇಸ್ರೇಲಿನ ಅಧ್ಯಕ್ಷ ಡಾ. ಚೈಂ ವೇಜಮನ್ನರಿಗೆ ತಮ್ಮ ಕುರುಜನ್ನು ಬ್ರಿಟನ್ನಿನ ಪರವಾಗಿ ಅಲ್ಲಿಗೆ ರಾಯಭಾರಿ ಮಂತ್ರಿಯಾಗಿ ಹೋದ ಶ್ರೀ ಅಲೆಂಗ್ಸಾಂಡರ್ ನಾಕ್ಸ್ ಹೆಲ್ಮರ್ರು ಅರುಹಿದರೆಂದು ತಿಳಿಯುತ್ತದೆ.

ಲಂಡನ್ನಿನಲ್ಲಿರುವ ಇಸ್ರೇಲಿ ರಾಯಭಾರಿ ಮಂತ್ರಿ ಡಾ. ಮಾರ್ಡಿಕೈ ಇಲಿಯಾಶರು ಭಾರತದಂತೆ ಇಸ್ರೇಲಾದರೂ ಅಂತಾರಾಷ್ಟ್ರೀಯ ಪ್ರಶ್ನೆಗಳನ್ನು ಸ್ವತಂತ್ರ ದೃಷ್ಟಿಕೋನದಿಂದ ನೋಡಿ ಯಾವ ಗುಂಪಿಗೂ ಸೇರದೆ ನಿಷ್ಪಕ್ಷಪಾತತೆಯಿಂದ ಪರಿಶೀಲಿಸುವ ಧೋರಣೆಯುಳ್ಳದ್ದಾಗಿದೆ ಎಂದು ಹೇಳಿಕೆ ಕೊಟ್ಟರು.

ಮೂಲೆ ಮೂಲೆಗಳಿಂದ

ಪ್ಯೊಂ[illegible] ನಗರವನ್ನು [illegible] ಬ್ರಿಟಿಶ್ ಸರಕಾರದ ಸೈನ್ಯಗಳು [illegible] ಸಂಯುಕ್ತ ರಾಜಧಾನಿಯಾಗಿ [illegible] ಕೇಂದ್ರವೂ ಆಗಿದೆ.

[illegible] ಬ್ರಿಟಿಶ್ ಸೈನ್ಯ [illegible].

ಬ್ರಿಟನ್, ಭಾರತ ಮತ್ತು ಪಾಕಿಸ್ತಾನಗಳ ರಾಯಭಾರಿಗಳಿಗೆ ಬ್ರಿಟಿಶ್ ಸರಕಾರವು ತನ್ನ ಸೈನಿಕ ಅವಶ್ಯಕತೆಗಳನ್ನು ತಿಳಿಸಿದೆ. ಈಗ ನಡೆಯುತ್ತಿರುವ ಕಾಮನ್‌ವೆಲ್ತ ಸಭೆಯ ಮಾತುಕತೆ ಒಂದು ನಿರ್ದಿಷ್ಟ ಘಟ್ಟಕ್ಕೆ ಬಂದು ಮುಟ್ಟುತ್ತದೆ.

ಉತ್ತರ ಬ್ರಹ್ಮದಿಂದ ಭಾರತೀಯರ ಎರಡು ಬಣಗಳು ಅನೇಕ ಸಾಹಸಗಳ ಮೂಲಕ ಅಸ್ಸಾಮಿನ ಮಾರ್ಗದಿಕಕ್ಕೆ ಬಂದುಮುಟ್ಟಿದ್ದಾರೆ. ಒಂದನೆಯ ಬಣ [illegible] ಎರಡನೆಯದು [illegible] ಎಂದು ತಿಳಿದುಬಂದಿದೆ. ಹೆಂಗಸರು ಮಕ್ಕಳುಗಳನ್ನು ಕರೆದುಕೊಂಡು ಬಂದಿದ್ದಾರೆ.

ಶಾಂಘಾಯಿಯ ಆಕ್ರಮಣವನ್ನು ಕಮ್ಯೂನಿಸ್ಟರು ಸಾಂಗವಾಗಿ ನೆರವೇರಿಸಿದರು. ಅವರು ಚಂಚಲಮತಿಗಳಾದ ಅನೇಕ ಸರಕಾರೀ ಸೈನಿಕರನ್ನು ಮುತ್ತಿದರು, ಎಲ್ಲೂ ಯಾರೂ ಅವರನ್ನು ಇದಿರಿಸಲಿಲ್ಲ. ರಾಷ್ಟ್ರೀಯ ಪಕ್ಷದ ಅನೇಕರು ತಮ್ಮ ಸಮವಸ್ತ್ರವನ್ನೂ ಆಯುಧವನ್ನೂ ತೆಗೆದಿಟ್ಟು ಸೈನಿಕೇತರ ಪ್ರಜೆಗಳಾಗಿ ಆತ್ಮರಕ್ಷಣೆ ಮಾಡಿಕೊಂಡರು. ಅಲ್ಲಿಯ ೩೦೦೦ ಸಂಖ್ಯೆಯ ಬ್ರಿಟಿಶ್ ಸೈನಿಕರಿಗೆ ಅಲ್ಪಸ್ವಲ್ಪ ಹಾನಿಯಾಗಿದ್ದು [illegible] ಎಂದು ಬ್ರಿಟಿಶ್ ರಾಯಭಾರಿ ಶ್ರೀ ಆರ್. ಡಬ್ಲ್ಯು. ಉರ್ಕುಹಾರ್ಟನು ಹೇಳಿದನು. ಅಲ್ಲದೆ ಅಲ್ಲಿಯ ೧೬೦೦ ಅಮೇರಿಕನ್ನರಲ್ಲಿ ಒಬ್ಬರಿಗೂ ಯಾವ ಅಪಾಯವೂ ಸಂಭವಿಸಿಲ್ಲ ಎಂದೂ ಹೇಳಲಾಗಿದೆ. ಶಾಂಘಾಯಿಯನ್ನು ಆಕ್ರಮಿಸಿಕೊಳ್ಳಲು ೩೦೦ ಲಾರಿಗಳ ತುಂಬ ತುಂಬಿದ ಕಮ್ಯೂನಿಸ್ಟ್ ಸೈನಿಕರು ಅಲ್ಲಿಗೆ [illegible] ಮತ್ತು ಕಮ್ಯೂನಿಸ್ಟರ ತೋಟುಗಳು [illegible] ವಶಕ್ಕೆ ಬಂದಿವೆ. ವೂಸುಂಗ್ ಬಂದರ ಕಮ್ಯೂನಿಸ್ಟರ ಕೈಗೆ ಬಿದ್ದುದರಿಂದ ಪರದೇಶದ ಎಲ್ಲ ನೌಕಾ ಪಡೆಗಳೂ ಅಲ್ಲಿಂದ ಕಾಲುಕಿತ್ತು ಯಾಂಗ್‌ಟ್ಸೀ ನದಿಯ ಮುಖದತ್ತ ಧಾವಿಸಿವೆ. ಹಾಂಕಾಂಗಿನ ರಕ್ಷಣೆಗೆ ನೆರವಾಗುವುದು ತಮ್ಮ ಅಮೇರಿಕನ್ನರ ವಿಚಾರದಲ್ಲಿಲ್ಲ ಎಂದು ತಿಳಿಯುತ್ತದೆ. ಅಲ್ಲಿಂದ ಅಮೇರಿಕನ್ ಪ್ರಜೆಗಳನ್ನು ಹೊರಗೆ ಕರೆಲಾಗುತ್ತಿದೆ. ದಕ್ಷಿಣ ಚೀನದಲ್ಲಿರುವ ಅಮೇರಿಕನ್ನರು ಮಾತ್ರ ಅಲ್ಲೇ ಉಳಿದಿದ್ದಾರೆ. ಹಾಂಕಾಂಗ್ ಮತ್ತು ಶ್ಯಾಂಘಾಯಿಗಳಲ್ಲಿಯ ೫೦೦ ಭಾರತೀಯರು ಸುರಕ್ಷಿತವಾಗಿದ್ದಾರೆಂದೂ [illegible]

[illegible]

ಪ್ಯಾರಿಸಿನಲ್ಲಿ [illegible]

ವಾಷಿಂಗ್‌ಟನ್ನಿನ [illegible]

ಬ್ರಹ್ಮದೇಶವು [illegible]

ಜಪಾನಿನ [illegible]

ನಾರ್ವೆ [illegible]

ಅಫ್ಘನ್ [illegible]

ಅಮೇರಿಕದಿಂದ [illegible]



ಇಂಗ್ಲೆಂಡಿನ್ನ ನಿಂದ್‌ ನೆಕ್ಸ್‌ನಲ್ಲಿ ತೆರೆದ ವಿಮಾನನಿಲ್ದಾಣ [illegible] ಮುಂತಾದವುಗಳಿವೆ.

ರೂಪರಂಗ

ಯಕ್ಷಗಾನ ನಾಟಕದ ವೈಶಿಷ್ಟ್ಯ

"ಸಮುದ್ರತೀರದ ಈ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಲಕ್ಷಾವಧಿ ಮಂದಿಗೆ ವೆಚ್ಚದಿಂದಲೇ ಸಾದಾ ಸಲಕರಣೆಗಳಿಂದಲೇ ರಸಾನಂದವನ್ನೊದಗಿಸಿಕೊಡುತ್ತಿರುವ ಈ ಯಕ್ಷಗಾನನಾಟಕ ಕಲೆಯು ಕನ್ನಡ ಜನಾಂಗದ ಉತ್ತಮ ವೈಶಿಷ್ಟ್ಯಗಳಲ್ಲೊಂದಾಗಿದೆ," ಎಂದು ಶಿರಸಿಯಲ್ಲಿ ನಡೆದ ಪ್ರಥಮ ಯಕ್ಷಗಾನ ನಾಟಕ ಪರಿಷತ್ತಿನಲ್ಲಿ ...ಜೆ. ಆರ್. ಪಾಂಡೇಶ್ವರರು ಅಧ್ಯಕ್ಷ ಭಾಷಣ ಮಾಡುತ್ತ ಸಾರಿದರು.

ಯಕ್ಷರ ಗಾನನಾಟಕ

ಸಮುದ್ರತೀರದ ಈ ದಕ್ಷಿಣೋತ್ತರ ಕನ್ನಡ ...ಗಳಲ್ಲಿ ಲಕ್ಷಾವಧಿ ಮಂದಿಗೆ ಅಲ್ಪ ವೆಚ್ಚ...ಲೇ ಸಾದಾ ಸಲಕರಣೆಗಳಿಂದಲೇ ರಸಾ...ವನ್ನೊದಗಿಸಿಕೊಡುತ್ತ ಬಂದಿರುವ ಈ ...ಗಾನ ನಾಟಕ ಕಲೆಯು, ಕನ್ನಡ ಜನಾಂ... ಉತ್ತಮ ವೈಶಿಷ್ಟ್ಯಗಳಲ್ಲೊಂದಾಗಿದೆ. ...ಯಕ್ಷಗಾನವೆಂಬ ಹೆಸರು ಹೇಗೆ ಬಂದಿ...ಎಂಬುದು ಒಂದು ದೊಡ್ಡ ಊಹಾಪೋಹದ ...ವಿಷಯವಾಗಿದೆ. ಇದಕ್ಕೆ ದಶಾವತಾರದ ಆಟ... ಹೆಸರು ಬಹಳ ಹಿಂದಿನಿಂದಲೂ ಬಂದಿ...ದೆಂಬುದನ್ನು ಮರೆಯಕೂಡದು. ...ರು ಧನಾಧಿಪ ಕುಬೇರನ ಸೇವಕ ವರ್ಗ...; ಆತನ ಹೂದೋಟ, ಧನಕನಕ ವಸ್ತು...ನ ಭಂಡಾರಗಳನ್ನು ಕಾದುಕೊಂಡಿರುವ ...ದೇವತೆಗಳೆಂದು ನಿಘಂಟುಗಳಲ್ಲಿ ಅರ್ಥ...ಸಿಗಳಿವೆ. ದುರ್ಗಾದೇವತೆಯು ಮಾನವ...ಕಮೊಡನೆ ಯಕ್ಷ ಪತ್ನಿಯರಾದ ಯಕ್ಷಿಣಿ... ಮೂಲಕವಾಗಿಯೇ ವ್ಯವಹರಿಸುತ್ತಿರುವ ...ಪುರಾಣೋಕ್ತ ಪ್ರತೀತಿಯೂ ಇದೆ. ..., ಆ ಯಕ್ಷರು ಹಾಡುತ್ತಿದ್ದ ಸಂಗೀತ, ...ತ್ತಿದ್ದ ಆಟ, ನಾಟಕ ಹೇಗಿದ್ದಿತೆಂಬ ಬಗೆಗೆ ...ಯಾತ್ಮಕವಾದ ಜ್ಞಾನವಿನ್ನೂ ಪ್ರಚುರ...ವಾಗುವುದಿಲ್ಲ. ಬಹುಶಃ ಅವರು ಅಳಕಾ...ದ ಉದ್ಯಾನವನಗಳಲ್ಲಿ ಗಾನ ನೃತ್ಯ ಸಮ...ವಾದ ಸಾಮೂಹಿಕ ಆಟಗಳನ್ನಾಡುತ್ತಿದ್ದ...ು ಆವರ ಆಟಗಳು ಯಕ್ಷರ ಗಾನ-...ಕವೆಂದು ಕರೆಯಲ್ಪಟ್ಟವೆಂದೂ ಊಹಿಸಿ...ಬಹುದು. ಈಗಲೂ ಯಕ್ಷ ಯಕ್ಷಿಣಿ...ು ಏಕಾಂತವಾದ ಅರಣ್ಯ, ನದೀತೀರ, ...ದುರ್ಗಗಳಲ್ಲಿಯೂ ಪುಷ್ಪೋದ್ಯಾನಗಳ...ಲ್ಲಿ ನೀರವವಾದ ವಿಲಾಸ ಸ್ಥಾನಗಳ...ಲ್ಲಿ ಸಂಚರಿಸುತ್ತಿರುವ ಅದೃಶ್ಯ ಜೀವಿ...ಗಳು ಹೇಳುವ ಪರಿಪಾಠ ಇದ್ದೇ ಇದೆಯ...ಲ್ಲ? ಅವರ ಜೀವನ ಅನಂದಮಯವಾದ ... ಜೀವನ. ಈ ಯಕ್ಷಗಾನ-ನಾಟಕ...ವನವು ಕೂಡ ಆನಂದದಿಂದ ತುಂಬಿ...ತುಳುಕುವ, ನವರಸಭರಿತವಾದ ವಿಲಾಸ ...ಜೀವನ. ಅದ್ದರಿಂದಲೇ ಈ ಆಟ-ನಾಟಕಕ್ಕೆ ...ಯಕ್ಷರಗಾನ-ನಾಟಕನೆಂಬ ಹೆಸರು ಪ್ರಚಾ...ರಕ್ಕೆ ಬಂದಿತೆನ್ನಬಹುದು. ಗಾಯನ ವಿದ್ಯೆಗೆ ...ಗಂಧರ್ವರು ಹೆಸರು ಹೊಂದಿದ್ದಂತೆ, ಸಾಲಂ...ಕೃತ ನೃತ್ಯಗೀತಾವಿನೋದವಿದ್ಯೆಗೆ ಯಕ್ಷರು ...ಪ್ರಸಿದ್ಧರಾಗಿರಬೇಕು. ದೇವದೇವನು ದುಷ್ಟ...ರನ್ನು ದಂಡಿಸಿ, ಶಿಷ್ಟರನ್ನು ಪರಿಪಾಲಿಸಿ, ...ಜಾಗೃತಿ ಮಾಡುವ ಸಲುವಾಗಿ ದಶಾವ...ತಾರ ಮಾಡಿದನೆಂದು ಅಸ್ತಿಕರು ನಂಬುತ್ತಾ...ರೆ. ಆ ಅವತಾರಗಳ ಪುಣ್ಯ ಕಥೆಗಳನ್ನು ...ಆಡಿ ತೋರಿಸುವ ಈ ಯಕ್ಷರ ಗಾನ ನಾಟ...ಕಕ್ಕೆ ದಶಾವತಾರ ನಾಟಕವೆಂಬ ಹೆಸರು ನಿಜ...ವಾಗಿಯೂ ಒಪ್ಪುತ್ತದೆ. ಇದು ಗದ್ಯ ಭಾಗವೇ ...ಇಲ್ಲದ ಕೇವಲ ಗಾನನಾಟಕವಾಗಿದೆ. ಭರತ...ಖಂಡದ ಉಜ್ವಲ ಕಾವ್ಯ ಗ್ರಂಥಗಳೆಂದರೆ, ...ರಾಮಾಯಣ, ಭಾರತ ಮತ್ತು ಭಾಗವತಗಳು. ...ಈ ಯಕ್ಷಗಾನ ನಾಟಕದ "ಪ್ರಸಂಗ"...ಗಳೆಲ್ಲವೂ ಈ ಗ್ರಂಥಾಂತರ್ಗತವಾದ ಕಥಾ...ಭಾಗಗಳೇ ಆಗಿರುತ್ತವಲ್ಲವೇ? ಅದ್ದರಿಂದ ...ಎಲ್ಲಿಯವರೆಗೆ ಭಾರತ ರಾಮಾಯಣಗಳು ...ಉಳಿಯುವವೋ ಅಲ್ಲಿಯ ವರೆಗೆ ಈ ಯಕ್ಷ...ಗಾನ ನಾಟಕಗಳು ಉಳಿಯುವುವೆಂದು ...ನಿಶ್ಚಯವಾಗಿ ಹೇಳಬಹುದು.

ಯಕ್ಷಗಾನ ನಾಟಕದ ವೈಶಿಷ್ಟ್ಯ

...ನಾಟಕ ಮತ್ತು ಯಕ್ಷಗಾನನಾಟಕಗಳಲ್ಲಿ ...ಇರುವ ಒಂದು ಮುಖ್ಯ ವ್ಯತ್ಯಾಸ ...ವಿದೆ, ಸಾಧಾರಣ ನಾಟಕದಲ್ಲಿ ರಾಜಾಸ್ಥಾನ, ...ಯುದ್ಧ, ವರ್ಣನೆ-ಮೊದಲಾದ ಸಂದರ್ಭ...ಗಳಲ್ಲಿ ಮಾತ್ರವೇ ಉಚಿತವಾದ ನೃತ್ಯಕೇಳಿ...ಗಳನ್ನು ಪ್ರದರ್ಶಿಸಲಾಗುವುದು. ಯಕ್ಷಗಾನ ...ನಾಟಕದಲ್ಲಿ ಪ್ರತಿಯೊಂದು ಪಾತ್ರವೂ ತನಗನ್ವ...ಯಿಸುವ ಪದ್ಯದಹಾಡಿಕೆಯಲ್ಲಿ ತಾಳಬದ್ಧವಾಗಿ ...ಕುಣಿಯುವ ಪದ್ಧತಿ ಇರುತ್ತದೆ. ಅದರೂ ಆಯಾ ಪಾತ್ರಗಳ ತಾರತಮ್ಯವನ್ನೂ ಗುಣ ಲಕ್ಷಣಗಳನ್ನೂ ಅರಿತುಕೊಂಡು, ಪಾತ್ರಧಾರಿಗಳು ಕುಣಿತವನ್ನು ಹಿತಮಿತಗೊಳಿಸಿಕೊಳ್ಳುವುದು ಅತ್ಯವಶ್ಯ. ನಾಟಕದಲ್ಲಿ ಗಿರಿ, ನದಿ, ನಗರಾರಣ್ಯಗಳನ್ನು ಕಣ್ಮುಂದೆ ತಂದು ತೋರುವಂತಹ ತೆರೆಯು ದೃಶ್ಯ [ಸೀನರಿ] ಗಳಿರುತ್ತದಾದ್ದರಿಂದ, ಆ ಸನ್ನಿವೇಶಗಳಲ್ಲಿ ಪಾತ್ರಧಾರಿಯು ಕುಣಿತವಿಲ್ಲದೆ, ಮೃಗಬೇಟೆ, ಅರಣ್ಯಗಮನ, ಪರ್ವತಾರೋಹ, ನದೀಯಾನ ಮೊದಲಾದುವುಗಳನ್ನು ಪರಿಣಾಮಕಾರಿಯಾಗಿ ನಟಿಸಿ ತೋರಿಸಲಿಕ್ಕೆ ಸಾಧ್ಯವಾಗುವುದು. ಆದರೆ, ಯಾವ ಹಿನ್ನೆಲೆಯ ದೃಶ್ಯಫಲಕವೂ ಇಲ್ಲದ ಯಕ್ಷಗಾನನಾಟಕ ರಂಗಸ್ಥಳದಲ್ಲಿ, ಇಂತಹ ಸನ್ನಿವೇಶಗಳನ್ನೆಲ್ಲ ಕುಣಿತ, ಅರ್ಥ, ಅರ್ಥಗಟಿಗಳಿಂದಲೇ ತುಂಬಿಸಬೇಕಾಗುವುದು. ಈ ದೃಷ್ಟಿಯನ್ನಿಟ್ಟು ತೂಗಿ ನೋಡಿದಲ್ಲಿ, ಯಕ್ಷಗಾನನಾಟಕದಲ್ಲಿ ಪಾತ್ರವಹಿಸುವವರು ನಾಟಕದ ನಟರಿಗಿಂತ ಹೆಚ್ಚು ಚಾತುರ್ಯವುಳ್ಳವರೂ ಭರತನಾಟ್ಯದ ಪೂರ್ಣ ಪರಿಜ್ಞಾನವುಳ್ಳವರೂ ಆಗಿರಬೇಕೆಂದು ಹೇಳಬಹುದು.

ಚಲನಚಿತ್ರಗಳ ಈಗಿನ ಯುಗದಲ್ಲಿ ಯಕ್ಷಗಾನ ನಾಟಕ ಮತ್ತು ನಾಟಕಗಳನ್ನು ಕೇಳುವವರೇ ಇಲ್ಲವೆಂದು ಅಲ್ಲಲ್ಲಿ ಕೆಲವರು ನಿಟ್ಟುಸಿರು ಬಿಡುತ್ತಿರುವುದುಂಟು. ವಿಚಾರಮಾಡಿ ನೋಡಿದರೆ, ಅಷ್ಟೊಂದು ನಿರಾಶೆಪಡುವ ಕಾರಣವಿಲ್ಲವೆಂದು ಧೈರ್ಯ ತಾಳಬಹುದಾಗಿದೆ. ನಾಲ್ವತ್ತುಕೋಟಿ ಜನಸಂಖ್ಯೆಯುಳ್ಳ ಈ ದೊಡ್ಡ ದೇಶದಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ಜನತೆಗ್ರಾಮವಾಸಿಗಳಾಗಿರುವರು. ಚಲನಚಿತ್ರಗಳು ಸಣ್ಣ ದೊಡ್ಡ ಪೇಟೆಗಳಲ್ಲಿ ಮಾತ್ರವೇ ವಿಶೇಷ ಪ್ರಚಾರದಲ್ಲಿರುವುವು ಹಾಗೂ ಕನ್ನಡ ಭಾಷೆಯ ಚಿತ್ರಗಳು ಕೇವಲ ಕೆಲವೇ ಇರುತ್ತವೆ. ವಿದ್ಯುದ್ಯಂತ್ರಗಳ ಸಹಾಯವಿಲ್ಲದೆ ಚಲನಚಿತ್ರಪ್ರದರ್ಶನ ಮಾಡಲಿಕ್ಕೆ ಬರುವುದಿಲ್ಲವಲ್ಲವೆ? ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ದೊರೆಯಲಿಕ್ಕೂ ಎಲ್ಲ ಹಳ್ಳಿಗಳಿಗೂ ಚಲನಚಿತ್ರ ಮಂದಿರದ ಏರ್ಪಾಡು ಮಾಡಲಿಕ್ಕೂ ಕೋಟ್ಯಂತರ ರೂಪಾಯಿ ವೆಚ್ಚ ಮಾಡಬೇಕಾವುದು. ನಮ್ಮ ದೇಶದ ಸದ್ಯದ ಪರಿಸ್ಥಿತಿಯಲ್ಲಿ ಅಷ್ಟೊಂದು ದೊಡ್ಡ ವೆಚ್ಚ ಅಸಂಭವನೀಯವಾಗಿದೆ. ಒಂದು ವೇಳೆ, ಚಲನಚಿತ್ರ ಪ್ರಚಾರವು ಈಗಿನಗಿಂತ ಇಮ್ಮಡಿ ಮುಮ್ಮಡಿ ಹೆಚ್ಚಿದರೂ, ನಾಟಕ ಮತ್ತು ಯಕ್ಷಗಾನ ನಾಟಕದ ನಟರೂ ನಟಕೂಟಗಳೂ ಹೆದರುವ ಕಾರಣವಿರುವುದಿಲ್ಲ. ಸರ್ವಕ್ರಿಯೆಗಳಿಗೂ ವಿದ್ಯುದ್ಯಂತ್ರಗಳನ್ನೇ ಅಳಾಗಿ ಮಾಡಿಕೊಂಡಿರುವ ಅಮೇರಿಕೆ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಾಟಕ ಮಂದಿರಗಳೂ ಗ್ರಾಮೀಣ (ದೇಸಿ) ನೃತ್ಯ ಗೀತಾವಿನೋದ ಮಂಡಳಿಗಳೂ ದಿನೇ ದಿನೇ ಹಿಗ್ಗುತ್ತಲೇ ಹೋಗಿವೆ. ಹಾಗಾಗಲಿಕ್ಕೆ, ಆ ಜನಾಂಗಗಳ ಕಲಾಭಿರುಚಿಯೇ ಕಾರಣವಾಗಿದೆ. ಯಾಂತ್ರಿಕತೆಯ ಅತಿರೇಕದಿಂದ ಬೇಸತ್ತಿರುವ ಆ ಜನಾಂಗಗಳು ತಮ್ಮಲ್ಲಿಯ ಹಳೆಗಾಲದ ನೃತ್ಯ, ಗೀತೆ, ಆಟ, ನಾಟಕ ಸಂಪ್ರದಾಯಗಳ ಸಾತ್ವಿಕಾನಂದದ ಕಡೆಗೆ ಮೊಗ ಮಾಡಿವೆ. ಪಶ್ಚಿಮ ದೇಶಗಳಷ್ಟು ಯಾಂತ್ರಿಕವಾಗಿ ಮುಂಬರಿಯದಿರುವ ನಮ್ಮ ದೇಶದಲ್ಲಿ, ಸಾತ್ವಿಕಾನಂದದಾಯಿಯಾದ ನಮ್ಮ ಪ್ರಾಚೀನ ಕಲೆಗಳು ಯಾಂತ್ರಿಕ ಕೃತ್ರಿಮತೆಯಿಂದ ಗಾಸಿಗೊಳ್ಳುವವೆಂಬ ಭಯಕ್ಕೆ ಎಡೆಯೇ ಇರುವುದಿಲ್ಲ. ನಮ್ಮ ದೇಶದ, ನಮ್ಮ ಧರ್ಮದ, ನಮ್ಮ ಪ್ರಾಚೀನ ಕಲೆ, ಕೈಗಾರಿಕೆಗಳ ಸುದೈವದಿಂದೆಂಬಂತೆ ಮಹಾತ್ಮಾ ಗಾಂಧಿಯವರು ತಕ್ಕ ಕಾಲದಲ್ಲಿಯೇ ಅವತರಿಸಿ, ಮಸುಕಾಗಿದ್ದ ನಮ್ಮ ಸ್ವದೇಶಾಭಿಮಾನ, ಸ್ವಕಲಾಭಿಮಾನ, ಸ್ವಧರ್ಮಾಭಿಮಾನ, ಸ್ವಜನಾಭಿಮಾನಗಳನ್ನು ಪುನರುಜ್ಜೀವನಗೊಳಿಸಿದರು. ಅದರ ಪರಿಣಾಮವಾಗಿಯೇ ಆಂಗ್ಲ ವಿದ್ಯಾಭ್ಯಾಸ ಮಾಡಿದ "ಸುಶಿಕ್ಷಿತ" ರೆಂಬ ಪಟ್ಟಣಿಗರೂ ಯಾಂತ್ರಿಕೋದ್ಯಮಗಳಾದ ಬಂಡವಳದಾರರ ವರ್ಗದವರೂ ಯಕ್ಷಗಾನ ಬಯಲಾಟ, ಜಾನಪದಗೀತ, ನೃತ್ಯ ಮೊದಲಾದ ನಮ್ಮ ಸ್ವದೇಶೀ ಕಲಾಸಂಸ್ಥೆಗಳ ಕಡೆಗೆ ಕೃಪಾದೃಷ್ಟಿ ಬೀರತೊಡಗಿದರು.

ಕಲಾವಿದರ ಸ್ಥಾನಮಾನ

ದೇಶವೀಗ ಪೂರ್ಣ ಸ್ವತಂತ್ರವಾಗಿದೆ; ಸಂಪೂರ್ಣ ಪ್ರಜಾರಾಜ್ಯದ ಹೊಸ್ತಿಲಲ್ಲಿ ಕಾಲಿಟ್ಟಿದೆ. ಜನಜೀವನದಲ್ಲಿಯೇ ಹುಟ್ಟಿ ಬೆಳೆದು, ಅನಕ್ಷರಸ್ಥರು, ಅಶಿಕ್ಷಿತರು, ಹಿಂದುಳಿದವರು ಎಂದು ಕಡೆಗಣಿಸಲ್ಪಟ್ಟಿರುವ ಸಾಮಾನ್ಯ ಜನತೆಯಲ್ಲಿಯೇ ವಿಶೇಷ ಪ್ರಚಾರದಲ್ಲಿರುವ ನಮ್ಮ ಯಕ್ಷಗಾನ ನಾಟಕಕಲೆಗೆ ಭವ್ಯವಾದ ಭವಿಷ್ಯವಿದೆಯೆಂದು ನಾನು ಎದೆ ತಟ್ಟಿ ಹೇಳುತ್ತೇನೆ. ಜನಜಾಗೃತಿ ಹೆಚ್ಚುತ್ತ ಹೋದಂತೆಲ್ಲ ಯಕ್ಷಗಾನ ನಾಟಕಕ್ಕೆ ಸ್ಥಾನಮಾನ ಮರ್ಯಾದೆಗಳೂ ಹೆಚ್ಚುತ್ತ ಹೋಗುವವು.

ಕಲಾವಿದರೆಲ್ಲ ಕುತ್ಸಿತಶೀಲರೆಂಬ ತಾತ್ಸಾರ ಭಾವವು ಈಗಲೀಗ ಕಡಿಮೆಯಾಗುತ್ತಲಿರುವುದು, ಈ ಕಲೆಯ ಏಳಿಗೆಗೆ ಶುಭೋದಯವಾಗಿದೆ. ಕೆಟ್ಟ ನುಡಿ, ಕೆಟ್ಟನಡೆ ಎಂಬ ಕುಶೀಲವು ಕಲಾವಿದರಿಗೆ ಮಾತ್ರವೇ ಗುತ್ತಿಗೆಯಾಗಿಲ್ಲ. ಈ ಪ್ರಪಂಚದ ಜೀವನದಲ್ಲಿ ಒಳ್ಳೆಯದೂ, ಕೆಟ್ಟದೂ ಹಗಲು ರಾತ್ರಿಗಳಂತೆ, ಸುಖ ದುಃಖಗಳಂತೆ ಸರಿಬೆರಕೆಯಾಗಿಯೇ ಇದೆ. ಕಲಾವಿದರಲ್ಲಿ ಕೆಟ್ಟ ನಡತೆಯವರೂ ಇದ್ದಾರೆ, ಒಳ್ಳೆಯ ನಡತೆಯವರೂ ಇದ್ದಾರೆ. ವ್ಯಾಪಾರಿಗಳಲ್ಲಿ, ಧನಿಕರಲ್ಲಿ, ಸರಕಾರಿ ನೌಕರರಲ್ಲಿ, ಧರ್ಮಬೋಧಕರೆಂಬ ಗುರುವರ್ಗದಲ್ಲಿ, ವಕೀಲರಲ್ಲಿ, ಡಾಕ್ಟರರಲ್ಲಿ, ಒಡೆಯ ಒಕ್ಕಲು ವರ್ಗಗಳಲ್ಲಿ-ಮುಂತಾದ ಎಲ್ಲ ವಿಧದ ಕಸಬು ಕೈಗಾರಿಕೆಯ ಜನವರ್ಗಗಳಲ್ಲಿಯೂ ಸುಶೀಲರೂ ಇದ್ದಾರೆ, ಕುಶೀಲರೂ ಇದ್ದಾರೆ. ಕುಶೀಲರಾದವರಿಗೆ ಕೆಟ್ಟ ಕೀರ್ತಿಯೂ ಸುಶೀಲರಾದವರಿಗೆ ಸತ್ಕೀರ್ತಿಯೂ ತಪ್ಪಲಾರದು. ಕಲಾವಿದರ ವೈಯಕ್ತಿಕ ದುಶ್ಶೀಲದಿಂದ ಕಲೆಗಾಗಲಿ, ಕಲೆಯು ಕೊಡುವ ಆನಂದಕ್ಕಾಗಲಿ ಕೊರತೆಯಾಗದು. ಆಕಳು ಕಪ್ಪಾದರೆ ಹಾಲು ಕಪ್ಪಾದೀತೆ? ವೈದ್ಯನು ರೋಗಿಯಾದರೆ, ಆತನು ಕೊಡುವ ಔಷಧಕ್ಕೆ ರೋಗವುಂಟೆ? ವಿವೇಕಿಗಳೂ ಉದಾರ ಚಿತ್ತರೂ ಪರಾದರಬುದ್ಧಿಯುವರೂ ಅದ ರಸಿಕರು ಕಲಾವಿದನೊಬ್ಬನ ದುರ್ನಡತೆಯಿಂದಾಗಿ ಕಲೆಯನ್ನೇ ತಿರಸ್ಕರಿಸಲಾರರು.

ಚಾರಿತ್ರ್ಯಶುದ್ಧಿ

ಹೀಗೆ ಹೇಳಿದನೆಂದ ಮಾತ್ರಕ್ಕೆ, ಕಲಾವಿದನು ತನ್ನ ಸ್ವಂತ ಜೀವನವನ್ನು ಪರಿಶುದ್ಧನಾಗಿಟ್ಟುಕೊಳ್ಳಲಾರನೆಂದಾಗಲಿ, ಇಟ್ಟುಕೊಳ್ಳಕೂಡದೆಂದಾಗಲಿ ಅರ್ಥವಲ್ಲ.

ಗ್ರಾಮ್ಯಧರ್ಮಪ್ರವೃತ್ತೇಷು
ಕಾಮಲೋಭವಶಂಗತೇ ।
ಈರ್ಷ್ಯಾಕ್ರೋಧಾಭಿಸಂಮೂಢೇ
ಲೋಕೇ ಸುಖಿತದುಃಖಿತೇ ॥

ಅಂದರೆ, ಕಾಮ ಕ್ರೋಧ ಲೋಭ ಮೋಹಾದಿ ದುರ್ಗುಣದ ದುರ್ನಡತೆಯಿಂದ ದುಃಖಭಾಜನರಾದ ಜನರನ್ನು ಸನ್ಮಾರ್ಗಕ್ಕೆ ಹಚ್ಚಿ ಸುಖಿಗಳನ್ನಾಗಿ ಮಾಡುವುದೇ ನಾಟಕವು ಲೋಕಜೀವನದ ಸರ್ವ ಭಾವಗಳನ್ನೂ

-೧೨ನೆಯ ಪುಟಕ್ಕೆ


ವಿಶೇಷ ಲೇಖ

ತುಂಗಭದ್ರೆಯ...

ಕ್ಷಾಮಪೀಡಿತ ದತ್ತಮಂಡಳ ಜಿಲ್ಲೆಗಳ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ೧೯೪೫ ರಲ್ಲಿ ಕೈಕೊಳ್ಳಲ್ಪಟ್ಟ ತುಂಗಭದ್ರೆಯ ನೀರಾವರಿ ಯೋಜನೆಯು ಇದೀಗ ಮಹತ್ವದ ಘಟ್ಟದಲ್ಲಿ ಕಾಲಿಟ್ಟಿದೆ. ಕಳೆದ ತಿಂಗಳು ತಾ. ೨೨ ರಂದು ಈ ನದಿಯ ಅಣೆಕಟ್ಟೆಗೆ ಸಂಬಂಧಿಸಿದ ಕೆಲಸವು ಪ್ರಾರಂಭ



ಅಣೆಕಟ್ಟೆಗೆ ಅಡಿಗಲ್ಲಿಡುವ



ಬ್ರಿಟಿಶ್ ಪ್ರಯಾಣಿಕ ವಿಮಾನಯಾನಸಂಸ್ಥೆ ತನ್ನ ೩೦ ನೆಯ ವರ್ಧಂತಿಯನ್ನಾಚರಿಸಿದ್ದು: ಲಂಡನ್ನಿನ ಮೇಯರರು ಸಮಾರಂಭಕ್ಕೆ ಹಾಜರಿದ್ದರು. ಲಂಡನ್ನಿನ ಗೋಪುರದ ಹಿನ್ನೆಲೆಯಲ್ಲಿ ೬ ರಲ್ಲಿ ಒಂದಾದ ವಿಶಿಷ್ಟ ವಿಮಾನ ನಿಂತಿರುವ ನೋಟ.

ಹೊಸ ಪುಸ್ತಕಗಳು

ವೇದರತ್ನಮಾಲೆಯ ಪ್ರಕಟನಾರಂಭ

ಮೈಸೂರಿನ ಅರಸರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ ಆಸ್ಥಾನವಿದ್ವಾಂಸರು ಅವರ ಅಪ್ಪಣೆಯ ಮೇರೆಗೆ ಶಿಲ್ಪಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಒಂದು ವಿದ್ವತ್ಸಮಿತಿಯನ್ನು ರಚಿಸಿಕೊಂಡು "ವೇದ ರತ್ನಮಾಲೆ" ಎಂಬ ಹೆಸರಿನಲ್ಲಿ ವೇದಚತುಷ್ಟಯವನ್ನು ಒಂದು ಸಾವಿರ ಪುಟಗಳ ೨೫ ಹೆಬ್ಬೊತ್ತಿಗೆಗಳಲ್ಲಿ ಪ್ರಕಟಿಸುವ ಪ್ರಯತ್ನಕ್ಕೆ ಕೈಹಾಕಿದ್ದು ಒಂದು ಮಹದಾನಂದದ ಸುದ್ದಿಯೆನ್ನಬೇಕು. ಏಕೆಂದರೆ, ವೇದಗಳಂತಹ ಪಂಡಿತಾರಾಧ್ಯ ಗ್ರಂಥಗಳನ್ನು ಅಚ್ಚುಹಾಕಿಸಿ ದಕ್ಕಿಸಿಕೊಳ್ಳುವುದು ಸಾಮಾನ್ಯರಿಂದ ಸಾಧ್ಯವಿಲ್ಲ. ಮುನ್ನುಡಿಯಲ್ಲಿ ಮಾಲೆಯ ಸಂಪಾದಕರೂ ಕರ್ನಾಟಕ ಭಾಷಾಥಾರ್ನವಾದ ವಿವರಣೆಗಳ ಕರ್ತರೂ ಆದ ಆಸ್ಥಾನ್ ವಿದ್ವಾನ್ ಎಚ್. ಪಿ. ವೆಂಕಟರಾಯರು ಹೇಳಿರುವಂತೆ "ನಿಸ್ವಾರ್ಥತೆಯಿಂದ ಕೆಲಸ ಮಾಡಲು ತಕ್ಕ ಯೋಗ್ಯತೆಯುಳ್ಳ ಪಂಡಿತವರ್ಗವೂ ರಾಜಾಶ್ರಯವೂ ದೊರೆತರೆ ಮಾತ್ರ ಇಂತಹ ಮಹತ್ಕಾರ್ಯಗಳು ನೆರವೇರಲು ಸಾಧ್ಯವು" ಎಂಬ ಮಾತು ಸರ್ವಾನುಭವಗಮ್ಯವಾದುದು.

ಮಹಾಪ್ರಯತ್ನ

ಅದರಲ್ಲೂ ಕನ್ನಡಿಗರಿಗೆ ಸರ್ವಸಾಧಾರಣವಾಗಿ ತಿಳಿಯುವಂತೆ ತಿಳಿಯಾಗಿ ಶಬ್ದಾರ್ಥ, ಭಾವಾರ್ಥಗಳನ್ನು ಕೊಟ್ಟು– ವೇದವೆಂದರೆ ಒಂದು ಅರ್ಥರಹಿತ ಶಬ್ದರಾಶಿಯಲ್ಲ; ಮೆಸ್ಮೆರಿಜಂ ಮಾಡಿ ದೇವರನ್ನು ಒಲಿಸಿಕೊಂಡು ಅದ್ಭುತ ಕಾರ್ಯದ ಚಮತ್ಕಾರದಿಂದ ಪಾಮರರನ್ನು ಮೋಸಗೊಳಿಸುವ ತಂತ್ರಗ್ರಂಥವಲ್ಲ; ಬ್ರಾಹ್ಮಣರು ಬಾಯಿಪಾಠ ಮಾಡಿಕೊಂಡು ಅಜ್ಞಾನಿಗಳನ್ನು ಮೋಸಗೊಳಿಸಿ ಉದರಭರಣ ಮಾಡಿಕೊಳ್ಳಲು ಬಳಸುವ ಒಂದು ಕ್ಲಿಷ್ಟ ಮೃತಭಾಷೆಯ ಖಟಾಟೋಪಮಯವಾದ ನಿರರ್ಥಕ ಟಾಠಾಧಣವಲ್ಲ; ನಮಗೇಕೆ ಬೇಕು, ನಮಗದರಿಂದೇನಾಗಬೇಕು, ನಮಗದರದೇನು ಸಂಬಂಧ? ಎಂದು ಆಲಸ್ಯ ತಿರಸ್ಕಾರಪೂರ್ವಕವಾಗಿ ಪಾಮರರಿಂದ ಮತ್ತು ನವನಾಗರಿಕಂಮನ್ಯರಿಂದ ಹೀಗಳೆಯಲ್ಪಡತಕ್ಕ ಗೊಡ್ಡು ಕತೆಗಳ, ದಡ್ಡ ಆಚಾರಗಳ ಬಂಫು ಪುರಾಣಗಳ ಕಂತೆಯಲ್ಲ: ವೇದ ಚತುಷ್ಟಯವು ಗಂಗೆ ಹಿಮಾಲಯಗಳ, ವಿಂಧ್ಯ ಕನ್ಯಾಕುಮಾರಿಗಳ ಹುಟ್ಟಿನೊಡನೆ ಹುಟ್ಟಿ ಬಾಳುತ್ತಿರುವ ಮತ್ತು ಬಾಳಲಿರುವ ಸುಂದರವೂ ಪವಿತ್ರವೂ ಸದಸದ್ವಿವೇಚಕವೂ ಆದರ್ಶ ತತ್ವವಿಧಾಯಕವೂ ಮಹೋನ್ನತವೂ ಉದಾತ್ತ ಗುಣ ಸಂಪನ್ನವೂ ಆದ ಒಂದು ಮಹಾಕಾವ್ಯ; ಅನನುವಾದ್ಯಗಳೆನಿಸಿದ ಭಾರತೀಯ ಕಲ್ಪನೆಗಳಾದ "ಧರ್ಮ" ಮತ್ತು "ರಸ" ಎಂಬ ಪದಗಳಿಂದ ಪ್ರತೀತವಾಗುವ ಸರ್ವಾರ್ಥವನ್ನೂ ನಿದರ್ಶಿಸುವ ಭಾರತೀಯ ಮೇಧಾವಿತ್ವನಿರೂಪಿತವಾದ ಒಂದು ಜ್ಞಾನಪ್ರದೀಪ, ರಸರಾಶಿ, ಸಂಸ್ಕೃತಿಯ ಸುಮೇರುಶೃಂಗ–ಎಂಬುದನ್ನು ಮನದಟ್ಟು ಮಾಡಿಕೊಡಲು ಸಹಾಯಕವಾದ ಈ ಮಹಾಪ್ರಯತ್ನವನ್ನು ಆನಂದದಿಂದ ಸ್ವಾಗತಿಸುತ್ತೇವೆ.

ಮಾಲೆಯ ಕೆಲಸದಲ್ಲಿ ಕಂಕಣಬದ್ಧರಾದ ವಿದ್ವಾಂಸರು ವೇದವಾಙ್ಮಯದ ಬಗ್ಗೆ ಈ ವರೆಗೆ ಜಗತ್ತಿನಲ್ಲಿ ನಡೆದ ಸಂಶೋಧನೆ, ಉಪಲಬ್ಧವಾದ ಎಲ್ಲ ಭಾಷ್ಯಗಳು, ಇತರ ಟೀಕೆ ಟಿಪ್ಪಣಿ ಮುಂತಾದ ಬರಹಗಳು ಇವೆಲ್ಲವುಗಳ ಸಹಾಯವನ್ನೂ ಪಡೆದಿರುವುದಾಗಿ ಸಂಪಾದಕರು ಹೇಳಿರುತ್ತಾರೆ. ಇದರಿಂದ ಪಾಮರರು ಬೇಕಾದರೆ ಬರಿಯ ಪ್ರತಿಪದಾರ್ಥ, ಭಾವಾರ್ಥಗಳನ್ನು ಓದಿಕೊಂಡು ಸ್ಥೂಲ ಕಲ್ಪನೆ ಮಾಡಿಕೊಳ್ಳಲೂ ಪಂಡಿತರು ಅಥವಾ ವಿದ್ಯಾರ್ಥಿಗಳು ಸಂಶೋಧಕರ ಅಭಿಪ್ರಾಯಭೇದ, ವ್ಯಾಕರಣ, ಸ್ವರಾದಿಗಳ ನಿಯಮ, ಚರ್ಚಾಸ್ಪದವಾದ ಸಂಗತಿಗಳು, ಸೂಕ್ಷ್ಮ ವ್ಯತ್ಯಾಸಗಳು ಮುಂತಾದ ಅಂಶಗಳನ್ನು ಅಭ್ಯಸಿಸಲೂ ಅನುಕೂಲ ಮಾಡಿಕೊಟ್ಟಂತಾಗಿದೆ. ಈ ಉಭಯರಂಜಕವಾದ ಜ್ಞಾನನಂದಾದೀಪದ ಕುಡಿಗಳನ್ನು ಅಂದವಾಗಿ ವ್ಯವಸ್ಥಿತವಾಗಿ ಕ್ರಮವಾಗಿ ವರ್ಗೀಕರಿಸಿ, ಔಪಕ್ರಮಿಕವಾದ ಎಲ್ಲ ಪರಿಕರ ಪರಿವಾರಗಳಿಂದ ಸಹಿತವಾಗಿ ಮೊದಲನೆಯ ಭಾಗವನ್ನು ಓದುಗರೆದುರಿಡಲು ಸಮರ್ಥರಾದ ಮಾನ್ಯ ವಿದ್ವಾಂಸರು ಪ್ರಶಂಸನೀಯರೇ ಸರಿ.

ವಿಷಯವಿಸ್ತಾರ

ಈ ಪ್ರಥಮ ಭಾಗದ ಪೂರ್ವಪೀಠಿಕೆಯಲ್ಲಿ ವೇದವೆಂದರೇನು, ವೇದ ಶಬ್ದದ ವ್ಯುತ್ಪತ್ತಿ, ಋಗ್ವೇದಾದಿ ನಾಲ್ಕು ವೇದಗಳ ಸಂಕ್ಷಿಪ್ತ ವಿವರಣೆ, ವೇದವಿಭಾಗಗಳು, ವೇದಾಂಗಗಳು, ಋಗ್ವೇದದ ಋಷಿ ಮತ್ತು ದೇವತೆಗಳು, ಛಂದಸ್ಸು, ಭಾಷ್ಯಕಾರರು, ವೇದಾರ್ಥವಿಚಾರದಲ್ಲಿ ಪ್ರಾಚೀನರ ಮತ್ತು ಆಧುನಿಕರ ಪ್ರಯತ್ನಗಳು, ವೇದವ್ಯಾಸಂಗಕ್ರಮ, ವೇದಪ್ರತಿಪಾದಿತ ವಿಷಯ, ಋಗ್ವೇದದ ಮತ, ವೇದಕಾಲೀನ ಸಾಮಾಜಿಕ ಜೀವನ, ಋಗ್ವೇದದಲ್ಲಿಯ ವ್ಯಾಕರಣ ವಿಶೇಷಗಳು, ವೇದಕಾಲವಿಮರ್ಶೆ ಈ ವಿಷಯಗಳ ಮೇಲೆ ೨೫ ಪ್ರಕರಣಗಳಲ್ಲಿ ೬೪೪ ಪುಟಗಳು ತುಂಬುವಷ್ಟು (ಕಿರೀಟಾಕಾರಾದ ಚತುಷ್ಪತ್ರ) ಬರಹವನ್ನು ಕೊಡಲಾಗಿದೆ.

ಅನಂತರ ಸಾಯಣಾಚಾರ್ಯಕೃತ ಋಗ್ವೇದಭಾಷ್ಯಭೂಮಿಕೆಯನ್ನು ಮೂಲಪಾಠ, ಕನ್ನಡ ಮತ್ತು ಅಂಗ್ಲ ಭಾಷೆಗಳಲ್ಲಿ ಮಾಡಿದ ಅನುವಾದಗಳು ಇವುಗಳೊಡನೆ ಸಾದ್ಯಂತವಾಗಿ ಕೊಡಲ್ಪಟ್ಟಿದೆ. ಕನ್ನಡ ಅನುವಾದ ವಿವರಪೂರ್ಣವಾದುದೂ ಅಂಗ್ಲಾನುವಾದ ಸಂಕ್ಷಿಪ್ತವಾದುದೂ ಆಗಿದೆ. ಭೂಮಿಕೆಯಲ್ಲಿ–ಯಜುರ್ವೇದಕ್ಕೆ ಮೊದಲು ಭಾಷ್ಯ ಬರೆದದ್ದು, ವೇದದ ಅಸ್ತಿತ್ವ ಇವುಗಳ ಬಗ್ಗೆ ಪೂರ್ವೋತ್ತರ ಪಕ್ಷಗಳು; ವೇದಕ್ಕೆ ವ್ಯಾಖ್ಯಾನದ ಅವಶ್ಯಕತೆ, ಅದರ ಮಹತ್ವ, ಉಪಯೋಗ, ಮಂತ್ರಗಳ ಅರ್ಥವತ್ತೆ ಮುಂತಾದ ಅಂಶಗಳ ಬಗ್ಗೆ ವಾದ ಮತ್ತು ಸಿದ್ಧಾಂತಗಳು; ಪರಿಸಂಖ್ಯೆ ಅರ್ಥವಾದಗಳ ಲಕ್ಷಣ, ಮಂತ್ರಗಳ ಪ್ರಾಮಾಣ್ಯವಿಚಾರವಿಮರ್ಶೆ, ವೇದದ ಅಪೌರುಷೇಯತ್ವಸ್ಥಾಪನೆ, ಮಂತ್ರಬ್ರಾಹ್ಮಣಾದಿಗಳ ಲಕ್ಷಣ, ವೇದಾಧ್ಯಯನದ ಅವಶ್ಯಕತೆ, ಅರ್ಥಜ್ಞಾನದ ಪ್ರಶಂಸೆ. ಷಡಂಗಗಳ ವಿಚಾರ, ಚತುರ್ದಶ ವಿದ್ಯಾಜ್ಞಾನ ಮತ್ತು ವೇದಾಧಿಕಾರ ಇಷ್ಟು ಸಂಗತಿಗಳು ಅಡಕವಾಗಿವೆ. ಇದು ೨೪೯ ಪುಟಗಳನ್ನು ವ್ಯಾಪಿಸಿದೆ. ಇದಾದನಂತರ ಸಾಯಣಭಾಷ್ಯ ಸಹಿತವಾದ ಋಗ್ವೇದಸಂಹಿತೆ ಪ್ರಾರಂಭವಾಗುತ್ತದೆ. ಅದರಲ್ಲಿ ಪ್ರಥಮ ಸೂಕ್ತದ ಋಷಿದೇವತಾಛಂದಸ್ಸುಗಳು; ಸ್ವರಸಹಿತ ಸಂಹಿತಾಪಾಠ, ಪದಪಾಠ, ಸಾಯಣಭಾಷ್ಯ, ಮಂತ್ರದ ಪ್ರತಿಪದಾರ್ಥ, ಭಾವಾರ್ಥ, ಅಂಗ್ಲಾನುವಾದ, ವಿಶೇಷವಿಷಯ, ವ್ಯಾಕರಣಪ್ರಕ್ರಿಯೆ ಮುಂತಾದವುಗಳ ವಿಸ್ತೃತ ವಿಮರ್ಶೆಯೂ; ೨ನೆಯ ಸೂಕ್ತದ ವಿನಿಯೋಗ ವಿಚಾರದಲ್ಲಿ ಮೀಮಾಂಸಾಸೂತ್ರಗಳ ವಿಮರ್ಶನಪೂರ್ವಕವಾಗಿ ವಿನಿಯೋಗಕಥನ, ಅಗ್ನಿಷ್ಟೋಮಯಾಗದ ಸ್ವರೂಪಸಂಗ್ರಹ, ೨ನೆಯ ಸೂಕ್ತದ ಸಂಹಿತಾಪಾಠ ಇತ್ಯಾದಿ ವಿವರಣೆ ಮುಂತಾದವೂ ಬಂದಿವೆ. ಅದು ೧೨೨ ಪುಟಗಳಷ್ಟಾಗಿದೆ. ಕಡೆಯಲ್ಲಿ ೨೦೪ ಪುಟಗಳನ್ನು ತುಂಬುವಂತೆ ಋಗ್ವೇದ ಮಂತ್ರಗಳ ಅಕಾರಾದಿ ವರ್ಣಾನುಕ್ರಮಣಿಕೆಯನ್ನು ಜೋಡಿಸಿದ್ದು ಪುಸ್ತಕದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಸಂಪೂರ್ಣಗೊಳಿಸಿದೆ.

ದೋಷಲವ

ಈ ಹೆಬ್ಬೊತ್ತಿಗೆ ಗುಣಬಾಹುಲ್ಯಭೂಷಿತದಾಗಿದ್ದರೂ "ಸ್ಯಾದ್ವಪುಃ ಸುಂದರಮಪಿ ಶ್ವಿತ್ರೇಣೈಕೇನ ದುರ್ಭಗಂ" ಎಂಬ ನ್ಯಾಯವನ್ನು ಅನುಸರಿಸಿ ಹೇಳುವುದಾದರೆ ವರ್ಧನೂನಂ (ಪುಟ ೬೪೬, ಸಾಲು ೧೧), ಗೂಢಾರ್ಥ ಪುಟ ೫೮೨, ಸಾಲು ೧೫) ಮುಂತಾದ ಕೆಲ ಮುದ್ರಣದೋಷಗಳೂ ಪೂರ್ವಮೀಮಾಂಸಾ, ಪೂರ್ವಿಕರು, ಹಿಂದೂ, ವಿದ್ಯಕ್ಕೂ ಮುಂತಾದ ದುಷ್ಟತದ್ಭವಗಳ; ಮುಂದುವರೆಯದೆ, ಪೌರ್ವಾತ್ಯ, ತಕ್ಷಣ, ಉದ್ದಿಶ್ಯ, ಭಾರತೀಯ, ಅಸ್ತಿಕ್ಯತೆ, ಪ್ರಾಧಾನ್ಯತೆ ಮುಂತಾದ ಅಪರೂಪಗಳ; ಹೇಳಿದಾನೆ ಮುದ್ರಿಸಿರುತ್ತೆ, ಅನುಗ್ರಹಿಸಿ ಮುಂತಾದ ಗ್ರಾಮ್ಯಗಳ ಮತ್ತು ಪೇಜು ಮುಂತಾದ ಅಂಗ್ಲಪದಗಳ ಬಳಕೆಗಳೂ ಭೂಷಣವಾಗಿ ಉಳಿದಿವೆ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಇಂಥ ಸೂಕ್ಷ್ಮದೋಷಗಳನ್ನು ಗಣನೆಗೆ ತಾರದೆ, ಬಹುಜನೋಪಯೋಗಿಯಾಗಿ ಹಿಂದುಗಳ ಆದರ್ಶ ಹಿಂದುತ್ವಕ್ಕೆ ಬೇಕಾದ ಸಂಸ್ಕೃತಿ, ಜ್ಞಾನಗಳ ಸಂಗ್ರಹಸಾಧನವಾಗಿ ಸುಂದರವೂ ಸುಲಭಗ್ರಾಹ್ಯವೂ ಎನಿಸಿ ಕರ್ನಾಟಕ ಜನತೆಯ ಇದಿರು ಬಂದ ಈ ವೇದರತ್ನಮಾಲೆಯ ಪ್ರಥಮಕುಸುಮವನ್ನು ಪ್ರತಿಯೊಬ್ಬ ವಿದ್ಯಾಪೇಕ್ಷಿಯಾದ ಕನ್ನಡಿಗನೂ ಕನ್ನಡಿತಿಯೂ ಪಡೆದು ಪ್ರಯೋಜನ ಹೊಂದದಿರರೆಂದು ನಮ್ಮ ಸತ್ಯಸುಂದರವಾದ ಪ್ರತ್ಯಾಶೆ.

× × ×

ಪ್ರೇಮಪೂರ್ಣ ಮಂದಿರ

ಬರೆದವರು ಮತ್ತು ಪ್ರಕಾಶಕರು ಶ್ರೀ ಯು. ನಾರಾಯಣಭಟ್ಟರು, ಕಾನಗೋಡು, ಸಾಗರ. ಪುಟ ೫೦, ಬೆಲೆ ರೂ. ೧.

"ಪ್ರೇಮಪೂರ್ಣ ಮಂದಿರ" ದಲ್ಲಿ ಕೃಷ್ಣಮೂರ್ತಿರಾಯ ದಂಪತಿಗಳು, ಯಶವಂತ ದಂಪತಿಗಳು ಮತ್ತು ಏಕನಾಥದಂಪತಿಗಳು ಮೂರು ಮಾದರಿಯವರಾಗಿದ್ದಾರೆ. ಮೊದಲನೆಯವರದು ಪ್ರಾಚೀನ ಪದ್ಧತಿಯ ಪ್ರೇಮಪೂರ್ಣಮಂದಿರ. ಅಲ್ಲಿಯದು ನಿಷ್ಕಲಂಕ ಪ್ರೇಮ; ಆದರ್ಶ ಕುಟುಂಬ. ಎರಡನೆಯವರದು ಗಿಳಿ ಗೂಗೆಗಳ ಸಂಸಾರ; ದೈವ ದುರ್ವಿಪಾಕದ, ವಿಧಿವಿಲಾಸವಿಕಟತೆಯ ಒಂದು ಮಾದರಿ. ಮೂರನೆಯವರದು ಆಧುನಿಕತೆ ಬೆರೆದ ದಾಂಪತ್ಯ; ಆದರೂ ಸಂಪೂರ್ಣ "ಆಧುನಿಕ ಮನೋವೃತ್ತಿ" ಅಲ್ಲಿಲ್ಲ. ಅದ್ದರಿಂದ ಅದು ಪ್ರಾಚೀನ ಆದರ್ಶದ ಒಂದು "ಸುಧಾರಿಸಿದ" ಆವೃತ್ತಿಯೆನಿಸಿದೆ.

ಪಾತ್ರಗಳಲ್ಲಿ ಕೃಷ್ಣಮೂರ್ತಿರಾಯ ದಂಪತಿಗಳು ಉತ್ತಮರೂ ಅವರ ಮಗ ಏಕನಾಥ ಮತ್ತು ಮಗಳು ವತ್ಸಲೆ ಮಧ್ಯಮರೂ ಆಗಿದ್ದಾರೆ. ಅಧಮರೆನ್ನಲು ಬರದಿದ್ದರೂ ಏಕನಾಥನ ಹೆಂಡತಿ ಮತ್ತು ಅವನ ಅತ್ರಿಯದಾತ ಶಂಕರರಾಯರು ಬುದ್ಧಾಂ ಕೆಳಮಟ್ಟದವರು. ವತ್ಸಲೆಯ ಗಂಡ ಯಶವಂತ ಮತ್ತು ಅವನ ಅಪ್ಪ ಇವರು ಅಧಮ ಪಾತ್ರಗಳು.

ಈ ಕುಟುಂಬತ್ರಯದ ಚರಿತ್ರೆ ಸಾತ್ವಿಕ, ತಾಮಸ ಮತ್ತು ರಾಜಸವೃತ್ತಿಗಳಿಗೆ ಕ್ರಮವಾಗಿ ಉದಾಹರಣೆಗಳಾಗಿವೆ. ಕಾಯದೆ ಕಾನೂನುಗಳು ಎಷ್ಟೇ ಬದಲಾದರೂ ಮಾನವನ ಸ್ವಭಾವವೆನಿಸುವ ರಾಗದ್ವೇಷಗಳ ಅಂಶ ಭಿನ್ನ ಭಿನ್ನ ವ್ಯಕ್ತಿಗಳಲ್ಲಿ ಭಿನ್ನವಾಗಿರುವುದು ಅಳಿಯಲಾರದು. ಸ್ತ್ರೀಯರಿಗೆ ಗಂಡಸರಿಗಿಂತ ಹೆಚ್ಚು ಅಧಿಕಾರ ಕಾಯದೆಯಂತೆ ಬಂದರೂ ಅವರು ವಿಶಿಷ್ಟ ಸನ್ನಿವೇಶಗಳಲ್ಲಿ ವರ್ತಿಸುವ ರೀತಿಯಲ್ಲಿ ಮೌಲಿಕ ವ್ಯತ್ಯಾಸ ಸಂಭವಿಸದು. ಏಕೆಂದರೆ ಅಲ್ಲಿ ನಿಸರ್ಗ ಮತ್ತು ವಿಶಿಷ್ಟ ಶರೀರನಿಷ್ಠ ಮನಸ್ಸುಗಳು ತಮ್ಮ ತನವನ್ನು ಕಳೆದುಕೊಳ್ಳಲು ಒಡಂಬಡವು ಎಂಬುದನ್ನು ಈ ಹಳನಡು ಮತ್ತು ಹೊಸ ಕಾಲಗಳ ನಡತೆಗಳು ನಮಗೆ ತಿಳಿಯಪಡಿಸುತ್ತವೆ.

ಹೀಗೆ ಅವಸ್ಥಾತ್ರಯದ ದರ್ಶನ ಮಾಡಿಸಿಕೊಡಲು ಈ ಕಥೆಯನ್ನು ಬರೆದ ಶ್ರೀ ಯು. ನಾರಾಯಣಭಟ್ಟರ ಪ್ರಯತ್ನ ಸಾರ್ಥಕವೆಂದು ಹೇಳಲು ತುಂಬ ಸಂತೋಷವಾಗುತ್ತದೆ. ಪ್ರೇಮಪೂರ್ಣಹೃದಯದಂತೆ ತೋರುವ ಅವರು ಇನ್ನೂ ಪ್ರೇಮ ಪೂರ್ಣವಾದ ಕುಟುಂಬಗಳ ಚಿತ್ರವನ್ನು ಚಿತ್ರಿಸಿ ಕನ್ನಡಿಗರನ್ನು ತಣಿಸಲಿ ಎಂದು ಆಶಿಸುತ್ತೇವೆ.

ನಿಮಿಷಾವಲೋಕನ

ಮಲ್ಲಸರ್ಜ ಕಾವ್ಯವನ್ನು ಬೈಲಹೊಂಗಲದ ಕಿತ್ತೂರು ಚನ್ನಮ್ಮರಾಣಿ ಇತಿಹಾಸ ಮಂಡಲ ಪ್ರಕಾಶಿಸಿದೆ. ೫೪ ಪುಟಗಳುಳ್ಳ ೧|| ರೂ. ಬೆಲೆಯ ಈ ಪುಸ್ತಕದಲ್ಲಿ ಕಿತ್ತೂರಿನ ಮಲ್ಲೇಂದ್ರನೆಂಬ ಅರಸನ ಚರಿತ್ರೆಯನ್ನು ಸ್ಖಲಿತವಾಣಿಯಿಂದ ಪದ್ಯರೂಪದಲ್ಲಿ ವರ್ಣಿಸಿದೆ. **ಮೈಸೂರು ಕೈಪಿಡಿ** ಎಂಬ ಎಂಟಾಣೆ ಬೆಲೆಯ ೫೬ ಪುಟದ ಕಿಬ್ಬೊತ್ತಿಗೆಯಲ್ಲಿ ಬೆಂಗಳೂರಿನ ವಿಶ್ವೇಶ್ವರಪುರ ವೃತ್ತದ ಶ್ರೀ ರಂಗನಾಥ ಭವನದಲ್ಲಿರುವ ಶ್ರೀ ಕೆ. ಆರ್. ಶ್ರೀನಿವಾಸರಾಯರು ಮೈಸೂರಿನ ಆಡಳಿತ ಮತ್ತು ಉದ್ಯಮಗಳ ಬಗ್ಗೆ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. **ಸದ್ಗುರು ಪಂಚಾಯತನ ಪದ್ಯಮಾಲೆ**ಯಲ್ಲಿ ಶ್ರೀ ಅತ್ಮಾರಾಮ, ಪರಮಾನಂದಮಠ, ಸೀಗೇಹಳ್ಳಿ ಇವರು ಪೌರಾಣಿಕ ಪದ್ಧತಿಯ ಸದ್ಗುರು ಸ್ತೋತ್ರ ರೂಪದ ಹೆಣ್ಣುಮಕ್ಕಳ 'ಹಾಡು' ಗಳನ್ನು ಬರೆದು ಪ್ರಕಟಿಸಿದ್ದಾರೆ. **ಜಗಜ್ಯೋತಿ ಗಾಂಧಿ**ಯಲ್ಲಿ ಗಾಂಧೀಪರವಾದ ಕೆಲ ಒಳ್ಳೆಯ ಗದ್ಯಪದ್ಯಗಳನ್ನು ಶ್ರೀ ಎಂ. ಪದ್ಮನಾಥ ಮಲ್ಯರು ಸಂಗ್ರಹಿಸಿ ಬೇಳದ(ಕುಂಬಳೆ) ಜ್ಞಾನೋದಯ ಸಮಿತಿಯ ಮೂಲಕ ಪ್ರಕಾಶಪಡಿಸಿದ್ದಾರೆ. **ತರಕಾರಿ ಬೆಳೆಗಳು** ಎಂಬ ೭೪ ಪುಟಗಳ ೧| ರೂ. ಬೆಲೆಯ ಪುಟ್ಟ ಪುಸ್ತಕದಲ್ಲಿ ಶ್ರೀ ಎಸ್. ಎಂ. ಮುನಿವೆಂಕಟಪ್ಪ ಎಂ. ಎ. ಅವರು ಜನೋಪಯುಕ್ತವಾಗುವಂತೆ ತರಕಾರಿಗಳ ಬಗೆ ಮತ್ತು ಅವುಗಳನ್ನು ಬೆಳೆಯುವ ವಿಧಾನಗಳ ಬಗ್ಗೆ ಶಾಸ್ತ್ರೋಕ್ತವಾಗಿ ಬರೆದು ವಹ್ನಿಕುಲ ಅಂಡ್ ಕೊ, ೩೯–೪೪ ಶ್ರೀ ಕೃಷ್ಣರಾಜೇಂದ್ರ ಮಾರ್ಕೆಟ್ ಬೆಂಗಳೂರು ಸಿಟಿ ಇದರ ಮೂಲಕ ಪ್ರಕಾಶ ಪಡಿಸಿದ್ದಾರೆ. **ಪುಳಿನಾಪುರ ಮಹಾತ್ಮ್ಯ**ಯನ್ನು ಪೊಳಲಿಯ ಶ್ರೀ ಎನ್. ಎ. ಶೀನಪ್ಪ ಹೆಗ್ಗಡೆಯವರು ಬರೆದು 'ಕರ್ಮವೀರ'ದ ಚಂದಾದಾರರಿಗೆ ಮೂಲ ಬೆಲೆಗಿಂತ ಎಂಟಾಣೆ ಕಡಿಮೆ ಬೆಲೆಗೆ ಅಂದರೆ ೨ ರೂಪಾಯಿಗಳಿಗೂ ಹೆಂಗಸರಿಗೆ (ಅವರು ಸ್ವತಃ ಬರೆದುಕೊಂಡರೆ) ಅದಕ್ಕೂ ಎಂಟಾಣೆ ಕಡಿಮೆ ಬೆಲೆಗೆ ಅಂದರೆ ೧|| ರೂಪಾಯಿಗೂ ಕೊಡುವುದಾಗಿ ಬರೆದಿದ್ದಾರೆ. ಈ ಸ್ತ್ರೀದಾಕ್ಷಿಣ್ಯದ ಪುಸ್ತಕದಲ್ಲಿ ೫೬ ಪುಟಗಳ ತುಂಬ ದಕ್ಷಿಣ ಕನ್ನಡದ (ಬೆಳ್ಳೂರು ಅಂಚೆಮನೆಯ) ಪೊಳಲಿಯ ಸ್ಥಳಪುರಾಣ, ಮಹಿಮೆ ಮತ್ತು ಚರಿತ್ರೆಗಳ ಸಾರವನ್ನು ಚಿತ್ರಿಸಲಾಗಿದೆ. **ವರ್ಷ ಭವಿಷ್ಯ ಆಣೆ ಪಂಚಾಂಗ** ಎಂಬ ಚಿಕ್ಕಪುಟ್ಟ ಹೊತ್ತಿಗೆಯಲ್ಲಿ ಹೊಸರಿತ್ತಿಯ ಪಂಡಿತ ಶಂಕರಶಾಸ್ತ್ರಿಗಳು ವಿರೋಧಿ ಸಂವತ್ಸರದ ವರ್ಷಭವಿಷ್ಯವನ್ನೂ ಪಂಚಾಂಗವನ್ನೂ ೨೨ ಆಣೆ ಬೆಲೆಗೆ ದೊರೆಯುವಂತೆ ಒದಗಿಸಿಕೊಟ್ಟಿದ್ದಾರೆ. ಅದರ ೧೭೦ ಕಿಬ್ಬೊತ್ತಿಗೆಗಳಲ್ಲಿ ಸುಂದರ ಮರಾಠಿಯಲ್ಲಿ ಪ್ರತಿಯೊಬ್ಬ ಆಸ್ತಿಕರಿಗೂ ಅನುಕೂಲವಾಗುವಂತೆ ಮೇಲಿನ ವಿಷಯಗಳು ವಿವರಿಸಲ್ಪಟ್ಟಿವೆ. **ಪರಿಮುಲಾಚಾರ್ಯರ ಪಟ್ಟಬಂಧ**ವನ್ನು ನಾಟಕ ರೂಪದಿಂದ ಮುಣಿಯೂರಿನ ಶ್ರೀ ಜಯತೀರ್ಥಾಚಾರ್ಯರು ಗದ್ವಾಲದ ಭಾಗ್ಯೋದಯ ಗ್ರಂಥಮಾಲೆಯಲ್ಲಿ ಪ್ರಕಟಿಸಿದ್ದಾರೆ. ಇದರ ಬೆಲೆ ೨೫ ರೂ. ಮತ್ತು ಪುಟ ಸಂಖ್ಯೆ ೪೦. **ಹರಿಹರನ ರಗಳೆಯ ಕಥೆಗಳು** ಎಂಬುದನ್ನು ಒಂದನೆಯ ಭಾಗವೆಂದು ಕಾನಕಾನ ಹಳ್ಳಿಯ ಶ್ರೀ ಬಿ. ನಂಜುಂಡಪ್ಪನವರು ಬರೆದು ಬೆಂಗಳೂರು ನಗರದ ಕೋಟೆಯ ಸಾಹಿತ್ಯ ಕುಟೀರದ ಮೂಲಕ ಪ್ರಕಾಶಪಡಿಸಿದ್ದಾರೆ. ಅದರ ಪುಟ ಸಂಖ್ಯೆ ೯೪, ಬೆಲೆ ಒಂದು ರೂಪಾಯಿ. ಒಳ್ಳೆಯ ಗದ್ಯಶೈಲಿಯಲ್ಲಿ ಶ್ರೀ ನಂಜುಂಡಪ್ಪನವರು ಇಲ್ಲಿ ೧೫ ಪ್ರಕರಣಗಳಲ್ಲಿ ಅಲ್ಲಮಾದಿ ಶರಣರ ಕಥೆಗಳನ್ನು ವಿವರಿಸಿದ್ದಾರೆ. **ಮೇವಾಡಪತನ** ಎಂಬ ನಾಟಕ ಶ್ರೀ ದ್ವಿಜೇಂದ್ರಲಾಲರಾಯರು ಬಂಗಾಲಿಯಲ್ಲಿ ಬರೆದದ್ದು. ಅದನ್ನು ದಿವಂಗತ ಶ್ರೀ ಗೋವಿಂದಪ್ಪ ಲಕ್ಷ್ಮಣ ಹಳ್ಳಿಪ್ಪನವರು ಕನ್ನಡಕ್ಕೆ ೧೬೮ ಪುಟಗಳಲ್ಲಿ ಅನುವಾದಿಸಿದರು. ಈ ಪುಸ್ತಕದ ಬೆಲೆ ಎರಡು ರೂಪಾಯಿ. ಭಾಷಾಂತರ ಚೆನ್ನಾಗಿದೆ; ನಾಟಕ ರಮ್ಯವಾಗಿದೆ. ಪ್ರಕಾಶಕರಾದ ಶ್ರೀ ವಿ. ಜಿ. ಹುದ್ದಾರ ಮಾಳಮಡ್ಡಿ, ಧಾರವಾಡ ಅವರು ಬಯಸಿರುವಂತೆ ಕನ್ನಡಿಗರು ಅವರಿಗೆ ನೆರವಾಗಲೆಂದು ಹಾರೈಸಲಾಗಿದೆ. **ಜೀವನ ಮತ್ತು ಕಥೆಗಳು** ಎಂಬುದನ್ನು ಕಾಸರಗೋಡಿನ ಕಾರ್ಯಹಳ್ಳಸ್ಮಾರಕ ಸಮಿತಿ ಪ್ರಕಟಿಸಿದೆ. ಇದು ೧೧೨ ಪುಟಗಳಲ್ಲಿ ದಿವಂಗತ ಕಾರ್ಯಹಳ್ಳ ರಾಮಕೃಷ್ಣ ಶೆಟ್ಟರ ಜೀವನ ಮತ್ತು ಕೃತಿಗಳ ಪರಿಚಯವು ಎರಡೇ ರೂಪಾಯಿಗಳಿಗೆ ದೊರಕುವಂತೆ ಮಾಡಿದೆ. ಶ್ರೀ ಶೆಟ್ಟರ ಸಾಹಿತ್ಯದ ಸವಿಯನ್ನು ಉಂಡು ತಣಿದ ಮತ್ತು ತಣಿಯಬೇಕೆನ್ನುವ ಸಹೃದಯರು ಈ ಪುಸ್ತಕವನ್ನು ಸ್ವಾಗತಿಸದಿರರೆಂದು ಹೃತ್ಪೂರ್ವಕವಾಗಿ ನಂಬಲಾಗಿದೆ. ಮಂಗಳೂರಿನ ಮಕ್ಕಳ ಪಂಟಪದವರು **ಯುರೋಪಿನ ಕತೆಗಳು, ದೇಶಾಂತರದ ಕತೆಗಳು, ಜಂತುಗಳ ಜಾಣ್ಮೆ** ಮತ್ತು **ಐಗುಪ್ತದ ಕತೆಗಳು** ಎಂಬ ನಾಲ್ಕು ಚಿಕ್ಕ ಪುಟ್ಟ ಹೊತ್ತಿಗೆಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಮಕ್ಕಳಿಗೆ ತಕ್ಕ ಚಿಕ್ಕಕತೆಗಳನ್ನು ಓದಲು ಹರ್ಷವಾಗುವಂತೆ ದೊಡ್ಡಕ್ಷರಗಳಿಂದ ಮುದ್ರಿತವಾಗಿವೆ. ೨೪ ರಿಂದ ೪೦ ರ ವರೆಗೆ ಪುಟಗಳಿರುವ ಈ ಪುಸ್ತಕದ ಪ್ರತಿಯೊಂದಕ್ಕೆ ೪, ೫, ೬, ಆಣೆಗಳ ಬೆಲೆಯಿದೆ. ಮಕ್ಕಳ ಸಾಹಿತ್ಯಕ್ಕೆ ಇವು ಒಳ್ಳೆಯ ಮಾದರಿಗಳಾಗಿವೆ ಎನ್ನಬಹುದು.

[illegible]

ಜೂನ ೬ ರಿಂದ ೧೨ ರ ವರೆಗೆ

ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ನಿಮ್ಮ ಪ್ರಕೃತಿ ಅನುಕೂಲವಿದ್ದರೆ ಮಕ್ಕಳಿಗೆ ಅಲ್ಪಸ್ವಲ್ಪ ಕಾಯಿಲೆ; ಹೀಗಿದ್ದುದರಿಂದ ಪ್ರಾಪಂಚಿಕ ಸುಖ ಬಹಳ ಸಮಾಧಾನಕರವೆನಿಸುವದು. ಆದರೆ ಪ್ರಿಯ ವ್ಯಕ್ತಿಯೊಬ್ಬರ ಸಹವಾಸ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ತುಂಬ ಲಾಭ ದೊರೆತರೂ ಪ್ರತಿಷ್ಠೆ ಮಾತ್ರ ಕಡಿಮೆ. ಮಿತ್ರಸುಖ ಮಾತ್ರ ನಿಮಗೆ ಅನುಕೂಲ. ಸ್ಥಾವರದಲ್ಲಿ ಕೆಲವೊಂದು ಹೊಸ ಕಿಟಿಕಿಟಿ ಪ್ರಾರಂಭವಾಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ದೊರೆತರೂ ಶತ್ರುಗಳು ಮಾತ್ರ ಹೆಚ್ಚು ಪ್ರಬಲರಾಗುವರು. ಪ್ರವಾಸ ಪತ್ರವ್ಯವಹಾರಕ್ಕಿಂತ ಭೆಟ್ಟಿಯೆ ನಿಮಗೆ ಅನುಕೂಲ. ಅಶ್ವಿನಿಯ ೪ ನೆ ಮತ್ತು ಭರಣಿಯ ಮೊದಲನೆ ೩ ಚರಣಗಳಿಗೆ ತೊಂದರೆ. ತಾ. ೭, ೮, ೧೨ ಅನುಕೂಲ.

ಇಂದು ಸೋಮವಾರ ಜೂನ ೬ ನೇ ತಾರೀಕು ಮಧ್ಯಾಹ್ನ ೧ ಹೊಡೆದು ೮ ನಿಮಿಷಕ್ಕೆ ರಾಹು ಮೇಷ ರಾಶಿಯಿಂದ ಮೀನರಾಶಿಗೆ ಸರಳುವನು ಇದರಿಂದ ಈ ರಾಶಿಯವರಿಗೆ ಅವನು ೧೨ನೆಯವನಾಗುವನು ಅದರಿಂದ ಆಪ್ತರು ಮತ್ತು ಸ್ವಜನರ ವಿರೋಧ. ನಿರರ್ಥಕವಾಗಿ ಹಣ ವ್ಯಯವಾಗುವದು, ಸಾಲವಾಗುವ ಅಂಜಿಕೆ; ಮಾನಹಾನಿ, ವಸ್ತುಗಳು ಕಳೆದುಹೋಗುವವು. ಪಾರಮಾರ್ಥಿಕ ಕಾರ್ಯಗಳಲ್ಲಿ ಲಕ್ಷ. ಶತ್ರುಗಳು ಮತ್ತು ಸಂಕಟಗಳು ತಾನಾಗಿಯೆ ಹಬ್ಬುವ ಅಂಜಿಕೆಯಿದ್ದುದರಿಂದ ಅಲ್ಪ ಸ್ವಲ್ಪ ನಾಶ ಇತ್ಯಾದಿ ಫಲಗಳು ದೊರೆಯುವವು—ರಾಹು ಮೀನರಾಶಿಯಲ್ಲಿ ಸುಮಾರು ೧½ ವರ್ಷ ಉಳಿಯುವನು.

ವೃಷಭ

ಎಲ್ಲರ ಪ್ರಕೃತಿ ಆರೋಗ್ಯಕರವಾಗಿದ್ದರೂ ಹೆಂಡತಿ ಮತ್ತು ಮಕ್ಕಳೊಡನೆ ಅನೇಕ ಸಂಗತಿಗಳಲ್ಲಿ ಬಹಳ ಮತಭೇದ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ನೆರೆಹೊರೆಯವರಿಂದ ನಿಂದೆ ಅವರು ಏನೇನೋ ಮಾತಾಡುವ ಬಗ್ಗೆ ಆಗ್ರಹ ತಾಳುವರು. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ನಿಮಗೆ ಉತ್ತಮ. ಮಿತ್ರಸುಖವೂ ಅನುಕೂಲ ಬಂಧುವರ್ಗದವರು ಉನ್ನತಿಹೊಂದುವರು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೬, ೯, ೧೦, ಅನುಕೂಲ.

ತಾ ೬ರಿಂದ ಈ ರಾಶಿಗೆ ಬರುವ ೧೧ನೇ ರಾಹು ದ್ರವ್ಯಲಾಭವನ್ನು ಚನ್ನಾಗಿ ಮಾಡಿಕೊಡುವನು ಮತ್ತು ಸತ್ಕೃತ್ಯಗಳಿಗೂ ಅನುಕೂಲನು. ಮಿತ್ರಸುಖ ಚೆನ್ನಾಗಿ ದೊರೆತು ಮಕ್ಕಳು ಹುಟ್ಟುವ ಪಾಪರೆ ಹೆಣ್ಣುಮಕ್ಕಳೇ ಹೆಚ್ಚಾಗುವ ಯೋಗ. ದೈವವಾದದಲ್ಲಿ ಅಶ್ರದ್ಧೆಯುಂಟಾಗುವದು. ಇವೇ ಮೊದಲಾದ ಫಲಗಳು ನಿಮಗೆ ದೊರೆವವು.

ಮಿಥುನ

ಹೆಂಡತಿಯ ಪ್ರಕೃತಿಗೆ ಕಿರಕಳ ಕಾಯಿಲೆಗಳಿದ್ದರೂ ಸ್ವತಃ ನಿಮಗೆ ಮಾತ್ರ ಬಹಳ ಕಾಯಿಲೆ ಆದೀತು. ಕಾಲಕ್ಕೆ ಮಕ್ಕಳ ಆರೋಗ್ಯ ಚೆನ್ನಾಗಿ ಉಳಿಯುವದು, ಆದರೂ ಅವರಲ್ಲಿ ಒಬ್ಬರಿಬ್ಬರ ವರ್ತನೆ ಮಾತ್ರ ನಿಮಗೆ ಸರಿಯೆನಿಸಲಾರದು. ಹೀಗಿದ್ದರೂ ಉಳಿದ ವಿಷಯಗಳಲ್ಲಿ ನಿಮಗೆ ಪ್ರಾಪಂಚಿಕ ಸುಖ ಮನಸ್ಸಿನಂತೆ ದೊರೆಯುವುದು. ಉದ್ಯೋಗದಲ್ಲಿ ಒಳ್ಳೆ ಪ್ರಗತಿಯೆನಿಸಿದರೆ ಪ್ರತಿಷ್ಠೆ ಮತ್ತು ಲಾಭ ಕಡಿಮೆಯಾಗುವದಿಷ್ಟೇ ಅಲ್ಲ ವಿಪರೀತ ವೆಚ್ಚ ಬಂದು ದಿವಾಳಿ ತೆಗೆಯುವ ಪ್ರಸಂಗ ಬರಬಹುದು. ಅದುದರಿಂದ ಬಹಳ ಜೋಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವಿರಿ. ವರಿಷ್ಠರು ಇಲ್ಲವೆ ಆಶ್ರಯದಾತರು ನಿರರ್ಥಕವಾಗಿ ನಿಮ್ಮ ಮೇಲೆ ರೊಚ್ಚಿಗೇಳುವರು. ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯುದೆನಿಸುವದರಿಂದ ಪ್ರವಾಸದಲ್ಲಿಯೇ ಮನಸ್ಸು ಹಾಕಿರಿ. ಆದರೂ ಮೃಗದ ೪ ಮತ್ತು ಆರ್ದೆಯ ಮೊದಲಿನ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೭, ೮, ೧೨ ಅನುಕೂಲ

ನಿಮಗೆ ೬ ನೇ ತಾರೀಕಿನಿಂದ ಬರುವ ೧೦ ನೇ ರಾಹು ತಂದೆ ಮತ್ತು ತತ್ಸಮವ್ಯಕ್ತಿಗೆ ಕ್ಲೇಶವನ್ನುಂಟುಮಾಡುವನು. ಉದ್ಯೋಗಧಂದೆಯಲ್ಲಿ ಇಲ್ಲವೆ ನೋಕರಿಯಲ್ಲಿ ಸಂಕಟಗಳು ಬಹಳ ಬಂದರೂ ಕೊನೆಗೆ ನಿಮಗೇ ವಿಜಯ. ಭ್ರಮಣವೂ ಬಹಳ ಇತ್ಯಾದಿ ಫಲಗಳು ದೊರೆಯುವವು.

ಕರ್ಕ

ನಿಮ್ಮ ಆರೋಗ್ಯ ಸರಿಯಾಗಿದ್ದರೂ ಹೆಂಡತಿಯದು ಮಾತ್ರ ಕೆಡುವದು. ಅಲ್ಲದೆ ನಿಮ್ಮಲ್ಲಿಯ ಕಲಹದಿಂದ ಒಬ್ಬರೊಬ್ಬರಲ್ಲಿ ಅಪ್ರೀತಿಯುಂಟಾಗುವದಲ್ಲದೆ ವಿಪರೀತ ತರ್ಕಗಳಿಗೆ ಅವಕಾಶವುಂಟಾಗುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅನುಕೂಲವಾಗಿದ್ದರೂ ವೆಚ್ಚ ಮಾತ್ರ ಎಲ್ಲಕ್ಕಿಂತ ಹೆಚ್ಚಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವ ಪ್ರಸಂಗ ಬರುವದರಿಂದ ಮಿತ್ರರಕೂಡ ಬಡೆದಾಟದ ಸಂಭವ. ಪ್ರವಾಸಾದಿ ಕೆಲಸ ಬಹಳ ಹಿತಕರವೆನಿಸುವದು ಪುಷ್ಯದ ೪ ನೆ ಮತ್ತು ಆಶ್ಲೇಷದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೬, ೯, ೧೦, ಅನುಕೂಲ.

೬ ನೇ ತಾರೀಕಿಗೆ ಬರುವ ೯ ನೇ ರಾಹು ಸತ್ಪುರುಷರ ದರ್ಶನ ಸಹವಾಸ ಮತ್ತು ಅನುಗ್ರಹದ ಯೋಗವನ್ನು ಕಲ್ಪಿಸಿಕೊಡುವನು. ದೂರದೂರಿನ ಪ್ರವಾಸದ ಸಂಭವವೂ ಇದೆ. ಬಂಧುವರ್ಗದ ಕೂಡ ಕ್ಲೇಶವುಂಟಾದರೆ ಕೆಲ ಹಿಂದಿನ ಹಕ್ಕು ಬಾಧ್ಯತೆಗಳಿಗಾಗಿ ಮನಸ್ಸು ಕ್ಷುಬ್ಧವಾಗುವದು. ಇವೇ ಮೊದಲಾದ ಫಲಗಳು ದೊರೆಯುವವು.

ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಚೆನ್ನಾಗಿದ್ದರೂ ಮಕ್ಕಳ ಪ್ರಕೃತಿ ಕೆಡುವದು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಸಾಧಾರಣವೇ. ಹೀಗಿದ್ದರೂ ಉದ್ಯೋಗದಲ್ಲಿ ಒಳ್ಳೆ ಪ್ರಗತಿಯಾಗಿ ಬಹಳ ಗೌರವ ದೊರೆಯುವಂಥ ಪ್ರತಿಷ್ಠೆ ಮತ್ತು ಅಧಿಕಾರದ ಹೆಚ್ಚಳ. ದ್ರವ್ಯಲಾಭವೂ ತುಂಬ. ಆದರೆ ಹಿತಶತ್ರುಗಳ ಅಂಜಿಕೆ ಮಾತ್ರ ವಿಪರೀತವೆನಿಸುವದರಿಂದ ಮೇಲೆ ಹೇಳಿದಂತೆ ಗ್ರಹಬಲದಿಂದ ಆಗತಕ್ಕಷ್ಟು ಆನಂದ ಉಂಟಾಗುವದಿಲ್ಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿಯೂ ಹಿಂದೆ ಬೀಳುವದು. ಶತ್ರುಗಳೂ ನಿಮ್ಮನ್ನು ವಿಪರೀತ ಆಳವಾದ ತೆಗ್ಗಿನಲ್ಲಿ ಕೆಡಹುವ ಪ್ರಯತ್ನ ಮಾಡುವರು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಮಘಾದ ೪ ನೆ ಮತ್ತು ಪೂರ್ವಾದ ಮೊದಲ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೭, ೮, ೧೨ ಅನುಕೂಲ.

೬ ನೇ ತಾರೀಖಿನಿಂದ ಬರುವ ೮ ನೇ ರಾಹು ಗುಹ್ಯೇಂದ್ರಿಯದ್ದಷ್ಟೇ ಅಲ್ಲ ಇತರ ಶಾರೀರಿಕ ಪೀಡೆಯನ್ನೂ ಉಂಟು ಮಾಡುವನು. ನಿಮ್ಮ ಮನಃಸ್ಥಿತಿಯೂ ಒಳ್ಳೆ ಚಮತ್ಕಾರಿಕವಾಗುವದು. ವ್ಯವಸಾಯದಲ್ಲಿ ದ್ರವ್ಯ ಲಾಭ ಕಡಿಮೆ. ಆದರೂ ಅವಚಿತ ಇಲ್ಲವೆ ಗುಪ್ತ ಲಾಭದ ಬಲವತ್ತರ ಯೋಗವಿರುವದು ಅಲ್ಲದೆ ನಿಮ್ಮ ನಿಮ್ಮಲ್ಲಿಯೂ ಕಲಹವುಂಟಾಗುವ ಮೊದಲಾದ ಫಲಗಳು ದೊರೆಯುವವು.

ಕನ್ಯಾ

ನಿಮ್ಮ ಹೆಂಡತಿ ಮತ್ತು ಮಕ್ಕಳ ಆರೋಗ್ಯಕ್ಕಿಂತ ನಿಮ್ಮ ಆರೋಗ್ಯ ಚೆನ್ನಾಗಿ ಉಳಿಯುವದು. ಹೆಂಡತಿಯ ಕೂಡ ಮೇಲಿಂದ ಮೇಲೆ ಕಲಹವೆದ್ದರೂ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿಯೂ ಒಳ್ಳೆ ಪ್ರಗತಿ; ಉತ್ತಮ ಪ್ರತಿಷ್ಠೆ ಮತ್ತು ತುಂಬ ಲಾಭ, ಉತ್ತಮೋತ್ತಮ ಕೆಲಸಗಳೂ ಅಲ್ಪಾಯಾಸದಿಂದ ಸಾಧ್ಯವಾಗುವ ಯೋಗ. ವೆಚ್ಚ ಹೆಚ್ಚು ಆದರೂ ಅದರಲ್ಲಿಯ ಹೇತು ಸಾಧ್ಯವಾಗುವದು. ಮಿತ್ರ ಸುಖವು ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು ದೊರೆತರೂ ಶತ್ರುಗಳ ಪ್ರಾಬಲ್ಯ ಹೆಚ್ಚುತ್ತಲೆ ಹೋಗುವದು. ಪ್ರವಾಸಾದಿ ಕೆಲಸ ಹಿತಕರ. ಉತ್ತರೆಯ ೪ ನೆ ಮತ್ತು ಹಸ್ತದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು ತಾ. ೬, ೭, ೮, ೯ ಅನುಕೂಲ.

೬ ನೇ ತಾರೀಕಿಗೆ ಬರುವ ೭ ನೇ ರಾಹು ಹೆಂಡತಿಗೆ ಕಿರಕುಳ ಕ್ಲೇಶವನ್ನುಂಟು ಮಾಡಿದರೆ ನಿಮ್ಮಲ್ಲಿ ಕ್ಷುಲ್ಲಕ ವಿಷಯಗಳ ಬಗ್ಗೆ ಆಗಾಗ ಕಿತ್ಯಾಟವೇಳುವದು. ಲೋಕಾಪವಾದದ ಕೆಲ ಪ್ರಸಂಗ. ವಾದ ವಿವಾದದಲ್ಲಿ ಶತ್ರುಗಳ ಪ್ರಾಬಲ್ಯವೆ ಹೆಚ್ಚು. ಇವೇ ಮೊದಲಾದ ಫಲಗಳು ದೊರೆವವು.

ತುಲಾ

ನಿಮ್ಮ ಪ್ರಕೃತಿ ಅನುಕೂಲವಿದ್ದರೂ ಹೆಂಡತಿಯದು ಮಾತ್ರ ಕೆಡುವದು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೆ. ಮಕ್ಕಳ ಉನ್ನತಿ ವಿಶೇಷ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕಡಿಮೆ ಎನಿಸಿದರೂ ಲಾಭ ಮಾತ್ರ ಉತ್ತಮ. ಅವಚಿತ ಲಾಭದ ಸಂಭವವೂ ಉಂಟು. ವಿಶೇಷ ಪರಿಚಯವಿದ್ದ ಸ್ಥಳದಲ್ಲಿ ನಿಮ್ಮ ಮಾತು ಪ್ರತ್ಯಕ್ಷವಾಗಿ ಧಿಕ್ಕರಿಸಲ್ಪಡುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳಲ್ಲಿಯೂ ಸಮಾನ ಸ್ಥಿತಿ ಉಳಿಯುವದು. ಪ್ರವಾಸ ಅನುಕೂಲ ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು ಚಿತ್ರದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ ತಾ. ೭, ೮, ೯, ೧೦ ಅನುಕೂಲ.

೬ ನೇ ತಾರೀಕಿಗೆ ಬರುವ ೬ ನೇ ರಾಹು ಶತ್ರು ಮತ್ತು ಸಂಕಟಗಳ ನಾಶ ಮಾಡಿ ತುಂಬ ಲಾಭವನ್ನುಂಟುಮಾಡುವನು ಆದರೆ ನೋಕರಚಾಕರರು ಮಾತ್ರ ತೊಂದರೆಕೊಡುವರು. ಮಿತ್ರರು ಕಾಯಿಲೆ ಬೀಳುವರು ಆಪ್ತರೂ ತೊಂದರೆ ಕೊಡುವರು. ದೊಡ್ಡ ವಿಷಯಗಳಿಗಿಂತ ಸಣ್ಣ ಮಾತಿನಲ್ಲಿಯೆ ಹೆಚ್ಚು ತೊಂದರೆ. ಇತ್ಯಾದಿ ಫಲಗಳು ದೊರೆಯುವವು.

ವೃಶ್ಚಿಕ

ನಿಮ್ಮ ಪ್ರಕೃತಿ ಅನುಕೂಲವಿದ್ದರೂ ಹೆಂಡತಿಯದು ಮಾತ್ರ ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವಿದ್ದರೂ ಉದ್ದೇಶದಲ್ಲಿ ಮಾತ್ರ ಪ್ರಗತಿ ಉತ್ತಮ ತುಂಬ ಲಾಭ ಆದರೆ ಪ್ರತಿಷ್ಠೆಯು ಮಾತ್ರ ಒಮ್ಮೆ ಏರಿಕೆಯಲ್ಲಿ ಇದ್ದರೆ ಮತ್ತೊಂದು ಕ್ಷಣಕ್ಕೆ ಅದು ಇಳಿಕೆಯಲ್ಲಿ ಬರುವದು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ದೊರೆತರೂ ಶತ್ರುಗಳ ಪ್ರಾಬಲ್ಯ ಹೆಚ್ಚು. ಪ್ರವಾಸಾದಿ ಕೆಲಸ ಹಿತಕರ. ಅನುರಾಧೆಯ ೪ ನೆ ಮತ್ತು ಜ್ಯೇಷ್ಠದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೯, ೧೦, ೧೧, ೧೨ ಅನುಕೂಲ.

೬ ನೇ ತಾರೀಕಿಗೆ ಬರುವ ೫ ನೇ ರಾಹು ಹೆಂಡತಿ ಗರ್ಭಿಣಿಯಿದ್ದವರಿಗೆ ಸುಪುತ್ರಪ್ರದಾನ ಮಾಡುವ ಸಂಭವವಿರುವದು. ಯಾವದಾದರೊಂದು ಬಗೆಯ ಕೀರ್ತಿ ಹಬ್ಬುವಂತೆ ಸಂಗತಿಗಳು ಸಂಭವಿಸುವ ಯೋಗ ಮನಸ್ಸು ಅಸ್ವಸ್ಥ ಎರಡನೆಯವರ ಊರ್ಜಿತ ಸ್ಥಿತಿಯನ್ನು ಕಂಡು ಮನಸ್ಸಿನಲ್ಲಿ ಸಂಶಯ ಉಂಟಾಗುವದು. ಇವೇ ಮೊದಲಾದ ಫಲಗಳು ದೊರೆವವು.

ಧನು

ನಿಮ್ಮ ಪ್ರಕೃತಿಯು ಅನುಕೂಲವಿದ್ದರೆ ಹೆಂಡತಿಯದು ಮಾತ್ರ ಅಷ್ಟೊಂದು ಚೆನ್ನಾಗಿ ಉಳಿಯುವದಿಲ್ಲ. ತನ್ನ ಮೇಲಿನ ಪ್ರೇಮದ ಬಗ್ಗೆ ಅವಳ ಮನಸ್ಸು ಸಂಶಯಿತವುಳಿಯುವದು. ಮಕ್ಕಳು ಮನಸ್ಸಿನ ವಿರುದ್ಧ ವರ್ತಿಸುವದರಿಂದ ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಉತ್ತಮ ಪ್ರತಿಷ್ಠೆ ಮತ್ತು ತುಂಬ ಲಾಭ. ಅದರಲ್ಲಿಯೂ ನೋಕರಿ ಮಾಡುವವರಿಗಿಂತ ಧಂದೆಮಾಡುವವರಿಗೆ ಹೆಚ್ಚು ಅನುಕೂಲ ವಾರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ ಉಳಿಯುವದು. ಪ್ರವಾಸಾದಿ ಕೆಲಸ ತೊಂದರೆಯದು. ಮೂಲಾದ ೪ ನೆ ಮತ್ತು ಪೂರ್ವಾಷಾಢದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೬, ೭, ೮, ೧೨ ಅನುಕೂಲ.

೬ ನೇ ತಾರೀಕಿನಿಂದ ಬರುವ ೪ ನೇ ರಾಹು ಮನಸ್ಸನ್ನು ಯಾವಾಗಲೂ ಉದ್ವಿಗ್ನವಾಗಿಟ್ಟು ಉದಾಸೀನ ಉಳಿಯುವಂತೆ ಸಂಗತಿಗಳು ಸಂಭವಿಸುವ ಪರಿಸ್ಥಿತಿಯನ್ನು ತರುವನು. ಮನೆಯಲ್ಲಿ ಕಲಹವುಂಟಾಗಿ ತಾಯಿ ಕಾಯಿಲೆ ಬೀಳುವಳು. ಆಸ್ತಿಯಲ್ಲಿ ಇಲ್ಲವೆ ಅದರ ವಾರ್ಷಿಕ ಉತ್ಪನ್ನದಲ್ಲಿ ಹಾನಿ. ಭೂತಾಟಿಕೆ ಮೊದಲಾದ ಅದೃಶ್ಯ ಪೀಡೆಯ ಸಂಭವ. ಇವೇ ಮೊದಲಾದ ಫಲಗಳು ದೊರೆಯುವವು

ಮಕರ

ಹೆಂಡತಿಯ ಪ್ರಕೃತಿ ಚೆನ್ನಾಗಿ ಉಳಿದು ನಿಮ್ಮ ಪ್ರಕೃತಿ ಮಾತ್ರ ಬಹಳ ಕೆಡುವದು. ಮಕ್ಕಳ ಆರೋಗ್ಯಕ್ಕೂ ಕಿರಕಳ ಕಾಯಿಲೆ. ಪರಸ್ಪರರಲ್ಲಿ ಮತೈಕ್ಯವೂ ಕಡಿಮೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ. ಆದರೆ ಪ್ರತಿಷ್ಠೆಗೆ ಮಾತ್ರ ಬಹಳ ವ್ಯತ್ಯಯ ಬರುವದು. ಅಲ್ಪ ಸ್ವಲ್ಪ ಗುಪ್ತ ಲಾಭದ ಸಂಭವ. ಮಿತ್ರಸುಖ ಉತ್ತಮ. ಮೇಲಿಂದ ಮೇಲೆ ಬುದ್ಧಿ ವಿಕಲವಾಗುವಂಥ ಸಂಗತಿಗಳು ಸಂಭವಿಸುವವು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿಯೂ ಸಮಾನ ಸ್ಥಿತಿ ಉಳಿಯುವದು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೬, ೯, ೧೦ ಅನುಕೂಲ.

೬ ನೇ ತಾರೀಕಿಗೆ ಬರುವ ೩ ನೇ ರಾಹು ಆತ್ಮವಿಶ್ವಾಸದಲ್ಲಿ ಹೆಚ್ಚಳವನ್ನುಂಟು ಮಾಡಿ ಯಾವುದೊಂದು ಕೆಲಸದಲ್ಲಿಯೂ ಯಶಸ್ಸು ಸಿಕ್ಕುವಂತಹ ಅನುಕೂಲ ವಾತಾವರಣವನ್ನುಂಟು ಮಾಡುವನು. ಸಮಾಜದಲ್ಲಿ ಮಾನಮಾನ್ಯತೆಯುಂಟಾಗುವದು. ಸಮೀಪದ ಪ್ರವಾಸ ಬಹಳ- ಬಂಧು ವರ್ಗದವರಲ್ಲಿ ಕ್ಲೇಶ ಮತ್ತು ಅವರ ಕೂಡ ವಿರೋಧ. ಇವೇ ಮೊದಲಾದ ಫಲಗಳು ದೊರೆಯುವವು.

ಕುಂಭ

ನಿಮ್ಮದಷ್ಟೇ ಅಲ್ಲ ನಿಮ್ಮ ಹೆಂಡತಿಯ ಪ್ರಕೃತಿಯೂ ಬಹಳ ಅನುಕೂಲ ಉಳಿಯುವದು. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ತೊಂದರೆಯದಾಗುವದು. ಯಾರು ನೋಡಿದರೂ ನಿಮ್ಮ ವಿರುದ್ಧವೇ ಆಗುವರು. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ ವಾಹನದಲ್ಲಿ ಏನಾದರೂ ತೊಂದರೆಯುಂಟಾಗುವ ಅಂಜಿಕೆ· ಉದ್ಯೋಗದಲ್ಲಿ ಪ್ರಗತಿ ಚನ್ನಾಗಿ ಆಗಿ ಪ್ರತಿಷ್ಠೆ ಅನುಕೂಲವಾದರೂ ಲಾಭದಲ್ಲಿ ಮಾತ್ರ ಬಹಳ ವ್ಯತ್ಯಯವುಂಟಾಗುವದು. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳದೇ ಹೆಚ್ಚು ಪ್ರಾಬಲ್ಯ. ಪ್ರವಾಸಾದಿ ಕೆಲಸ ಅನುಕೂಲ. ಧನಿಷ್ಠೆಯ ೪ ನೆ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ.- ತಾ. ೭, ೮, ೯, ೧೦ ಅನುಕೂಲ.

೬ ನೇ ತಾರೀಕಿಗೆ ಬರುವ ೨ ನೇ ರಾಹು ನಿರರ್ಥಕ ವೆಚ್ಚವಾಗುವಂತೆ ಪ್ರವರ್ತಿಸುವನು. ಕುಟುಂಬದಲ್ಲಿಯ ಬಹುತರ ಎಲ್ಲರೊಡನೆ ವಿರೋಧ ಸರ್ಪಾದಿ ವಿಷಾರಿ ಪ್ರಾಣಿಗಳ ಅಂಜಿಕೆ. ಅಭದ್ರಮಾತುಕತೆ. ಕೆಲ ವಸ್ತುಗಳು ಕಳವಾಗಿ ಹೋಗುವ ಅಂಜಿಕೆ. ಇವೇ ಮೊದಲಾದ ಫಲಗಳು ದೊರೆಯುವವು.

ಮೀನ

ಎಲ್ಲರ ಪ್ರಕೃತಿ ಚೆನ್ನಾಗಿ ಉಳಿದು ಪ್ರಾಪಂಚಿಕ ಸುಖವೂ ಮನಸ್ಸಿನಂತೆ ದೊರೆಯುವದು. ಪ್ರಿಯ ಜನರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಕಲ್ಪನಾತೀತ ಉತ್ತಮ. ಆದರೆ ವೆಚ್ಚವೂ ವಿಪರೀತ. ಮಿತ್ರರಲ್ಲಿ ವಿರೋಧ. ಸ್ತ್ರೀ ವರ್ಗದಲ್ಲಿ ಹೆಚ್ಚು ಆದರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳು ಪೂರ್ಣವಾಗಿ ಪರಾಜಯ ಹೊಂದುವರು. ಪ್ರವಾಸಾದಿ ಕೆಲಸ ಹಿತಕರ ಆದರೆ ಉತ್ತರಾ ಭಾದ್ರಪದದ ೪ ನೇ ಮತ್ತು ರೇವತಿಯ ಮೊದಲನೆ ಮೂರು ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು ತಾ. ೯-೧೦, ೧೧-೧೨- ಅನುಕೂಲ.

೬ ನೇ ತಾರೀಖಿಗೆ ಬರುವ ೧ ನೇ ರಾಹು ಮನಃಶಾಂತಿಯನ್ನುಂಟು ಮಾಡಿ ಗಾಂಭೀರ್ಯವನ್ನು ಹೆಚ್ಚಿಸುವನು. ಹೊಸ ಹೊಸ ಕಲ್ಪನೆಗಳೂ ಸೂಚಿತವಾಗಿ- ಸ್ವಹಿತಕ್ಕಾಗಿ ಅವುಗಳ ಉಪಯೋಗ ಮಾಡಿಕೊಳ್ಳುವ ಸಂಧಿ ದೊರೆಯುವದು. ಉದ್ಯೋಗ ಧಂದೆಯಲ್ಲಿ ಯಶಸ್ಸು. ಆದರೆ ಪರಸ್ತ್ರೀ ಬಗ್ಗೆ ನಿಮ್ಮ [illegible] ಬುದ್ಧಿಯುಂಟಾಗುವದು. ಇವೇ ಮೊದಲಾದ ಫಲಗಳು ದೊರೆಯುವವು.

ನಾಚಿಕೆ—ಮರ್ಯಾದೆ

ದಯಾಚಿಸ ಪ್ರಸಿದ್ಧ [illegible] ಫ್ರಾನ್ಸಿಸ್ಕ ಸಾಮ್ರಾಜ್ಞಿ ತನ್ನ [illegible] ೧೮೦೨ ರಲ್ಲಿ ತನ್ನ ಆಸ್ತಿಯನ್ನು [illegible] ಮೂಲಕ ಬರೆದು ಕೊಟ್ಟು ತನ್ನ [illegible] ಬಣ್ಣದ ಮೀನಿನ ಮಾನರಕ್ಷಣೆ ಮಾಡಲು ಅದಕ್ಕೆ ಯಾವಾಗಲೂ ಬಿಗಿಯಾದ ಉಡುಪನ್ನು [illegible] ಇಟ್ಟಿರುವಂತೆ ಆದೇಶಿಸಿದ್ದಳು!

[illegible]

ಭೇದ

" ಭಾರತ ಸರಕಾರ ಮತ್ತು ಕೆಲ ಪ್ರಾಂತಿಕ ಸರಕಾರಗಳು ಕಮ್ಯುನಿಸ್ಟರ ಮೇಲೆ ಯುದ್ಧ ಹೂಡಿಬಿಟ್ಟಿವೆ. ಕೆಲ ವಿಷಯಗಳಲ್ಲಿ ಅವರು ಮಾಡಿದ್ದು ಸಮಂಜಸವೆಂದು ಅರ್ಥಮಾಡಿಕೊಳ್ಳಲಾಗದೆನಿಸಿದರೂ—ವಿಶೇಷತಃ ಅವರ ಹಿಂಸಾಚಾರದ ವಿಷಯದಲ್ಲಿ ಹಾಗೆ ತಿಳಿದುಕೊಳ್ಳಲು ಸಾಧ್ಯವಿಲ್ಲವಾದರೂ—ಕೇವಲ ಮಾನವತೆಗೆ ಸಹಜವಾದ ಉದ್ದೇಶದಿಂದ ಅವರು ಕರ್ತವ್ಯ ತತ್ಪರರಾಗಿರವುದರಿಂದ ಬಂಡವಾಳಶಾಹಿಯ ಸಂಪೂರ್ಣ ವಿನಾಶನ ಮತ್ತು ಮಾನವರಲ್ಲಿ ಅರ್ಥಸಾಮ್ಯಪ್ರತಿಷ್ಠಾಪನೆ ಎಂಬ ಅವರ ತತ್ವಗಳನ್ನು ಯಾವನೇ ಆಗಲಿ ಸ್ವೀಕರಿಸಲೇಬೇಕು ಮತ್ತು ಸಹಾನುಭೂತಿ ತೋರಬೇಕು. ಅರ್ಥನೀತಿಯಲ್ಲಿ ಪೈಶಾಚಿಕ ಲಾಭದ ಮೇಲೂ ಸಾಮಾಜಿಕ ನೀತಿಯಲ್ಲಿಗಂಡಸರು, ಹೆಂಗಸರು ಮತ್ತುಮಕ್ಕಳು ಇವರನ್ನು ಸಾಮೂಹಿಕವಾಗಿ ಸಂಪೂರ್ಣ ಅಧಃಪತಿತರನ್ನಾಗಿ ಇಡುವುದರ ಮೇಲೂ ನಿಂತ ವ್ಯವಹಾರಪದ್ಧತಿಯನ್ನು ಸುಧಾರಿಸಲು ಅವರು ಪ್ರಯತ್ನಿಸುತ್ತಿದ್ದಾರೆ. 'ಸರ್ವೋದಯದ' ಕಾರ್ಯವಾದರೂ ಅದೇ ಅಲ್ಲವೇ? ಅವಕಾಶ ಸಿಕ್ಕಿದಾಗ ಮೇಲಿನ ಭಾವಗಳನ್ನು ಹಸರಿಸುವುದು ಪ್ರತಿಯೊಬ್ಬನ ಪವಿತ್ರ ಕರ್ತವ್ಯವಲ್ಲವೆ?"

ಪ್ರಶ್ನೆಯೇ ಸ್ವತಃ ಉತ್ತರವನ್ನು ಸಿದ್ಧಪಡಿಸುತ್ತದೆ. ಸರ್ವೋದಯಕ್ಕೂ ಕಮ್ಯುನಿಜಮ್ಮಿಗೂ ಇರುವ ಭೇದ ಸಿದ್ಧಿಯಲ್ಲಿಲ್ಲ, ಸಾಧನದಲ್ಲಿದೆ. ಗಾಂಧಿಯವರೇ ಸ್ವತಃ ತಾವು ಹಿಂಸಾರಹಿತ ಕಮ್ಯುನಿಸ್ಟರೆಂದು ಎಷ್ಟೋ ವೇಳೆಹೇಳಿದ್ದುಂಟು. ಸಾಮ್ಯವಾದವನ್ನು ಪ್ರಚುರಪಡಿಸಿಲ್ಲ. (ಕಮ್ಯುನಿಜಂ ತತ್ವ), ಸಾಮ್ಯಧರ್ಮವನ್ನು (ಸಮತ್ವದ ಕರ್ತವ್ಯ ಅಥವಾ ಆಚಾರವನ್ನು) ಪ್ರಚುರಪಡಿಸುತ್ತೇವೆ ಎಂದು ಅವರು ಈ ಭೇದವನ್ನು ವಿಧಾಯಕ ಶೈಲಿಯಲ್ಲಿ ವ್ಯಕ್ತಮಾಡಿದ್ದಾರೆ. ಮರಣಪರ್ಯಂತವಾಗಿ ಅವರು ಮಾಡುತ್ತಿದ್ದ ಪ್ರಯತ್ನವೆಂದರೆ ಈ "ಧರ್ಮ"ವನ್ನು ಆಚರಿಸುವುದೇ. ಭಾರತೀಯರಲ್ಲಿಯ ದೀನತಮ ವರ್ಗದವರೊಡನೆ ತಾವೂ ಒಬ್ಬರೆಂದು ಭಾವಿಸಲು ಅವರು ಪ್ರಯತ್ನಪಟ್ಟರು. ಕೆಲ ತಲೆಮಾರುಗಳ ವರೆಗೆ ರಾಜ್ಯಭಾರ ಮತ್ತು ರಾಜಕಾರಣಗಳನ್ನು ಒಂದು ವೃತ್ತಿಯನ್ನಾಗಿ ಮಾಡಿಕೊಂಡಿದ್ದ ಮನೆತನದಲ್ಲಿ ಅವರು ಹುಟ್ಟಿದವರು. ಆ ಭವಿತವ್ಯವನ್ನು ಸತ್ಯಗೊಳಿಸದಿರಲಾರದಾದರೂ ಅವರು ಹಾಗೆ ಒಂದು ವೃತ್ತಿಯೆಂದುಕೊಳ್ಳದೆ ಅದರ ಮುಂದಿನದೆನಿಸುವ ವಕೀಲಿಯನ್ನು ಸ್ವೀಕರಿಸಿದರು. ಅವರು ರಸ್ಕಿನ್ನನ ಪ್ರಬಂಧವನ್ನೋದಿ, ತಾವು ವಕೀಲಿಯನ್ನು ಮಾಡಿದರೂ ತಮಗಾಗಿ ಧನ ಸಂಪಾದನೆ ಮಾಡಲು ಅದನ್ನೊಂದು ಸಾಧನವನ್ನಾಗಿ ಮಾಡಿಕೊಳ್ಳುವುದು ನ್ಯಾಯ್ಯವಲ್ಲ ಎಂಬುದನ್ನು ಅರಿತುಕೊಂಡರು. ಅದುದರಿಂದ ಅವರು ತಮ್ಮ ಖಾಸಗಿ ಆಸ್ತಿಯನ್ನೆಲ್ಲ ತ್ಯಜಿಸಿಬಿಟ್ಟರು. ಟಾಲ್‌ಸ್ಟಾಯಿಯವರ ಬರಹವನ್ನೂ ಗೀತೆಯನ್ನೂ ಓದಿ, ವಕೀಲಿಯೆಂಬುದು ಒಂದು ಉತ್ಪಾದಕ ವೃತ್ತಿಯಲ್ಲವಾದುದರಿಂದ ತಮ್ಮ ದೇಹಶ್ರಮದಿಂದಲೇ ಏನಾದರೊಂದನ್ನು ಉತ್ಪಾದಿಸಿ ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳಬೇಕೆಂಬ ಸಿದ್ಧಾಂತಕ್ಕೆ ಬಂದರು. ಅದುದರಿಂದ ವಕೀಲಿಯನ್ನು ಬಿಟ್ಟು ಅವರು ಹೊಲಗದ್ದೆಗಳತ್ತ ತಿರುಗಿ ತಾವೊಬ್ಬ ಒಕ್ಕಲಿಗ ಎಂದು ಕರೆದುಕೊಂಡರು. ಒಕ್ಕಲಿಗನಿಗೆ, ಹೇಗೇ ಆಗಲಿ, ಒಂದಿಷ್ಟು ಆಸ್ತಿಯಿರುತ್ತದೆ ಮತ್ತು ಕೈಗಾರಿಕೆಯ ಕಸಬುದಾರರಿಗಿಂತ ಸಾಮಾಜಿಕ ಮತ್ತು ಆರ್ಥಿಕ ಸ್ಥಾನ ಉತ್ತಮವಿರುತ್ತದೆ. ಆದಕಾರಣ, ಅವರೊಬ್ಬ ನೆಯ್ಗೆಕಾರರಾದರು. ಆದರೆ ನೆಯ್ಗೆಕಾರನು ಕೂಲಿಕಾರನಿಗಿಂತ ಮೇಲ್ತರಗತಿಯವನಾಗಿರುತ್ತಾನೆ; ಕೂಲಿಕಾರನು "ಭಂಗಿ"ಗಿಂತ ಮೇಲ್ತರಗತಿಯವನು. ಭಂಗಿಗೆ ಉಪಕರಣಗಳಿಲ್ಲ, ತಾಂತ್ರಿಕ ಕೌಶಲವಿಲ್ಲ, ಜ್ಞಾನವಿಲ್ಲ, ಸಮಾಜದಲ್ಲಿ ಸ್ಥಾನವಿಲ್ಲ. ಅದುದರಿಂದ ಗಾಂಧಿಯವರು ತಮ್ಮನ್ನು ಭಂಗಿಯೆಂದು ಕರೆದುಕೊಂಡು ಅವರೊಟ್ಟಿಗೆ ಬಾಳಲು, ಅವರ ಸ್ನೇಹ ಗಳಿಸಲು ಮತ್ತು ದೀನ ಭ್ರಾತೃಗಳಾದ ಅವರ ಸ್ಥಿತಿಯನ್ನು ಮೇಲಕ್ಕೆತ್ತಲು ಪ್ರಯತ್ನಿಸಿದರು.

ಅವರು ಹೆಚ್ಚು ಹೆಚ್ಚು ಸಾಮ್ಯವನ್ನು ಆಚರಿಸುತ್ತ ಹೋದ ಹಾಗೆ ಅದರಂತೆ ಬದುಕುವುದು ಎಷ್ಟು ಕಷ್ಟ ಎಂಬುದು ಅವರಿಗೆ ಅರಿವಾಯಿತು. ಅದರಲ್ಲಿ ತಾವು ಕೃತಾರ್ಥರಾದೆವೆಂದು ಹೇಳಲು ಸಾಧ್ಯವಾಗಲಿಲ್ಲ. ಅದುದರಿಂದ ಆ ಧ್ಯೇಯವನ್ನು ಸಾಧ್ಯವಾದಮಟ್ಟಿಗೆ ಸಮವೇಗದಿಂದ ಮುಟ್ಟಲು ಪ್ರಯತ್ನಿಸುತ್ತಿರುವಾಗಲೇ ಎತ್ತು ಆಕಳುಗಳಿಗೂ ನಮಗೂ ನಡುವೆ ಇರುವ ಸ್ಥಾನವೈಷಮ್ಯವನ್ನೂ ಅವುಗಳನ್ನು ನಮಗಾಗಿ ಬಳಸಿಕೊಳ್ಳುವುದನ್ನೂ ಸ್ವತಃಸಿದ್ಧವೆಂದು ನಾವು ತಿಳಿದುಕೊಂಡಿರುವಂತೆ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳಲ್ಲಿ ವೈಷಮ್ಯವನ್ನೂ ಸ್ವಾರ್ಥಕ್ಕಾಗಿ ಬಳಸುವುದನ್ನೂ ಸ್ವತಃಸಿದ್ಧವೆಂದು ಬಗೆಯುವವರ ಬಗ್ಗೆ ಸಿಟ್ಟುಮಾಡಲು ಅವರಿಗೆ ಮನಸ್ಸು ಬರಲಿಲ್ಲ. "ಗೋಸೇವೆ" ಮತ್ತು ಗೋಸಂತತಿಸಂವರ್ಧನದ ಚಟುವಟಿಕೆಗಳಲ್ಲಿ (ಮಾನವನ ಸುಖದ ದೃಷ್ಟಿಯಿಂದ) ಕರುಣೆಯಿಂದ ನಡೆಸಿಕೊಳ್ಳುವುದು ಮತ್ತು ಈ ಪ್ರಾಣಿಗಳನ್ನು ಇನ್ನೂ ಚೆನ್ನಾಗಿ ಬಳಸಿಕೊಳ್ಳುವುದು ಇಷ್ಟೇ ನಮ್ಮ ಗುರಿಯಾಗಿದೆ. ಹಾಗೇ ಖಾಸಗಿ ಆಸ್ತಿ, ವಿಷಮ ಸಾಮಾಜಿಕ ವರ್ಗೀಕರಣ ಮತ್ತು ಅಂಥ ಇತರ ರೂಢಿಗಳ ಸನ್ನಿವೇಶದಲ್ಲಿ ಬೆಳೆದುಬಂದ ಮಾನವನು ಧನಿಕ ನಿರ್ಧನ ಮತ್ತು ಉನ್ನತ. ಅವನತ ಸ್ಥಿತಿಯಲ್ಲಿರುವ ಜನರ ಅಸ್ತಿತ್ವವನ್ನು ಏಕೆ, ಏನು ಎಂದು ಪ್ರಶ್ನಿಸದೆ ಅದು ಇರುವುದೇ ಹಾಗೆ, ಅನೇಕ ವಾಸ್ತವಿಕ ಸಂಗತಿಗಳಲ್ಲಿ ಅದೂ ಒಂದು ಎಂದು ತಿಳಿದು ವ್ಯವಹರಿಸುತ್ತಾನೆ. ಕಳೆದ ೩೦-೪೦ ವರ್ಷಗಳಿಂದ ಮಾತ್ರ ಈ ಕಲ್ಪನೆಯಲ್ಲಿಯ ಸತ್ಯತೆಯ ಬಗ್ಗೆ ಪ್ರಶ್ನೆ ಹಾಕುವುದು ಭಾರತದಲ್ಲಿ ಆರಂಭವಾಗಿದೆ. ಬುದ್ಧಿಯಲ್ಲಿ ಈ ಕಲ್ಪನೆ ತಕ್ಕಮಟ್ಟಿಗೆ ದುರ್ಬಲವಾಗಿ ನಿಂತರೂ ದೇಶದ ದರಿದ್ರತಮ ನಾಗರಿಕನ ಹೃದಯದಲ್ಲೂ ಬಂಡವಾಳಿಗತನದ ಭಾವ ರೂಢಮೂಲವಾಗಿ ಉಳಿದಿದೆ. ಪ್ರತಿಯೊಬ್ಬನೂ, ಸಾಧ್ಯವಾದರೆ, ಒಂದಲ್ಲ ಒಂದು ದಿನ ಒಬ್ಬ ಜಮೀನುದಾರ ಇಲ್ಲವೆ ಬಂಡವಾಳಿಗ ಎನಿಸಿ ಕಡೆಯಪಕ್ಷ ದೇಹಶ್ರಮದ ಕೆಲಸವನ್ನಾದರೂ ಮಾಡದೆ ತನ್ನ ಜೀವನದನ್ನು ಸಾಗಿಸಲು ಅನುಕೂಲವಾದ ಪರಿಸ್ಥಿತಿಯನ್ನು ಒದಗಿಸಲು ಆಶಿಸುತ್ತಾನೆ. ಸುಖಕರವಾದ ದೇಹಶ್ರಮರಹಿತವಾದ ಜೀವನವನ್ನು ನಡೆಸುವ ಅವಕಾಶವನ್ನು ಪಡೆಯುವ ಆಸೆ, ಒಂದೆಡೆ ಜನರು ಜೀವನ ಮತ್ತು ಸ್ಥಾನಮಾನಗಳ ವಿಷಮತೆಗಳನ್ನು ಗೊಣಗದೆ ಒಪ್ಪಿಕೊಳ್ಳುವಂತೆ ಮಾಡಿದರೆ, ಮತ್ತೊಂದೆಡೆ ಅದನ್ನು ಸಾಧಿಸುವುದರಲ್ಲಿ ಆಗಲೇ ತಮಗಿಂತ ಮುಂದೆ ಹೋದವರ ಬಗ್ಗೆ ಆಸೂಯೆ ಪಡುವಂತೆ ಮಾಡುತ್ತದೆ. ಅವರಲ್ಲಿ ಯಾರೂ ಸರಳವಾದ, ಕಷ್ಟಕರವಾದ, ಶ್ರಮ ಜೀವನವನ್ನು ನಂಬದವರಾಗಿರುವಾಗ ಒಬ್ಬನು ಬಂಡವಾಳಿಗ, ಮತ್ತೊಬ್ಬ ಕಮ್ಯುನಿಸ್ಟ ಎಂದು ಹೇಳಿಸಿಕೊಂಡರೂ ಅವರಿಬ್ಬರೂ ಐಷಾರಾಮದ "ಗಾದಿ"ಗೆ ಪರಸ್ಪರ ವಿರೋಧಿಗಳಾದ ಇಬ್ಬರು ಹಕ್ಕುದಾರರೆನಿಸುವರು. ಮುಷ್ಕರ ಹೂಡಿದ ಕೂಲಿಕಾರರನ್ನು ವಿಘಾತಕ ಚಟುವಟಿಕೆಗಳನ್ನು ಮಾಡಲು ಸುಲಭವಾಗಿ ಉತ್ತೇಜಿಸಬಹುದಾದ ಸಂಗತಿಯಿಂದ ಅವರು ತಮ್ಮ ಕೊರಳಿಗೆ ಕಟ್ಟಿದ ಯಂತ್ರವನ್ನು ದ್ವೇಷಿಸುವರು ಎಂದು ತಿಳಿದುಬರುತ್ತದೆ. ಸಿಟ್ಟುಗೊಂಡ ಗೂಳಿಕೂಡ ತನ್ನ ಗೋಣಿನ ಮೇಲೆ ಹೇರಿದ ನೊಗವನ್ನು ಕಂಡು ಹಾಗೇ ಮಾಡುವುದು. ಯಂತ್ರದಲ್ಲಿ ತಾನು ಮಾಡುವ ಕಠಿನ ಕೆಲಸವನ್ನು ಅವನು ದ್ವೇಷಿಸುವುದರಿಂದ, ಮುಷ್ಕರ ಮುಗಿದೊಡನೆಯೇ ತನ್ನ ರೊಟ್ಟಿಯನ್ನು ಉತ್ಪಾದಿಸುವ ಅದನ್ನು ಕ್ರುದ್ಧ ನೇತೃಗಳ ಉತ್ತೇಜನದಿಂದ ಉದ್ರಿಕ್ತನಾಗಿ ಒಂದೇ ಏಟಿಗೆ ನಾಶಮಾಡಿಬಿಡುವನು. ಹಾಗೆ ಮಾಡುವುದರಿಂದ ಅವನು ಯು[illegible] ಹೇಗೋ ಹಾಗೇ ಹೆಂಗಸರು, ಗಂಡಸರು ಮತ್ತುಮಕ್ಕಳನ್ನು ಒಂದೇ [illegible] ದುರ್ಬಲರನ್ನಾಗಿ ಮಾಡುವನು. ಆಸ್ತಿ ಅಲ್ಲಿರಲಿ, ಅವನ ಆ ಕೃತ್ಯದಲ್ಲಿ ಜೀವನದ ಬಗ್ಗೆಯೂ ಮನ್ನಣೆಯಿಲ್ಲ, ಮತ್ತು ಅವನ ವರ್ಗಕ್ಕೇ ಸೇರಿದವರಾಗಿರಬಹುದಾದ ಸಂಪೂರ್ಣವಾಗಿ ನಿರಪರಾಧಿಗಳಾಗಿರುವವರ ಕಡೆಗೂ ಅವನ ಲಕ್ಷ್ಯವಿಲ್ಲ. ಅವನು [illegible] ಧರ್ಮವನ್ನು ಆಚರಿಸುತ್ತಿದ್ದರೂ "ತಾನು ಕೇವಲ ದಯಾಮಯವಾದ ಒಂದು ಉದ್ದೇಶದಿಂದ ಉತ್ತೇಜಿತನಾಗಿದ್ದೇನೆ" ಎಂದು ಸಾಧಿಸಬಲ್ಲ. ಎಲ್ಲಿಯ ವರೆಗೆ ಮನುಷ್ಯನು ಸುಖಸೌಕರ್ಯಗಳನ್ನು ಕೆಲಸ ಮಾಡದೆ ಬದುಕುವುದನ್ನೂ ಜೀವನದ ವರಗಳೆಂದು ತಿಳಿಯುವನೋ ಅಲ್ಲಿಯ ವರೆಗೆ ತನ್ನ ಆ ಗುರಿಯನ್ನು ಸಾಧಿಸಿಕೊಳ್ಳಲು ಅವನು ಹಿಂಸೆಯನ್ನು ಬಳಸದೆ ಇರಲಾರನು.

ಅಹಿಂಸೆ ಮತ್ತು ಉದರಭರಣಕ್ಕಾಗಿ ದುಡಿತ ಇವನ್ನು ಕಮ್ಯುನಿಸ್ಟ ಚಳವಳಿಯ ಅವಿನಾಭಾವಿಯಾದ ಅಂಗವೆಂದು ಸ್ವೀಕರಿಸಿದರೆ ಅದರೊಡನೆ ಜಗಳ ಮಾಡಲು ಯಾವ ಕಾರಣವೂ ಇಲ್ಲ. ಅದು ಇವನ್ನು ತನ್ನ ಧರ್ಮದ ಭಾಗವೆಂದು ಪ್ರಾಮಾಣಿಕತೆಯಿಂದ ಸ್ವೀಕರಿಸಿದರೆ ಮತ್ತು ಹಾಗೆ ಅದು ಸ್ವೀಕರಿಸಿದರೂ ಸರಕಾರವು ಕೇವಲ ತಮ್ಮ ವಿರುದ್ಧ ನಿಂತ ಪಕ್ಷವೆಂದು ಅದನ್ನು ಬಗ್ಗುಬಡಿಯುವುದಕ್ಕಾಗಿ ಅದರ ಮೇಲೆ ಯುದ್ಧ ಹೂಡಿದರೆ ಆ ಕೂಡಲೆ ಧಕ್ಕೆಗೊಳಗಾದ ಹಿತಸಂಬಂಧದವರನ್ನು ಬಿಟ್ಟು ಮಿಕ್ಕ ಎಲ್ಲರ ಬೆಂಬಲವೂ ತಮಗಿದೆ ಎಂಬುದು ಕಮ್ಯುನಿಸ್ಟರಿಗೆ ತಿಳಿದು ಬರುವುದು. ಈಗಿರುವ ಬಗೆಯೆಂದರೆ, ಮಾನವ ಜೀವಗಳಿಗೆ ಮತ್ತು ದೇಶದ ಸಂಪತ್ತಿಗೆ ಮೃತ್ಯುವಾಗುವಂತೆ ಒಬ್ಬರ ಹಿಂಸೆ ಇನ್ನೊಬ್ಬರ ಹಿಂಸೆಯ ವಿರುದ್ಧ ಕಾಳಗಕ್ಕಾಗಿ ನಿಂತಿದೆ. ಬಂಡವಾಳಶಾಹಿ, ಕಮ್ಯುನಿಜಂ ಮತ್ತು ಇತರ ಎಲ್ಲ [illegible] ಸಜ್ಜು ಮಾಡ[illegible]

ಕಮ್ಯುನಿಸ್ಟ [illegible] ತೋರಿಸುತ್ತಿದ್ದರು ಅವ[illegible] ಧರ್ಮಕ್ಕೆ ಪರಿವರ್ತಿಸಲಲ್ಲದಿದ್ದರೆ [illegible] ಕೇವಲ ಭಾರತವೊಂದಕ್ಕಲ್ಲದೆ [illegible] ಒಂದು ದೊಡ್ಡ ಸೇವೆಯನ್ನು [illegible] ಗುವುದು. ಕೇಡನ್ನು ಅಹಿಂಸಾ[illegible] ಘಟಿಸುವ ತಂತ್ರದಿಂದ [illegible] ಅನೇಕ ಹಿಂಸಾವಾದಿಗಳು ಹಿಂಸೆಯ[illegible] ಸುವಂತೆ ಮಾಡುವುದರಲ್ಲಿ ಜಯಶೀ[illegible] ಅವರ ದೇಶಪ್ರೇಮವನ್ನು ಅವರು [illegible] ದರು, ಆದರೆ ಹಿಂಸಾಚಾರಕ್ಕೆ [illegible] ತೋರದಾದರು. ಅದೇ ಮೇರೆಗೆ ಕಮ್ಯುನಿಷ್ಟರ ಬಗ್ಗೆ ಇರುವ ಸಹಾನುಭೂತಿ[illegible] ಹಿಂಸೆಯ ಮೂಲಕ ಕಮ್ಯುನಿಸ್ಟರು [illegible] ಬೇಕೆಂದಿರುವ ಆರ್ಥಿಕ ಮತ್ತು [illegible] ಬದಲಾವಣೆಗಳನ್ನು ಸಾಧಿಸಲು [illegible] ಅಹಿಂಸಾತ್ಮಕ ಮಾರ್ಗಗಳನ್ನು ಹುಡುಕ[illegible] ನಮ್ಮನ್ನು ಒಯ್ಯಬೇಕು.

ವರ್ಧಾ, ೨೬-೫-೪೯ — ಕಿ. ಘ. ಮಶ್ರೂವಾಲಾ

ಚೀನ ಮತ್ತು ಜಪಾನುಗಳಲ್ಲಿ ಗಾಂಧಿಯವರ ಪ್ರಭಾವ

ನಾವು (ಅಂದರೆ ಲೇಖಕ ಮತ್ತು ಅವನ ಹೆಂಡತಿ) ಎಪ್ರಿಲ್ ೧೮ ರಲ್ಲಿ ಶಾಂಘಾಯಿಗೆ ತಲುಪಿದೆವು ಮತ್ತು ಅಲ್ಲಿ ಎರಡು ದಿನ ನಿಂತೆವು. ನಾವು ೬ ದಿನಗಳನ್ನು ಟೋಕಿಯೋದಲ್ಲಿ ಕಳೆದೆವು. ಡಾ. ಜೀಯವರು ಅಧ್ಯಕ್ಷರಾಗಿರುವ ಜಾಗತಿಕ ಬುದ್ಧಸಂಘವು ನನ್ನನ್ನು ಆಮಂತ್ರಿಸಿತು ಮತ್ತು ಅಲ್ಲಿಯ ನನ್ನ ಭಾಷಣದಲ್ಲಿ ನಾನು ಚೀನ ಮತ್ತು ಭಾರತಗಳಲ್ಲಿ ಹೆಚ್ಚಿನ ಸಾಂಸ್ಕೃತಿಕ ಸಂಪರ್ಕವಾಗಬೇಕೆಂದು ಒತ್ತಿ ಹೇಳಿದೆನು. ನಾನು ಸರ್ವೋದಯ ಸಮಾಜದ ಬಗ್ಗೂ ಅಲ್ಲಿ ಹೇಳಿದೆನು. ಅವರು ಆ ವಿಚಾರವನ್ನು ಮೆಚ್ಚಿಕೊಂಡರು ಮತ್ತು ಡಾ. ಜೀ ಅದರ ಸದಸ್ಯರಾದರು. ಶಾಂಘಾಯಿಯ ಪಾಶ್ಚಾತ್ಯ ವಿಚಾರದ ಪುಸ್ತಕ ಭಂಡಾರದ ಅಧ್ಯಕ್ಷರಾದ ಡಾ. ಲಿನ್ನರಿಂದಲೂ ನಮಗೆ ಆಮಂತ್ರಣ ಬಂದಿತು. ಅಲ್ಲಿ ನಾನೊಂದು ಪುಟ್ಟ ಭಾಷಣ ಮಾಡಿದೆನು. ಚೀನದಲ್ಲಿ ಗಾಂಧೀಸಾಹಿತ್ಯಕ್ಕೆ ಹೆಚ್ಚಿನ ಪ್ರಕಟಣೆ ಅವಶ್ಯಕ ಎಂದು ಎಲ್ಲರೂ ಅಪೇಕ್ಷಿಸಿದರು. ಜಪಾನಿನಲ್ಲಿ ನಾವು ಅನೇಕ ಜಪಾನೀ ಪ್ರಾಧ್ಯಾಪಕರನ್ನೂ ಡಯಟ್ಟಿನ (Diet) ಸದಸ್ಯರನ್ನೂ ಭೆಟ್ಟಿಯಾದೆವು. ಅವರು ಗಾಂಧೀತತ್ವದಲ್ಲಿ ಬಹಳ ಆಸಕ್ತಿಯನ್ನು ತೋರಿದರು. ಬಹಳ ಕಾಲದಿಂದ ಜಪಾನಿನಲ್ಲಿ ಒಂದು ಗಾಂಧೀಸಂಘ ನಡೆದುಬಂದಿದೆ. ಅದಕ್ಕೆ ಬಹಳ ಜನರು ಸದಸ್ಯರಾಗಿದ್ದಾರೆ. ಟೋಕಿಯೋವಿನ ಹೊಂಗಾಂಜಿ ಬೌದ್ಧ ದೇವಾಲಯದ ಮುಖ್ಯಾರ್ಚಕರಾದ ಶ್ರೀ ನಾಕಯಾಮರು ಆ ಗಾಂಧೀಸಂಘದ ಕಾರ್ಯದರ್ಶಿಗಳು. ಅವರು ಒಳ್ಳೆಯ ಉತ್ಸಾಹಿಗಳಾದ ಕಾರ್ಯಕರ್ತರು. ಬಾಪುವಿನ ಮರಣವಾದ ಕೆಲ ದಿನಗಳ ಬಳಿಕ ಅವರು ಮೂರುದಿನ ಉಪವಾಸಮಾಡಿದರು. ಬುದ್ಧನ ವಾರ್ಷಿಕೋತ್ಸವದ ದಿನವಾದ ಫೆಬ್ರುವರಿ ೧೫ ರಲ್ಲಿ ಗಾಂಧಿಯವರ ಮೊದಲನೆಯ ವಾರ್ಷಿಕ ಪುಣ್ಯತಿಥಿಯನ್ನು ಸಂಘದವರು ಆಚರಿಸಿದರು. ಅಂದು ಅವರು ಟೋಕಿಯೋವಿನ ಅತಿ ದೊಡ್ಡದಾದ ಬೌದ್ಧ ದೇವಾಲಯವೆನಿಸಿದ ಆ ಹೊಂಗಾಂಜಿ ಬೌದ್ಧ ದೇವಾಲಯದಲ್ಲಿಯ ಬುದ್ಧವಿಗ್ರಹದ ಬದಿಯಲ್ಲಿ ಗಾಂಧಿಯವರ ಭಾವಚಿತ್ರವನ್ನಿಟ್ಟಿದ್ದರು. ನಿನ್ನೆ ಹೊಂಗಾಂಜಿ ದೇವಾಲಯದಲ್ಲಿ ಗಾಂಧೀಸಂಘ, ಬುದ್ಧಾರಾಧಕಸಂಘ, ಅಂತಾರಾಷ್ಟ್ರೀಯ ಧಾರ್ಮಿಕ ಸಂಘ ಮತ್ತು ಅಂತಾರಾಷ್ಟ್ರೀಯ ಸಾಂಸ್ಕೃತಿಕ ಸಂಘ ಇವುಗಳ ಆಶ್ರಯದಲ್ಲಿ ನಾನು ಒಂದು ಭಾಷಣಕೊಟ್ಟೆ. ಸರ್ವೋದಯದ ಕಲ್ಪನೆಯ ಬಗ್ಗೂ ಹೇಳಿದೆ. ನಿನ್ನೆ ನನ್ನ ಮಾತಿಗೆ ಸ್ವಲ್ಪ ಮುಂಚೆ ಭಾರತೀಯ ಸಂಪರ್ಕ ಸಮಿತಿಯ ಮುಖ್ಯಸ್ಥರಾದ ಶ್ರೀ ಮುಲ್ಹೋರ್ತ್ರರು ಭಾರತ ಸರಕಾರದ ಪರವಾಗಿ ಅಲ್ಲಿಯ ಗಾಂಧೀಸಂಘಕ್ಕೆ ಒಂದು ಗಾಂಧೀ ಸಾಹಿತ್ಯ ಸಂಗ್ರಹವನ್ನು ಬಹುಮಾನವಾಗಿ ಕೊಟ್ಟರು. ಶ್ರೀಮತಿ ಮದಾಲಸೆ ಕೂಡ (ಲೇಖಕನ ಹೆಂಡತಿ) ಹಸ್ತಿದಂತದಿಂದ ಮಾಡಿದ ಬಾಪುವಿನ ಒಂದು ಚಿಕ್ಕ ಪ್ರತಿಮೆಯನ್ನು ಅದಕ್ಕೆ ಕೊಟ್ಟಳು. ಎರಡು ದಿನಗಳ ಹಿಂದೆ ಅವಳೂ ಒಂದು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದಳು. ಅವಳು ಚೆನ್ನಾಗಿ ಮಾತಾಡಿದಳು.

ಟೋಕಿಯೋವಿನಲ್ಲಿ ಫ್ಲೇಜರ್ ಕನಿಕ ಮತ್ತು ಮೇಜರ್ ಫ್ಯುಜಿವಾರ ಎಂಬಿಬ್ಬರು ಸೈನಿಕರನ್ನು ಭೆಟ್ಟಿಯಾದೆವು. ಅವರು [illegible]ಲಿಂದ ಕಡೆಯವರೆಗೆ ಭಾರತೀಯ ರಾಷ್ಟ್ರೀಯ ಸೈನ್ಯದಲ್ಲಿ ಸುಭಾಷ ಬಾಬುಗಳೊಂದಿಗೆ ಕೆಲಸ ಮಾಡಿದವರು. ಅವರು ಸ್ವಾರಸ್ಯವಾದ ಬಹಳ ಸಂಗತಿಗಳನ್ನು ನಮಗೆ ಹೇಳಿದರು. ಅವರಿಂದ ನಾವು ಸುಭಾಷ ಬಾಬು ಹೇಗೆ ಸತ್ತರೆಂಬುದನ್ನೂ ತಿಳಿದೆವು. ಈಗಲೂ ಅವರು ಬದುಕಿದ್ದಾರೆಂದು ತಿಳಿಯುವದು ಹುಚ್ಚುತನವೇ ಸ[illegible]

ಚೀನ ಮತ್ತು ಜಪಾನುಗಳಲ್ಲಿ ಜನರು ವಿವಿಧ ಮಾದರಿಯ ಚರಕಗಳನ್ನು ಬಳಸುತ್ತಾರೆ. ಟೋಕಿಯೋವಿನಲ್ಲಿ ನಮ್ಮನ್ನು ಭೆಟ್ಟಿಯಾದ ಮುಂಬಯಿಯ ಖಾದಿ ಮತ್ತುಗ್ರಾಮೋದ್ಯಮ ಸಂಘದ ಶ್ರೀ ಪ್ರಾಣಜೀವನ ಕಪಾಡಿಯಾವರು ಇವುಗಳ ಬಗ್ಗೆ ತಕ್ಕಮಟ್ಟಿನ ಸಂಗತಿಗಳನ್ನು ಕಲೆಹಾಕಿದ್ದಾರೆ. ಈ ಚರಕಗಳ ಕೆಲ ಮಾದರಿಗಳನ್ನು ಅವರು ಸ್ವಲ್ಪ ಕಾಲದಲ್ಲಿ ಭಾರತಕ್ಕೆ ಒಯ್ಯಲಿರುವರು. ಈ ಜಪಾನೀ ಚರಕಗಳು ನಮ್ಮ ಚರಕಗಳ ನಾಲ್ಕು ಪಟ್ಟು ನೂಲುಗಳನ್ನು ತೆಗೆಯಬಲ್ಲವು. ನಾವು ಚೀನದಲ್ಲಿಯೂ ಒಂದು ಬಗೆಯ ಚರಕವನ್ನು ಕಂಡೆವು. ಅದನ್ನು ಒಂದು "ಪೆಡಲಿ"ನಿಂದ (Pedal) ತಿರುಗಿಸುತ್ತಾರೆ ಮತ್ತು ಅದಕ್ಕೆ ೮೦ ಕದಿರುಗಳಿವೆ; ಅದನ್ನು ಕಾಲಿನಿಂದ ಒತ್ತಿ ತಿರುಗಿಸುತ್ತಾರೆ, ವಿದ್ಯುತ್ತಿನಿಂದಲ್ಲ. ಅದರ ಒಂದುಮಾದರಿಯನ್ನು ಕೊಡಿರೆಂದುನಾನು ಕೇಳಿದ್ದೇನೆ. ಶ್ರೀಯುತರಾದ ಕೃಷ್ಣದಾಸರು, ನಂದಲಾಲರು ಮತ್ತು ಇತರರು ಚೀನ ಮತ್ತು ಜಪಾನುಗಳನ್ನು ಒಮ್ಮೆ ಸಂದರ್ಶಿಸುವುದು ಉತ್ತಮವೆಂದು ನನಗನಿಸುತ್ತದೆ. ಅದು ನಮ್ಮ ಸಂಶೋಧನಕಾರ್ಯಕ್ಕೆ ಸಹಾಯಕವಾಗುವುದು.

ನಮ್ಮ ರಾಯಭಾರಿಗಳೆಲ್ಲರೂ ತಂತಮ್ಮ ಕಚೇರಿಯಲ್ಲಿ ಸಾಕಷ್ಟು ಗಾಂಧೀ ಸಾಹಿತ್ಯವನ್ನು ಇಟ್ಟುಕೊಂಡಿರಬೇಕು ಮತ್ತು "[illegible] ನನಗೆ ತೋರುತ್ತದೆ.

ಹೊನೊಲೊಲುವಿನ ಮಾರ್ಗದಲ್ಲಿ
ಅಂತಾರಾಷ್ಟ್ರೀಯ ದಿನಾಂಕ
[illegible] ೧.೫.೪೯

ಎಸ್. ಎನ್. ಅಗರವಾಲಾ
(ಹಿಂದುಸ್ತಾನಟಾಯಿಮ್ಸ್‌ದಲ್ಲಿ ಬರೆದ ಒಂದು ಕಾಗದದಿಂದ)

ಹಿಂದುಸ್ಥಾನ ಒಕ್ಕೂಟದಲ್ಲಿ [illegible] ವಾದ ಸಂಸ್ಥಾನಗಳಲ್ಲಿಯ ಶಾಲೆಗಳಲ್ಲಿ [illegible] ರಾಷ್ಟ್ರೀಯ ಕಾಂಗ್ರೆಸ್ಸಿನ ಇತಿಹಾಸವನ್ನು ಕಲಿಸಬೇಕೆಂದು ಮಧ್ಯಪ್ರಾಂತ [illegible] ಕ್ರಮಿಕ ಪುಸ್ತಕ ಸಮಿತಿಯು ಶಿಫಾರಸು ಮಾಡಿದೆ.

ಯಕ್ಷಗಾನನಾಟಕದ ವೈಶಿಷ್ಟ್ಯ

(೮ ನೆಯ ಪುಟದಿಂದ ಮುಂಬರಿದುದು)

ಕನ್ನಡಿಯಂತೆ ಪ್ರತಿಬಿಂಬಿಸಿ ತೋರುವುದಾದ್ದ ರಿಂದ, ಆ ಕನ್ನಡಿಯು ಸ್ವಚ್ಛವಾಗಿದ್ದಷ್ಟೂ ಪ್ರತಿಬಿಂಬವು ಸ್ಪಷ್ಟವಾಗಿ ಕಾಣುವುದು. ಕನ್ನಡಿಯಲ್ಲಿ ಕಾಣುವುದು ಪ್ರತಿಬಿಂಬವೇ ಹೊರತು ಮೂಲಬಿಂಬವಲ್ಲ ಎಂಬುದನ್ನು ಮರೆಯಬಾರದು. ಹಾಗೆಯೇ, ನಾಟಕವೆಂಬುದು ಒಂದು ಘಟನೆಯ ನಟನೆಯೇ ಹೊರತು, ಮೂಲ ಘಟನೆಯಲ್ಲ. ಅದೇ ರೀತಿ, ನಾಟಕದ ನಾಯಕ, ಪ್ರತಿನಾಯಕ, ಮೊದಲಾದ ಪಾತ್ರಧಾರಿಗಳು ಸಾಮಾನ್ಯ ಮನುಷ್ಯರೇ ಹೊರತು ಮೂಲ ನಾಯಕ-ಪ್ರತಿನಾಯಕರಲ್ಲ. ರಾಮ, ಧರ್ಮರಾಯ, ಭೀಷ್ಮ, ಮೊದಲಾದ ವೇಷಗಳನ್ನು ಧರಿಸುವವರು ರಾಮ, ಧರ್ಮರಾಯ ಭೀಷ್ಮರ ಸದ್ಗುಣ, ಸಚ್ಚರಿತ್ರೆಯುಳ್ಳವರಾಗಿರಬೇಕೆಂದು ಹಟ ಹಿಡಿದರೆ, ಕೌರವ, ಕೀಚಕ, ಕಂಸ, ವಾಲಿ, ರಾವಣ ಮೊದಲಾದ ವೇಷಗಳನ್ನು ಧರಿಸುವವರು ಆ ದುರ್ಜನರ ದುಃಸ್ವಭಾವವುಳ್ಳವರೇ ಆಗಿರಬೇಕೆಂದು ಹಟ ಹಿಡಿಯಬೇಕಾಗುವವುದು ! ಹೀಗೆ ಆಯಾ ಪಾತ್ರಧಾರಿಗಳು ತಮ್ಮ ನಿಜ ಜೀವನದಲ್ಲಿ ಆಯಾ ಪಾತ್ರಗಳ ಗುಣ ನಡತೆಯುಳ್ಳವರೇ ಆಗಿರಬೇಕೆಂದು ಸೂಚಿಸುವುದು ಹಾಸ್ಯಾಸ್ಪದವಾದೀತು. ರಾಜನ ಪಾತ್ರವನ್ನು ರಾಜನೇ ಧರಿಸಬೇಕು, ಭಿಕ್ಷುಕನ ಪಾತ್ರವನ್ನು ಭಿಕ್ಷುಕನೇ ಧರಿಸಬೇಕು—ಎಂಬಷ್ಟರ ಮಟ್ಟಿನ ಅಭಾಸವಾಗುವುದೇ ಸರಿ. ಪಾತ್ರಧಾರಿಯಾದವನು ತನ್ನ ಪಾತ್ರದ ಮೂಲ ಗುಣ, ನಡತೆಗಳನ್ನು ತಾನು ಪಾತ್ರಧಾರಿಯಾಗಿರುವ ವರೆಗೆ, ಅಂದರೆ ವೇಷಬಿಚ್ಚುವವರೆಗೆ ಸರಿಯಾಗಿ ನಟಿಸಿ ಇಲ್ಲನೆ ಪ್ರತಿಬಿಂಬಿಸಿ ತೋರಿಸಬಲ್ಲನೋ ಹೇಗೆ? ಎಂಬುದೇ, ನಟನ ನಟನಾಸಾಮರ್ಥ್ಯವನ್ನಳೆಯುವ ಮಾನದಂಡವಾಗಿರಬೇಕು. ಅದ್ದರಿಂದ ನಟರ ವೈಯಕ್ತಿಕ ನಡೆವಳಿ ನುಡಿವಳಿಗಳಿಂದ ಅವರ ನಾಟ್ಯ-ನಟನಾಶಕ್ತಿಯನ್ನು ತೂಗಿ ನೋಡುವುದು ಸರಿಯಲ್ಲ. [illegible] ವೆಂಬುದಾಗಿ ಅಂಗ್ಲ ನಾ[illegible]but hath a thorn- ಶೇಕ್ಸಪಿಯರನು ಸಾರಿರುವುದನ್ನು ಹೂವಿಲ್ಲ ಕೊಳ್ಳಬೇಕು. ಕಲೆ ಇಲ್ಲದ ಪೂರ್ಣಚಂದ್ರನಾದ [illegible]ಲ್ಲವಲ್ಲವೆ? "ಚಂದಿರನೊಳಗೆ ಕಪ್ಪುಂಟು ಬೆಳ್ದಿಂಗಳು। ಕಂದಿ ಕುಂದಿಹುದೊ ನಿರ್ಮಲವೊ ? ॥" ಎಂಬ ನಮ್ಮ ಭರತೇಶ ವೈಭವಕಾರ ರತ್ನಾಕರ ಸಿದ್ಧನ ಮಾತನ್ನು ನೆನೆಯಬೇಕು.

ಈ ಕುರಿತು ಯಕ್ಷಗಾನ ನಾಟಕದ "ಶಾಸ್ತ್ರ" ದಂತಿರುವ "ಸಭಾಲಕ್ಷಣ" ಗ್ರಂಥದಲ್ಲಿ-ಸೂತ್ರಧಾರನಂತಿರುವ ಭಾಗವತನು ಸಭಾಪೂಜೆಯ ಕೊನೆಗೆ ಹೇಳುವ ಮಾತು ಗಮನಾರ್ಹವಾಗಿದ್ದು, ಅದನ್ನಿಲ್ಲಿ ನಿಮ್ಮ ಲಕ್ಷ್ಯಕ್ಕೆ ತರಬಯಸುವೆನು—

"ಇಂತೀ ತಾಳಮೇಳ ಶ್ರುತಿ ಗೆಜ್ಜೆಗಳಿಂದ ತುಂಬುರ ನಾರದರು ಮೇಳೈಸಿ ನಡೆಯುತ್ತಾ। ಅಂಧಕಾಸುರನಲ್ಲಿ ಹರ ನಾಟ್ಯವಾಡಿದಂತೆ, ಕಾಳೀಯ ಶಿರದಲ್ಲಿ ಹರಿ ನಾಟ್ಯವಾಡಿದಂತೆ, ದೇವೇಂದ್ರನ ಒಡ್ಡೋಲಗದಲ್ಲಿ ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆಯರಾಡಿದಂತೆ, ನಾಟ್ಯಕ್ರಮ ವಿಧಾನಂಗಳಂ ತೋರ್ಪರೆನ್ನಳವಲ್ಲ. ನಮಸ್ತೇ ಚಕ್ಷುಷೇ, ನಮಸ್ತೇ ಜಗನ್ಮಯ, ನಮಸ್ತೇ ಶ್ರೀ ಸೂರ್ಯನಾರಾಯಣ—ಎಂತಸ್ತುತಿ ಮಾಡುವಂಥಾದ್ದು ಏತಕ್ಕೆಯ್ಯಾ ಎಂದರೆ, ತನ್ನ ವಿದ್ಯಾ ಬುದ್ಧಿ ಸಮೃದ್ಧವಾಗಬೇಕು, ದಾರಿದ್ರ್ಯ ಹತವಾಗಬೇಕು. ಪಾಪಗಳು ಲಯವಾಗಬೇಕಲ್ಲದೆ ಬೇರೆ ಮುಕ್ತಿಯಿಲ್ಲ. ಕಬ್ಬು ಡೊಂಕಾದರೆ ಸಿಹಿ ಡೊಂಕಲ್ಲ, ಪುಷ್ಪ ಡೊಂಕಾದರೆ ಪರಿಮಳ ಡೊಂಕಲ್ಲ. ನಾವು ಸಣ್ಣವರಾಗಿದ್ದರೂ ನಾವು ಮಾಡುವಂಥಾ ಭಗವಂತನ ಸ್ತುತಿ ಸಣ್ಣದಲ್ಲ. ತಾಯಿಯ ಮುಂದೆ ಮಕ್ಕಳು ಕುಣಿದಾಡಿದ ಹಾಗೆ, ಗುರುಗಳ ಮುಂದೆ ಶಿಷ್ಯರು ಪದ್ಯ ಒಪ್ಪಿಸಿದ ಹಾಗೆ, ವಿನಾಯಕದೇವರ ಮುಂದೆ ಭಕ್ತರು ಟೊಂಕಸಿಕ್ಕಿದ ಹಾಗೆ, ನಾವು ಹೇಳುವಲ್ಲಿ, ಕೇಳುವಲ್ಲಿ, ಅರೆವಾಕ್ಯ, ತೊದಲುನುಡಿ, ಇದ್ದರೂ ನಾವು ಮಾಡುವಂಥಾದ್ದು ಶ್ರೀಲಕ್ಷ್ಮೀಕಾಂತನ ಸ್ತುತಿಯಲ್ಲದೆ ಬೇರೆ ಮುಕ್ತಿಯಿಲ್ಲ. ಕಾಮನಿಗೆ ರೂಪುದೋರುವಂತೆ, ಕಮಲಕ್ಕೆ ಬೆಳಗಾಗುವಂತೆ, ಇಂತೀ ಕಾಮಧೇನುವಿಗೆ, ಕಲ್ಪವೃಕ್ಷಕ್ಕೆ ಸರಿಸಮಾನವಾಗಿರುವಂಥಾ ಸಭೆಗೂ ಸಭಾಪತಿಗಳಿಗೂ ಜಯ ಜಯಾ ದಿಗ್ವಿಜಯೋ ಭವತು."

ಯಕ್ಷಗಾನದಲ್ಲಿ ಸುಧಾರಣೆ

ಯಕ್ಷಗಾನನಾಟಕವು ನಾಟಕವನ್ನು ಸಂಪೂರ್ಣ ಹೋಲುವ ಒಂದು ನಾಟಕಪ್ರಕಾರವೇ ಆಗಿದೆಯಾದರೂ, ಅದು ರೂಢಿಯಲ್ಲಿರುವ ನಾಟಕವಲ್ಲ. ಅದನ್ನು ಸುಧಾರಿಸುವ ಅಹಮಹಮಿಕೆಯುಳ್ಳ ಕೆಲವರು, ಅದರ ಮೂಲರೂಪವನ್ನೇ ವಿರೂಪಗೊಳಿಸುತ್ತಿದ್ದಾರೆಂದು ವಿಷಾದಿಸಬೇಕಾಗಿದೆ. ಯಕ್ಷಗಾನ ನಾಟಕವು ಸಂಪೂರ್ಣ ಗಾನನಾಟಕವೇ ಆಗಿದ್ದರೂ, ಅದರ ಗಾಯನವು ನಾಟಕದ ಗಾಯನದಂತೆ ಶಾಸ್ತ್ರೀಯವಾಗಿ ಹಾಡುವ ಸಂಗೀತದ ಗಾಯನವಲ್ಲ. ಉದಾ:

ರಾಗ ಭೈರವಿ, ಅಷ್ಟತಾಳ.

ಎಲವೋ ಭೀಮನೆ ನೀಕೇಳು। ನಿನ್ನಯ ಜೀವ। ಉಳಿವ ಯತ್ನವನೆ ಪೇಳು॥ ಕಳವಿನೊಳ್ ದ್ರೋಣನ ಗೆಲಿದ ಗರ್ವವನಿನ್ನು। ನಿಲಿಸುವೆನಿಂದಿನೊಳು॥

ಈ ಭೈರವಿ ರಾಗವನ್ನು ಸಂಗೀತ ಶಾಸ್ತ್ರ ಪ್ರಕಾರ –

ಎಲ ...... ವೊ ಭೀ.....ಮನೆ ನೀ...... ಕೇಳು। ನಿ......ನ್ನಯ ಜೀವ......। ಉ...ಳಿ... ವ ಯತ್ನವನೆ ಪೇಳು।....ಎಂದು ಸಾವಧಾನವಾಗಿ ಹಾಡಿದರೆ, ರಸಾಭಾಸವಾಗಿ, ಪಾತ್ರದ ಮೂಲ ಭಾವಕ್ಕೆ ಕುಂದುಂಟಾಗುವುದು. ಅದ್ದರಿಂದ, ಈ ಗಾಯನವು ಶಾಸ್ತ್ರೀಯವಾದ ರಾಗ ತಾಳ ಬದ್ಧವಾಗಿರುವದಾದರೂ, ಆಲಾಪನೆ, ಅರೋಹಣ, ಅವರೋಹಣಗಳಲ್ಲಿ ತನ್ನದೇ ಆದ ಒಂದು ವಿಶಿಷ್ಟ ಕ್ರಮವುಳ್ಳದ್ದಾಗಿದೆ. ಈಗಲೀಗ....

ಶಂಕರಾಭರಣ—ಮಟ್ಟೆ ತಾಳ

ಎಲವೊ ಪಾರ್ಥಕೇಳು ನೀನು। ಕಳವಿನಲ್ಲಿ ಸಿಂಧು ನೃಪನ। ಗೆಲಿದ ಪರಿಯಿದಲ್ಲ ನೋಡು। ನಿಲ್ಲು ಸಮರಕೆ........

ಭಾರ್ಗವೇಂದ್ರನೇಕೆ ನಿನಗೆ। ವ್ಯಾಘ್ರನಂತೆ ಚಿತ್ರಸೇನ। ಬೋರ್ಗುಡಿಸಿ ಕುರುಪಶವ। ಪಿಡಿಯಲೆಲ್ಲಿಹೆ?" ಎಂಬುದನ್ನು ಸಂಗೀತ ಸ್ವರ ಪ್ರಸ್ತಾರ ಮಾಡಿ ಹಾಡಿದರೆ, ಸುಧಾರಣೆ ಮಾಡಿ[illegible]ದು, ತೆ[illegible]ದ ಕೆಲವು ಭಾಗವತರು ಈ ರೀತಿ ಅಭಾಸಕರವ[illegible] ಹಾಡುವಿಕೆಯಲ್ಲಿ ವುದು ಎಷ್ಟೊಂದು ಹಾಸ್ಯಾಸ್ಪದವೋ" ನೋಡು ಹಾಸ್ಯಾಸ್ಪದವಾದದ್ದು ಅರ್ಥ ಹೇಳುವ ಸುಧಾರಣೆಗಳಲ್ಲಿಯೂ, ವೇಷಕಟ್ಟುವ ಸುಧಾರಣೆಗಳಲ್ಲಿಯೂ ಕಂಡು ಬರುತ್ತಿದೆ. ಯಕ್ಷಗಾನ ನಾಟಕದಲ್ಲಿ ವೇಷಕಟ್ಟುವ ಕ್ರಮವು, ನಾಟಕದ ವೇಷಭೂಷಣ ಕ್ರಮಕ್ಕಿಂತ ತೀರ ಭಿನ್ನವಾಗಿದೆಯೆಂಬುದನ್ನು ಮರೆಯಬಾರದು. ನಾನು ಕಂಡಿರುವ ಒಂದು ಸುಧಾರಕ ಪದ್ಧತಿಯ ವೇಷಭೂಷಣವನ್ನಷ್ಟೇ ತಮ್ಮ ಲಕ್ಷ್ಯಕ್ಕಿಲ್ಲಿ ತರಲಿಚ್ಛಿಸುವೆನು. ಎರಡನೆಯ ವೇಷಧಾರಿಯಾದ (ಪ್ರತಿನಾಯಕರಂತ ನಾಯಕ) ಹಿರಣ್ಯಾಕ್ಷ, ಕಂಸ, ರಾವಣ ಮೊದಲಾದ ವೇಷಗಳನ್ನು ಧರಿಸುವಾಗ, ಕಿರೀಟವಿಲ್ಲದೆ ಬಣ್ಣ ಬಳಿದುಕೊಳ್ಳುವುದು ಈಗ ಬಳಕೆಗೆ ಬರತೊಡಗಿದೆ. ಬಣ್ಣ ಬಳಿದುಕೊಳ್ಳುವ ಕ್ರಮದಲ್ಲಿಯೂ ಈಗ ಕೆಲವೊಂದು ಹೆಚ್ಚುಕಡಿಮೆಗಳು ತಲೆದೋರಿರುತ್ತವೆ. ಈ ಹೆಚ್ಚು ಕಡಿಮೆಗಳು ನಾಟಕ ಮಂಡಳಿಯ ವೇಷಕಟ್ಟುವ ಪದ್ಧತಿಯ ಅನುಕರಣವೆಂಬಂತಿದೆ. ವಿಸ್ತಾರವಾದ ಬೈಲಲ್ಲಿ ಹಲಸು ಮಾವಿನ ತುಂಡೆಗಟ್ಟಿದ ಸಾದಾ ರೀತಿಯ—

ಪಂಚಹಸ್ತೇನ ವಿಸ್ತೀರ್ಣಂ,
ದಶಹಸ್ತೇನ ಉನ್ನತಂ।
ಅರ್ಧಚಂದ್ರ ಪ್ರಮಾಣೇನ
ತಿಷ್ಠತೇ ರಂಗಮಂಟಪಂ॥

ರಂಗ ಸ್ಥಳದಲ್ಲಿ, ನಮ್ಮ ಹಳೆಗಾಲದ ವೇಷಭೂಷಣ ಪ್ರಸಾಧನಗಳೇ ಹೆಚ್ಚು ಒಪ್ಪುವವು. ಅವುಗಳಿಂದ ರಸಿಕ ನೋಟಕರಲ್ಲಿ ತಲೆದೋರುವ ರಸಾನಂದವು ಮತ್ತಷ್ಟು ಪರಿಣಾಮಕಾರಿಯಾಗಿರುತ್ತದೆ. ಯಕ್ಷಗಾನ ನಾಟಕವನ್ನು ಸುಧಾರಿಸಿ, ನಾಟಕದಂತೆ ಮಾಡಲು ಆತುರಪಟ್ಟರೆ ಯಕ್ಷಗಾನನಾಟಕದ ಜೀವಾಳದಂತಿರುವ ಕುಣಿತವನ್ನು ಸಂಪೂರ್ಣವಾಗಿ ವರ್ಜಿಸಬೇಕಾದೀತು. ಇಂತಹ ಸುಧಾರಣೆಯಿಂದ ಭರತನಾಟ್ಯ ಶಾಸ್ತ್ರದಲ್ಲುಕ್ತವಾದ ವಿವಿಧ ಹಸ್ತಮುದ್ರಿಕೆ, ಪದಗತಿ, ಕುಣಿತ, ಮಣಿತದ ಭಂಗಿಗಳನ್ನು ಮೂಲೆಗುಂಪು ಮಾಡಿದಂತಾಗುವುದು ಅರ್ಥಾತ್ ಈ ಕಲೆಯನ್ನೇ ಕೊಂದಂತಾಗುವುದು ಅಥವಾ ಅರೆಜೀವಗೊಳಿಸಿದಂತಾಗುವುದು.

ಪಟ್ಟಣಗಳಲ್ಲಿ ಯಕ್ಷಗಾನನಾಟಕಗಳನ್ನು ಆಡಬೇಕೆಂದು ಬಯಸುವವರು ನಾಟಕಗೃಹ (ಥಿಯೇಟರ)ಗಳಲ್ಲಿಯೇ ತಮ್ಮ ಆಟ ಆಡಬೇಕಾಗುವುದು. ಅದರೂ, ಅಲ್ಲಿ ತಮ್ಮ ರಂಗಸ್ಥಳವನ್ನು ಪ್ರಾಚೀನ ಸಂಪ್ರದಾಯದಂತೆಯೇ ಕಟ್ಟಿಕೊಳ್ಳಲು ಮರೆಯಬಾರದೆಂದು ಸೂಚಿಸುತ್ತೇನೆ. ವೇಷಗಳ ರಸಭಾವೋಚಿತವಾದ ಪ್ರಕಾಶದ ವಿದ್ಯುದ್ದೀಪಗಳನ್ನು ಏರ್ಪಡಿಸಿಕೊಳ್ಳುವುದು ಕೆಲವೆಡೆ ಕಂಡುಬರುತ್ತಿದೆ. ಹೀಗೆ ಆಯಾ ಭಾವಕ್ಕುಚಿತವಾದ ವರ್ಣದೀಪಗಳನ್ನಿಟ್ಟುಕೊಳ್ಳುವ ಪದ್ಧತಿಯು ತಪ್ಪಲ್ಲವಾದರೂ, ಅದರ ಬಗೆಗೆ ತಕ್ಕ ಪರಿಜ್ಞಾನವಿರಬೇಕಾದುದು ಅತ್ಯಗತ್ಯವೆನ್ನಬಹುದು. ರಸರತ್ನಾಕರ ಕರ್ತೃವಾದ ಕವಿಸಾಳ್ವನು ತನ್ನ ಗ್ರಂಥದ ೧೨ ನೆಯ ಸೂತ್ರದಲ್ಲಿ—

ಹರಿತಂ ಶೃಂಗಾರವರ್ಣಂ, ಸಿತರುಚಿ
ಹಸಿತಂ, ರೌದ್ರಮಾರಕ್ತಯುಕ್ತಂ।
ಕರುಣಂ ಶ್ಯಾಮಪ್ರಭಾಂಗಂ, ಪ್ರಚುರ
ರುಚಿರಗೌರಂ ಸುವೀರಂ, ಭಯಂ ಭಾ-॥
ಸುರ ಧೂಮಾಕಾರಮತ್ಯದ್ಭುತಮದು
ಕನಕಂ ಕೃಷ್ಣ ಶುಭ್ರಾನ್ವಿತಂ ವಿ ।
ಸ್ತರದಿಂ ಭೀಭತ್ಸುವೆಂಬೀ ಪರಿಯನರಿಗೆ
ತನ್ಮಾರ್ಗದೊಳ್ ಸತ್ಕವೀಂದ್ರರ್॥

(ಶೃಂಗಾರಕ್ಕೆ ಹಸಿರು ಬಣ್ಣ, ಹಾಸ್ಯಕ್ಕೆ ಬಿಳಿಯ ಬಣ್ಣ, ರೌದ್ರಕ್ಕೆ ರಕ್ತವರ್ಣ. ಕರುಣಕ್ಕೆ ಅಚ್ಚ ನೀಲಿ, ವೀರಕ್ಕೆ ಬಿಳಿಗೆಂಪು, ಭಯಕ್ಕೆ ಹೊಗೆಯ ಬಣ್ಣ, ಅದ್ಭುತಕ್ಕೆ ಬಂಗಾರದ (ಹಳದಿ) ಬಣ್ಣ, ಭೀಭತ್ಸಕ್ಕೆ ಅಚ್ಚ ಕಪ್ಪು)

ಎಂಬುದಾಗಿ ಸೂಚಿಸಿರುವುದನ್ನು ಗಮನಿಸಬೇಕು.

ಯಕ್ಷಗಾನ ನಾಟಕದಲ್ಲಿ ರಸಪೋಷಕವಾದ ಮತ್ತು ಮೂಲ ಕಲೆಯ ವಿಕಾಸ, ಪ್ರಕಾಶಕ್ಕೆ ಹಾನಿತಟ್ಟದ ಸುಧಾರಣೆಗಳು ಹೇಗೆ ಅವಶ್ಯಕವೋ ಹಾಗೇ, ತಾಳಮದ್ದಳೆ ಎಂಬ ಬೈಟಕ್ಕುಗಳಲ್ಲಿಯೂ ಯೋಗ್ಯವಾದ ಸುಧಾರಣೆಗಳಾಗುವುದು ಅಗತ್ಯವೇ ಸರಿ. ಕೇವಲ ಪಾಂಡಿತ್ಯ ಪ್ರದರ್ಶನದ ದೃಷ್ಟಿಯಿಂದಲೇ ಅರ್ಥಗಾರರು ಉದ್ದುದ್ದ ಭಾಷಣದಂತಹ "ಸಂಭಾಷಣೆ" ಮಾಡುವುದೂ ಇದಿರು ವೇಷಧಾರಿಯ ಬಾಯಿ ಕಟ್ಟಿಸುವೆನೆಂಬ ಛಲದಿಂದ ಅಪ್ರಸ್ತುತವಾದ ಹಾಗೂ ಪದ್ಯದಲ್ಲಿಲ್ಲದ ಅರ್ಥ ವಿವರಣೆಗಳನ್ನು ಮಾಡುವುದೂ ಖಂಡನೀಯವಾಗಿದೆ. ಇಂತಹ ವರ್ತನೆಯಿಂದ ತಾಳಮದ್ದಲೆಯ ಮೂಲೋದ್ದೇಶಕ್ಕೇ ಧಕ್ಕೆಯುಂಟಾಗಿ, ಇದೊಂದು ಒಡ್ಡಿದ ಸ್ಪರ್ಧಾರಂಗವಾಗಿ ಪರಿಣಮಿಸುವುದು; ರಸದ ಬದಲು ವೈರಸ್ಯವನ್ನು ಪಡೆಯ ಹೋಗಿ[illegible]ವನ್ನು ಗಳಿಸಿದಂತಾಗುವುದು. ಅರ್ಥಗಾರರು ತಮ್ಮ ಪಾಂಡಿತ್ಯವನ್ನೂ ಯೋಗ್ಯತೆಯನ್ನೂ ತೋರಿಸುವುದು ಇಂತಹ ನೀರಸವಾದ ಹಾಗೂ ಈರ್ಷ್ಯಾಭರಿತವಾದ ವರ್ತನೆಗಳಿಂದಲ್ಲವೆಂಬುದನ್ನು ಸರ್ವಥಾ ಮರೆಯಬಾರದು. ಪಾಂಡಿತ್ಯ ಪ್ರದರ್ಶನಕ್ಕೆ ಮನಸೋತು, ರಾಮಾಯಣ ಕಾಲದ ಅತಿಕಾಯ, ವಿಭೀಷಣ, ವಾಲಿ ಮೊದಲಾದ ವೇಷಧಾರಿಗಳುಮತ್ತು ಅರ್ಥಧಾರಿಗಳು ಕೃಷ್ಣಾವತಾರದ ಕಾಲದ ಕೃಷ್ಣಗೀತಾಶ್ಲೋಕಗಳನ್ನು ಅಧಾರವಾಗಿ ಎತ್ತಿ ಹೇಳುವವರು ಹಲವರಿದ್ದಾರೆ. ಅಂತಹರ ಪಾಂಡಿತ್ಯವು "ದ್ರೌಪದಿಯನ್ನು ಕದ್ದೊಯ್ದು ಕಿಷ್ಕಿಂಧೆಯಲ್ಲಿಟ್ಟುಕೊಳ್ಳುವೆನು" ಎಂದು ಬಡಬಡಿಸುವ ಭಾಸಕೃತ ವಸಂತಸೇನಾ ನಾಟಕದ ಶಕಾರನ ಪಾಂಡಿತ್ಯದಂತೆ ಹಾಸ್ಯಾಸ್ಪದವಾದೀತು.

ಸುಧಾರಣೆಯ ರೀತಿ ನೀತಿ

ಅದ್ದರಿಂದ, ಈ ಉತ್ತಮ ಕಲೆಯ ಏಳಿಗೆಯನ್ನು ಬಯಸುವವರು ಹಳೆಯದೆಲ್ಲ ತ್ಯಾಜ್ಯ, ಹೊಸದೆಲ್ಲ ಸ್ವೀಕಾರಯೋಗ್ಯ ಎಂಬ ಏಕಪಕ್ಷೀಯವಾದ ವಿಕೃತದೃಷ್ಟಿ ಇಟ್ಟುಕೊಳ್ಳದೆ, ವೈಯಕ್ತಿಕವಾದ ದಂಭಾಹಂಕಾರಕ್ಕೆ ಬಲಿಬೀಳದೆ, ನಿರ್ಮಲಚಿತ್ತದಿಂದಲೂ, ಸರ್ವಪ್ರೇಮಭಾವದಿಂದಲೂ ವಿಚಾರ ವಿಮರ್ಶೆ ಮಾಡಿ, ತಕ್ಕ ಸುಧಾರಣೆಗಳನ್ನು ಅಳವಡಿಸಿಕೊಳ್ಳಬೇಕೆಂದು ಬಿನ್ನವಿಸಿಕೊಳ್ಳುವೆನು.

ದಶಾವತಾರ ಲೀಲಾವಿನೋದ ಕಥಾಸಾಗರವಾದ ಭಾರತ ರಾಮಾಯಣಗಳು ಚಿತ್ರಿಸುತ್ತ ಬಂದಿರುವ ಉದಾತ್ತ ತತ್ವಗಳು ಎಂದೆಂದಿಗೂ ಹೊಸದಾಗಿಯೇ ಇರುತ್ತವೆ. ಸತ್ಯಂ ವದ, ಧರ್ಮಂ ಚರ–ಸತ್ಯವನ್ನು ಹೇಳು, ನೀತಿಯಿಂದ ನಡೆ–ಎಂಬೀ ಮಾತು ಬಹುಕಾಲದ ಹಿಂದೆ ಹೇಳಲ್ಪಟ್ಟಿತೆಂಬ ಕಾರಣದಿಂದ, ಅದು ಹೊಸತಲ್ಲವೆಂದು ಯಾರೂ ಅದನ್ನು ತ್ಯಜಿಸಲಾರರಲ್ಲವೆ? ಈ ಸತ್ಯಧರ್ಮವು ಜನಸಾಮಾನ್ಯರ ನಾಳನಾಳಗಳಲ್ಲಿ ರಕ್ತಗತವಾಗಿ ಹರಿದಾಡುತ್ತಿದೆ. ರಾಮ, ಕೃಷ್ಣ, ಸೀತೆ, ದ್ರೌಪದಿ, ಕರ್ಣ, ಭೀಷ್ಮ, ದ್ರೋಣ ಮೊದಲಾದ ದಿವ್ಯ ಮಾನವ ವ್ಯಕ್ತಿಗಳ ಹೆಸರು ಕಿವಿಗೆ ಕೇಳುತ್ತಲೇ, ಕಣ್ಮುಂದೆ ಬರುತ್ತಲೇ ಎಂತಹ, ಪವಿತ್ರ ಗೌರವಭಾವವು ಹೃದಯದಲ್ಲಿ ಹುಟ್ಟುವದೋ ಅಂತಹ ಭಾವವು ಅಧುನಿಕ ಮಹಾಪುರುಷರ ಹೆಸರು ವೇಷಗಳ ಶ್ರವಣದರ್ಶನಗಳಿಂದ ಹುಟ್ಟಲಾರದೆಂದು ನಂಬುವವರಲ್ಲಿ ನಾನೊಬ್ಬನಾಗಿರುವೆನು. ಅಧುನಿಕ ರಾಜಕೀಯ-ಸಾಮಾಜಿಕ ಘಟನೆಗಳ ಪ್ರದರ್ಶನಕ್ಕೆ ನಮ್ಮ ಯಕ್ಷಗಾನ ನಾಟಕ ರಂಗಸ್ಥಳಕಿಂತ ನಾಟಕರಂಗಭೂಮಿಯೇ ಹೆಚ್ಚು ವಾಸ್ತವಿಕವಾದೀತೆಂದು ನನ್ನ ನಮ್ರ ಭಾವನೆ.

ಕಲಾಭ್ಯಾಸ ಕೇಂದ್ರ

ಉತ್ತರ ಕರ್ನಾಟಕ ಜಿಲ್ಲೆಗಳೆನಿಸಿದ ಬೆಳಗಾಂವಿ, ಧಾರವಾಡ, ವಿಜಾಪುರ ಭಾಗಗಳಲ್ಲಿಯೂ, ತೆಲುಗರ ಸೀಮೆಗೆ ಹೊಂದಿಕೊಂಡಿರುವ ಬಳ್ಳಾರಿ ಜಿಲ್ಲೆಯಲ್ಲಿಯೂ, ಮೈಸೂರು ಸಂಸ್ಥಾನದಲ್ಲಿಯೂ ದಶಾವತಾರದ ನಾಟಕ ಮೇಳಗಳು ಇರುತ್ತವಾದರೂ, ಅವುಗಳು ನಮ್ಮೀ ಯಕ್ಷಗಾನ ನಾಟಕ ಮೇಳಗಳಷ್ಟು ಪರಿಷ್ಕೃತವಾಗಿರುವುದಿಲ್ಲವೆಂಬುದನ್ನು ನಾನು ಪ್ರತ್ಯಕ್ಷವಾಗಿ ಮನಗಂಡಿದ್ದೇನೆ. ಅವುಗಳ ವೇಷ, ಅರ್ಥ, ಕುಣಿತಗಳು ನಮ್ಮ ಮೇಳಗಳಲ್ಲಿರುವಂತಿರುವುದಿಲ್ಲ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಆಡುಮಾತುಗಳೂ, ನುಡಿಗಟ್ಟುಗಳೂ ಬಳಕೆಯಲ್ಲಿರುತ್ತವಲ್ಲವೆ? ಇದನ್ನು ಲಕ್ಷಿಸಿಯೇ ನೃಪತುಂಗನು—

"......ಕನ್ನಡಂಗಳೊಳೆಂದುಂ,- ವಾಸುಗಿಯುಮರಿಯಲಾರದೆ ಬೇಸರುಗುಂ ದೇಶಿ ಬೇರೆವೇರಪ್ಪುದರಿಂ ! "

ಎಂದು ವಕ್ರೋಕ್ತಿಯ ಸತ್ಯವಾಡಿರುವನು. ಬಿಜಾಪುರದತ್ತಣವನೊಬ್ಬನು ಮಂಗಳೂರು ಕಡೆಯವನೊಬ್ಬನನ್ನು ಕಂಡು—

"ಎಲಾ ಇವರ ! ಈಮಂದಿ ಏಸ್ ಜಳಜಳಾ ಐತಿ; ರಗಡ್ ಶ್ಯಾಣ್ಯಾರದಾರಪ್ಪೋ "

ಎಂದು ಹೇಳಿದರೆ, ಮಂಗಳೂರ ಕಡೆಯ ಹಳ್ಳಿಗನು—

"ಇದಕೇನ್ ತಲೆ ಕೆಟ್ಟೇತಾ ಕಾಂತೆ ! ಜಳಜಳಾ ಅಂಬ್ರ, ರಗಡ್ ಅಂಬ್ರ, ಶಾಣ್ಯಾ ಅಂಬ್ರ, ಗೀಣ್ಯಾ ಅಂಬ್ರ. ಇವರ ತಳ್ಳಿ ಬ್ಯಾಡ ಮಾರಾಯ್ರೆ ! "

ಎಂದು ಹೇಳುವುದೇ ಸರಿ. ದೇಸಿಯ ಈ ಅನಾಹುತಕರಾದ ಅನಂತತೆಯನ್ನು ಬಗೆದಂದೇ ಮಹಾಕೃತಿಗಳನ್ನೆಲ್ಲ 'ಮಾರ್ಗ' ದಲ್ಲಿಯೇ ರಚಿಸಬೇಕೆಂದು ಪುರಾತನ ಆಲಂಕಾರಿಕರು ನಿರ್ದೇಶಿ[illegible]ರು. ಕಾರಂತರ ಪ್ರಹಸನ[illegible]ಗಳ ಹಾ[illegible]ಸ್ಯದ ಸವಿಯನ್ನು ಉತ್ತರ ಕರ್ನಾಟಕದವರು (ಅ[illegible]) ಎಷ್ಟು ಕಷ್ಟವಾದೀತೋ ಅಷ್ಟೇ ಕಷ್ಟ ಮಂಗಳೂರು ಕಾರವಾರ ಜಿಲ್ಲೆಯವರಿಗೆ ಜಾಗಿರದಾರರ ಕೃತಿಗಳ ರಸವನ್ನು ಅರಿಯಲು ಆದೀತು. ಈ ಮಾತು, ಈ ವಿವಿಧ ಭಾಗಗಳ "ದೇಸೀ" ನಾಟಕಗಳಾದ ಯಕ್ಷಗಾನ ನಾಟಕಗಳಿಗೂ ಅನ್ವಯಿಸುವುದೆನ್ನಬಹುದು. ಇಂತಹ ಪರಿಸ್ಥಿತಿಯನ್ನು ಕ್ರಮಶಃ ಆಗಿಯಾದರೂ ಹೋಗಲಾಡಿಸುವಂತೆ ಮಧ್ಯಸ್ಥ ಮಾರ್ಗವೊಂದನ್ನು ಕಂಡುಹಿಡಿಯಬೇಕು. ಅದರ ಸಲುವಾಗಿಯೇ ಅಖಿಲ ಕರ್ನಾಟಕ ಯಕ್ಷಗಾನ ನಾಟಕ ಕಲಾಕೇಂದ್ರವೊಂದನ್ನು ಅಸ್ತಿತ್ವಕ್ಕೆ ತರಬೇಕು. ಒಂದುವೇಳೆ ಅದು ದೂರದ ಸಿದ್ಧಿಯಾಗಿ ಕಂಡರೂ, ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಮಟ್ಟಿಗಾದರೂ ನೀವೊಂದು ಇಂತಹ ಕಲಾಕೇಂದ್ರವನ್ನು ಶೀಘ್ರದಲ್ಲಿಯೇ ಸ್ಥಾಪಿಸಬೇಕು. ಕೇರಳೀಯರು ಈ ವಿಷಯದಲ್ಲಿ ತಮ್ಮ ಮಹಾಕವಿ ವಾಲತ್ತೋಳ ನಾರಾಯಣ ಮೇನನರ ನೇತೃತ್ವದಲ್ಲಿ ಈಗಾಗಲೇ ಸಾಕಷ್ಟು ಮುಂದೆ ಹೋಗಿರುವರು. ಬಂಗಾಲದಲ್ಲಿ ಕವಿಸಮ್ರಾಟ್ ಟಾಗೋರರು ಪ್ರಾಚೀನ ನೃತ್ಯ, ಗಾನ, ಕಲಾ ಸಂಪ್ರದಾಯಗಳ ಪುನರುಜ್ಜೀವನ ಕಾರ್ಯವನ್ನು ಸಂಘಟಿಸಿ ಈಗಾಗಲೇ ೩೦ ವರ್ಷಗಳು ದಾಟಿವೆ. ಪೂರ್ಣ ಸ್ವರಾಜ್ಯ ಮತ್ತು ಪ್ರಾಂತೀಕರಣದ ಈಗಿನ ವೇಳೆಯಲ್ಲಿ, ಇಂತಹ ಕಲಾಕೇಂದ್ರವನ್ನು ಸಂಘಟಿಸಲು ಸರಕಾರದಿಂದ ತಕ್ಕ ಧನ ಸಹಾಯ ದೊರೆತೇ ದೊರೆಯುವುದು ಎಂದು ಧಾರಾಳವಾಗಿ ಹೇಳಬಹುದು.

❋ ಮಲಯದ ಭಾರತೀಯ ಮಜೂರ ಸಂಘದ ಮುಖಂಡರಾದ ಗಣಪತಿ ಎಂಬವರನ್ನು ಗಲ್ಲಿಗೇರಿಸಿದ್ದರಿಂದ ಭಾರತದೊಡನೆ ಬ್ರಿಟನ್ನಿಗಿರುವ ಸ್ನೇಹ ಕಡಿಮೆಯಾದೀತೆಂದು "ಇಕನಾಮಿಸ್ಟ್" ಎಂಬ ಬ್ರಿಟಿಶ ಪತ್ರಿಕೆ ಎಚ್ಚರಿಸಿದೆ.

ಸಮಸ್ತ ಭಾರತ

ಮುಂಬಯಿ

ಈ ವರ್ಷ ಕೊಡಿಸಬೇಕೆಂದಿದ್ದ ೪ ಲಕ್ಷ ಟನ್ ಅಹಾರ ಪದಾರ್ಥಗಳನ್ನು ಕೊಡಿಸಲು ಮುಂಬಯಿ ಸರಕಾರದ ನಿರ್ಧಾರ ಮಾಡಿದ್ದರಲ್ಲಿ ಈಗಾಗಲೆ ೩೫೫೦೦೦ ಟನ್ ಅಹಾರ ಪದಾರ್ಥಗಳು ಕೂಡಿವೆ.

ಕಾನಡಾದಲ್ಲಿ ಒಕ್ಕಲತನ ಶಾಖೆಯ ವೆಚ್ಚದ ಪ್ರಮಾಣವು ಪ್ರತಿಯೊಬ್ಬರಿಗೆ ೨೦—೧೪—೩ ರೂ. ಮತ್ತು ಅಮೇರಿಕೆಯಲ್ಲಿ ೭೭—೯—೧೧ ಇದ್ದರೆ ಹಿಂದುಸ್ತಾನದಲ್ಲಿ ಅದು ಕೇವಲ ೧೧ ಆಣೆ ಇದೆ.

ಅಹಾರ ಧಾನ್ಯ ಸೀದಾ ಪ್ರಮಾಣವನ್ನು ಕಾಯ್ದುಕೊಳ್ಳಲು ಪ್ರಾಂತೀಯ ಸರಕಾರಗಳಿಗೆ ಕೇಂದ್ರ ಸರಕಾರವು ಮಾಡುತಿದ್ದ ಸಹಾಯದಲ್ಲಿ ಇನ್ನು ಮುಂದೆ ಕಡಿತವನ್ನು ಹಾಕಲಾಗುವದೆಂಬ ಸೂಚನೆಯನ್ನು ಎಲ್ಲಾ ಪ್ರಾಂತೀಯ ಸರಕಾರಗಳಿಗೆ ಮಾಡಲಾಗಿದೆಯೆಂದು ಕೇಂದ್ರ ಅಹಾರ ಮಂತ್ರಿ ಜಯರಾಮದಾಸ ದೌಲತರಾಮರು ಅಹಮದಾಬಾದದ ಒಂದು ಸಂದರ್ಶನದಲ್ಲಿ ಹೇಳಿದರು.

ಕಳೆದ ಫೆಬ್ರುಅರಿಯಲ್ಲಿ ಮೊದಲ ಸಲ ಭಾರತದಲ್ಲಿ ವಿಮಾನಯಾನದಲ್ಲಿ ರಾತ್ರಿ ಪಾಳಿಯನ್ನು ಪ್ರಾರಂಭ ಮಾಡಲಾಗಿತ್ತು, ಆದರೀಗ ಮಳೆಗಾಲದ ಮೂಲಕ ಅದನ್ನು ನಿಲ್ಲಿಸಲಾಗಿದೆಯೆಂದು ಸಂಪರ್ಕಶಾಖೆಯ ಮಂತ್ರಿಗಳು ಪ್ರಕಟಿಸುತ್ತಾರೆ. ಭಾರತದಲ್ಲಿ ಎಲ್ಲ ವಿಮಾನ ನಿಲ್ದಾಣಗಳಲ್ಲಿ ಯಾಂತ್ರಿಕ ಸಹಾಯವನ್ನಿಡುವ ವರೆಗೆ ರಾತ್ರಿ ವಿಮಾನ ಸಾರಿಗೆ ಸರಿಯಲ್ಲೆಂದು ಸರಕಾರದ ಅಭಿಪ್ರಾಯ.

ಅಗಾಖಾನರ ಮಗ ಪ್ರಿನ್ಸ ಅಲೀಖಾನರು ಸುಪ್ರಸಿದ್ಧ ಸಿನೆಮಾತಾರೆಯಾದ ರೀಟಾ ಹೇವರ್ಥಳನ್ನು ಮದುವೆಯಾಗಿದ್ದು ಪ್ರಣಯವಿಹಾರಾರ್ಥವಾಗಿ ಫ್ರಾನ್ಸ, ಇಟಲಿ, ಹಿಂದುಸ್ತಾನ ಮೊದಲಾದ ಕಡೆ ಸಂಚರಿಸುವರು. ಅವರು ಹಿಂದುಸ್ತಾನಕ್ಕೆ ಬಂದ ಬಳಿಕ ಇಸ್ಲೀಮಿ ಮುಸ್ಲಿಂ ಪಂಥದ ಪದ್ಧತಿಯಂತೆ ಅವರ ವಿವಾಹ ಜರಗುವದು. ಕ್ಯಾಥೋಲಿಕ ಧರ್ಮಗುರುಗಳ ಅಪ್ಪಣೆಯನ್ನು ಪಡೆಯದೆ ಈ ವಿವಾಹವಾದ್ದರಿಂದ ಇದು ನ್ಯಾಯವಿರುದ್ಧವಾಗಿದ್ದು ಮುಂದೆ ಹುಟ್ಟುವ ಮಕ್ಕಳು ಪಾಪದ ಮಕ್ಕಳಾಗುವರೆಂದು ರೋಮದಲ್ಲಿ ಧರ್ಮಾಧಿಕಾರಿ ವೃತ್ತದಲ್ಲಿ ಹೇಳಲಾಗಿದೆ.

ಕಳೆದ ವಾರ ಅಹಮದಾಬಾದದಲ್ಲಿ ಹಿಂದುಸ್ತಾನ ಸೆಂಟ್ರಲ ಬ್ಯಾಂಕಿನ ೫ ಲಕ್ಷ ರೂಪಾಯಿಗಳನ್ನು ಸುಲಿಯಲೆತ್ನಿಸಿದ ದರೋಡೆಗಾರರ ಗುಂಪಿನಲ್ಲಿ ಮೂರನೆಯವನ ಬಂಧನದ ಬಗ್ಗೆ ಸುದ್ದಿ ಸಂಗತಿಗಳನ್ನು ತಿಳಿಸುವವರಿಗೆ ೫ ಸಾವಿರ ರೂಪಾಯಿ ಪಾರಿತೋಷಕ ಕೊಡಲಾಗುವದೆಂದು ಜಿಲ್ಹಾಧಿಕಾರಿಗಳು ಪ್ರಕಟಿಸಿದ್ದಾರೆ.

ಮುಂಬಯಿಯಲ್ಲಿ ೧೬ ಲಕ್ಷ ಜನರಿಗಾಗಿ ೪ ಲಕ್ಷ ಮನೆಗಳು ಬೇಕಾಗಿದ್ದು ಅವನ್ನು ಕಟ್ಟಲು ೨೦೦ ಕೋಟಿ ರೂಪಾಯಿಗಳು ಬೇಕಾಗುವವು ಎಂದು ಹೌಸಿಂಗ ಕಮೀಶನರರು ಅಭಿಪ್ರಾಯಪಡುತ್ತಾರೆ. ಮುಂಬಯಿಯ ಜನಸಂಖ್ಯೆ ೩೦ ಲಕ್ಷದಷ್ಟಿದ್ದು ಈಗ ಕೇವಲ ೯ ಲಕ್ಷ ಜನರಿಗೆ ಸಾಲುವಷ್ಟು ಮನೆಗಳಿವೆ ಎಂದೂ ಅವರು ಹೇಳಿದರು.

"ದೊಡ್ಡಪ್ರಮಾಣದಲ್ಲಿ ತಿಪ್ಪೆಗೊಬ್ಬರದ ತಯಾರಿಕೆ ಹಾಗು ಬಳಕೆಗಳು ಹಿದುಸ್ತಾನದ ಒಕ್ಕಲತನ ಇತಿಹಾಸದಲ್ಲಿಯೇ ಹೊಸ ಅಧ್ಯಾಯವನ್ನು ಪ್ರಾರಂಭಿಸುವವು; ಅಲ್ಲದೆ ಮುಂದಿನೆರಡು ವರ್ಷಗಳಲ್ಲಿ ಹಿಂದುಸ್ತಾನದ ೪೦,೦೦,೦೦೦ ಟನ್ನ ಅಹಾರ ಧಾನ್ಯದ ಕೊರತೆಯನ್ನು ಖಂಡಿತ ನೀಗಿಸಬಲ್ಲವು." ಎಂದು ಮುಂಬಯಿ ಸರಕಾರದ ಒಕ್ಕಲತನ ಹಾಗು ಅರಣ್ಯಖಾತೆಗಳ ಮಂತ್ರಿ ಶ್ರೀ. ಪಾಟೀಲ ಮಲ್ಲನಗೌಡರು ಮೇ ೨೫ ರಂದು ಅಹಮ್ಮದನಗರದಲ್ಲಿ ಎಂಟನೆಯ ಜಿಲ್ಲಾ ಅಹಾರೋತ್ಪಾದನ ಸಮ್ಮೇಲನವನ್ನು ಉದ್ದೇಶಿಸಿ ಭಾಷಣ ಮಾಡಿದರು.

೧೯೪೯ ರ ಹಿಂದು ದ್ವಿಪತ್ನಿ ವಿವಾಹ ಪ್ರತಿಬಂಧ (ತಿದ್ದುಪಡಿ) ಕಾಯದೆಗೆ ಗವ್ಹರ್ನರ ಜನರಲ್ಲರ ಒಪ್ಪಿಗೆ ದೊರೆತಿದ್ದು ಅದನ್ನು ಮುಂಬಯಿ ಸರಕಾರದ ೧೯೪೯ ಮೇ ೨೬ ನೆಯ ದಿನಾಂಕದ ಗೆಝೆಟ್ಟಿನಲ್ಲಿ ಪ್ರಸಿದ್ಧಿಸಲಾಗಿದೆ.

"ತಗಾಯಿ ಸಾಲದ ಅರ್ಜಿಗಳನ್ನು ವಿಚಾರಿಸುವ ಕ್ರಮ ತೊಡಕಿನದಾಗಿದೆ ಎಂಬ ತಕರಾರಿದೆ. ಅದಕ್ಕಾಗಿ ಜಿಲ್ಹಾಧಿಕಾರಿಗಳು ಜಿಲ್ಹೆಯ ಸಂಚಾರ ಕೈಕೊಂಡಾಗಲೆ ಆಯಾಯ ಸ್ಥಳದಲ್ಲಿ ತಗಾಯಿ ಅರ್ಜಿಗಳನ್ನು ಸ್ವೀಕರಿಸಿ ಅಲ್ಲಿಯೇ ಅವುಗಳನ್ನು ವಿಚಾರಿಸಿ ಬಗೆಹರಿಸಬೇಕೆಂದು ಅವರಿಗೆ 'ಅಜ್ಞಾಪಿಸುವವನಿದ್ದೇನೆ'ಂದು ಮಾನ್ಯ ಪಾಟೀಲ ಮಲ್ಲನಗೌಡರು ಅಹಮ್ಮದನಗರದಲ್ಲಿ ಭಾಷಣ ಮಾಡುತ್ತ ಹೇಳಿದರು.

ಮುಂಬಯಿ ಸರಕಾರವು ಎಪ್ರಿಲ ೧-೧೯೪೯ ರಿಂದ ಈಚೆಗೆ ಮೊದಲನೆ ಸಾರೆ ಅಹಾರಧಾನ್ಯ ಬೆಳೆಯುವದಕ್ಕಾಗಿ ಸಾಗುಮಾಡಲ್ಪಟ್ಟ ಅಥವಾ ಸಾಗುಮಾಡಲ್ಪಡುವ ಬೀಳುಭೂಮಿಗಳ ತೆರಿಗೆಯನ್ನು ೩ ವರ್ಷ ಸೂಟ ಬಿಡಲು ನಿರ್ಧರಿಸಿದೆ. ಬೀಳು ಭೂಮಿಗಳೆಂದರೆ ಒಡೆತನದಲ್ಲಿದ್ದಂಥ ಅಥವಾ ಒಡೆತನದಲ್ಲಿಲ್ಲದಂಥ ಸಾಗಾಗದೆ ಉಳಿದ ಪಡಭೂಮಿಗಳು. ಅಹಾರೋತ್ಪಾದನೆಯನ್ನು ಹೆಚ್ಚಿಸುವ ಕ್ರಮಗಳಲ್ಲಿ ಇದೊಂದು.

ಹಿಂದುಸ್ತಾನ ಘಟನಾ ಸಮಿತಿಯು (ಕಾಯದೆಮಂಡಳ) ಆರ್ಥಿಕವರ್ಷ ೧೯೪೯-೫೦ ರ ರಸ್ತೆ ಸ್ಥಾಯಿ ಸಮಿತಿಗೆ ಸದಸ್ಯರೆಂದು ಚುನಾಯಿಸಿದ ಶ್ರೀ ಎಸ್. ನಿಜಲಿಂಗಪ್ಪ ಮತ್ತು ಶ್ರೀ ಬಿ. ಎನ್. ಮುನವಳ್ಳಿಯವರು ಇನ್ನು ಮುಂದೆಯೂ ಮುಂಬಯಿ ಸಾರಿಗೆ ಮಂಡಳದ ಸದಸ್ಯರಾಗಿ ಉಳಿಯಬೇಕೆಂದು ಮುಂಬಯಿ ಸರಕಾರವು ನಿರ್ದೇಶಿಸಿದೆ.

ಮುಂಬಯಿ ಗಾಮದೇವಿಯಲ್ಲಿಯ ಶ್ರೀ ಶಾರದಾ ವಿಜಯ ಕನ್ನಡ-ಇಂಗ್ಲಿಶ ಧರ್ಮಾರ್ಥ ರಾತ್ರಿಶಾಲೆಯು ಇದೇ ಜೂನ ೬ ಕ್ಕೆ ಮತ್ತೆ ಪ್ರಾರಂಭವಾಗುವದು. ಹಳೇ ವಿದ್ಯಾರ್ಥಿಗಳೂ ಹೊಸ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಎಂದಿನಂತೆ ತಕ್ಕ ಸಮಯಕ್ಕೆ ಹಾಜರಾಗಬೇಕಾಗಿ ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ.

ಮುಂಬಯಿ ಫಾಲಕಂಡ ಬೀದಿಯಲ್ಲಿ ಅಬ್ದುಲ್ ರಝಾಕ ಎಂಬವನು ಗೋದಿ ಹಿಟ್ಟಿನಿಂದ ಕೇಕು ಮಾಡಿ ಕಾಯಿದೆಯನ್ನು ಮುರಿದನೆಂದು ಮ್ಯಾಜಿಸ್ಟ್ರೇಟರು ಅವರಿಗೆ ೫೦೦೦ ರೂಪಾಯಿ ದಂಡ ವಿಧಿಸಿದರು.

ಮುಂಬಯಿ ಎಕ್ಸಚೆಂಜ ಬ್ಯಾಂಕಿನ ಮ್ಯಾನೇಜಿಂಗ ಡಾಯರೆಕ್ಟರ ಜಿ. ಎಂ. ಐಖಾನೆಯವರು ವಿಶ್ವಾಸಘಾತದ ಆರೋಪದ ಮೇಲೆ ಸೆರೆ ಹಿಡಿಯಲ್ಪಟ್ಟು ಜಾಮೀನ ಮೇಲೆ ಬಿಡುಗಡೆ ಮಾಡಲ್ಪಟ್ಟಿರುವರು.

ಸಂಯುಕ್ತಪ್ರಾಂತ

ಕಾನಪುರದಲ್ಲಿ ಸರಕಾರಿ ಗುದಾಮ ಕಟ್ಟುವದಕ್ಕಾಗಿ ನೆಲವನ್ನು ಅಗಿಯುತ್ತಿದ್ದಾಗ ನಾಣ್ಯಗಳಿಂದ ತುಂಬಿದ ಗಡಿಗೆಯೊಂದು ದೊರೆತಿದೆ. ನಾಲ್ಕನೆಯ ವಿಲಿಯಂ ಮತ್ತು ವಿಕ್ಟೋರಿಯಾ ಮಹಾರಾಣಿ ಮತ್ತು ಮೊಗಲ ಚಕ್ರವರ್ತಿ ಶಹಾ ಅಲಂನ ಕಾಲದ ನಾಣ್ಯಗಳು ಇವಾಗಿದ್ದು ಶಿಪಾಯಿ ದಂಗೆಯ ಕಾಲದಲ್ಲಿ ಇವು ಹೂಳಿಡಲ್ಪಟ್ಟಿರಬಹುದೆಂದು ತಿಳಿಯುತ್ತದೆ.

ರಾಯಬರೇಲಿ ಜಿಲ್ಹೆಯ ಜವಾನ ಕಾಟ ಎಂಬ ಕಮ್ಯುನಿಸ್ಟ ಕೇಂದ್ರವಾದ ಹಳ್ಳಿಯಲ್ಲಿ ಸರಕಾರಿ ಅಧಿಕಾರಿಗಳು ಧಾನ್ಯ ವಸೂಲಿಗೆ ಹೋದಾಗ ಕಮ್ಯುನಿಸ್ಟ ಪ್ರಚೋದಿತರಾದ ಆ ಹಳ್ಳಿಗರು ಅಧಿಕಾರಿಗಳ ಮೇಲೆ ಸಶಸ್ತ್ರ ದಾಳಿ ಮಾಡಿದ್ದರಿಂದ ಪೋಲೀಸರು ಗೋಳೀಬಾರು ಮಾಡಬೇಕಾಯಿತು. ತತ್ಪರಿಣಾಮವಾಗಿ ಮೂರು ಜನರು ಸತ್ತರಲ್ಲದೆ ಆರು ಜನರಿಗೆ ಗಾಯಗಳಾಗಿವೆ.

ಮದ್ರಾಸ

ಕಾಂಗ್ರೆಸಪಕ್ಷದ ಸದಸ್ಯರಾಗಿರುವ ಜಿ. ಎಲ್. ಪಿ ರಾವ ವಿಕ್ಟೋರಿಯಾ ಇವರು ಮದ್ರಾಸ ಸರಕಾರದ ಮಂತ್ರಿಗಳೆಂದು ನೇಮಕ ಹೊಂದಿರುವರು. ಮದ್ರಾಸ ಶಾಸನ ಸಭೆಯಲ್ಲಿರುವ ಮೂವರು ಕ್ರಿಶ್ಚನ್ ಸದಸ್ಯರಲ್ಲಿ ಇವರೊಬ್ಬರಿರುವರು.

ಮದ್ರಾಸ ನಗರದ ಶಾಲೆ ಕಾಲೇಜಗಳಲ್ಲಿ ಕನ್ನಡ ಶಿಕ್ಷಣವನ್ನು ಉತ್ತಮಗೊಳಿಸಲು ಹಾಗು ನಗರದ ಕನ್ನಡಿಗರಿಗೆ ಹೆಚ್ಚು ಸೌಕರ್ಯವನ್ನೊದವಿಸಿ ಕೊಡಬೇಕೆಂದು ಪ್ರಾರ್ಥಿಸಲು ೫ ಜನರ ಶಿಷ್ಟಮಂಡಲವೊಂದು ಶಿಕ್ಷಣಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟಿಯವರನ್ನು ಕಂಡಿತು. ಸರಕಾರಿ ಬಾಲಿಕೆಯರ ಶಾಲೆಯೊಂದರಲ್ಲಿ ಕನ್ನಡ ಶಿಕ್ಷಣಮಾಧ್ಯಮವನ್ನೇರ್ಪಡಿಸಬೇಕು, ಮಹಿಳೆಯರ ಕ್ವೀನಮೇರೀಜ ಕಾಲೇಜಿನಲ್ಲಿ ಕನ್ನಡವನ್ನು ದ್ವಿತೀಯ ಭಾಷೆಯಾಗಿ ತೆರೆಯಬೇಕು, ಮಂಗಳೂರಿನಲ್ಲಿ ಕನ್ನಡ ಟ್ರೇನಿಂಗ ಕಾಲೇಜನ್ನು ತೆರೆಯಬೇಕು ಮುಂತಾದ ಬೇಡಿಕೆಗಳನ್ನು ಶಿಷ್ಟಮಂಡಲದವರು ಮುಂದೆ ಮಾಡಿರುವರು.

ಹೊಸದಿಲ್ಲಿ

ಹಿಂದುಸ್ತಾನ ಸರಕಾರ ಮತ್ತು ಐರ್ಲಂಡದ ಪ್ರಜಾ ಸರಕಾರ ಇವೆರಡೂ ತಮ್ಮ ತಮ್ಮ ಪ್ರಾತಿನಿಧ್ಯದ ಮಟ್ಟವನ್ನು ರಾಯಭಾರಿತ್ವದ ಮಟ್ಟಕ್ಕೆ ಏರಿಸಬೇಕೆಂದು ನಿರ್ಧರಿಸಿದ್ದಾರೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ. ಸದ್ಯದಲ್ಲಿ ಆಯರ್ಲಂಡದಲ್ಲಿ ಭಾರತದ ಮಂತ್ರಿಯಾಗಿರುವ ಶ್ರೀ ವಿ. ಕೆ. ಕೃಷ್ಣಮೆನನ್ನರೆ ಇನ್ನು ಮೇಲೆ ಲಂಡನದಲ್ಲಿ ಭಾರತದ ಹಾಯಕಮೀಶನರರಾಗುವರಲ್ಲದೆ ಆಯರ್ಲಂಡಿನಲ್ಲಿ ಭಾರತದ ರಾಯಭಾರಿಗಳಾಗಿಯೂ ಉಳಿಯುವರು.

ಹಿಂದುಸ್ತಾನದ ನಿರ್ಯಾತ ವ್ಯಾಪಾರವನ್ನು ಹೆಚ್ಚಿಸುವ ದೃಷ್ಟಿಯಿಂದ ಹಿಂದುಸ್ತಾನ ಸರಕಾರದವರು ಅರಳೆಯ ಮೇಲಿನ ನಿರ್ಯಾತ ಸುಂಕದ ಕರವನ್ನು ಜೂನ ೧ ರಿಂದ ರದ್ದುಗೊಳಿಸಿದ್ದಾರೆಂದು ಸರಕಾರಿ ಪ್ರಕಟನೆ ಹೊರಟಿದೆ.

ಹಿಂದುಸ್ತಾನ ಸರಕಾರದವರು ರಾಷ್ಟ್ರೀಯ ಸಂಕೇತ ಮತ್ತು ರಾಷ್ಟ್ರಮುದ್ರೆಗಳಲ್ಲಿ 'ಸತ್ಯಮೇವ ಜಯತೆ' ಎಂಬ ಅವತರಣಿಕೆಯನ್ನು ಸೇರಿಸಬೇಕೆಂದು ನಿರ್ಧರಿಸಿದ್ದಾರೆ. ದೇವನಾಗರಿ ಲಿಪಿಯಲ್ಲಿ ಇದನ್ನು ಬರೆಯಲಾಗುವದು. ಗಾಂಧೀಜಿಯ ತತ್ವಕ್ಕೂ ಇದು ಸುಸಂಗತವಾಗಿದೆ.

ಮಳೆಗಾಲ ಪ್ರಾರಂಭವಾಗುವದರೊಳಗಾಗಿ ಹೊಸದಿಲ್ಲಿ ನಿರಾಶ್ರಿತ ಶಿಬಿರದಲ್ಲಿರುವ ೩೦೦೦ ಕುಟುಂಬಗಳಿಗೆ ಒಂದು ಕೋಣೆಯ ಕಚ್ಚಾ ಮನೆಗಳನ್ನೊದವಿಸಲಾಗುವದು. ಹಿಂದುಸ್ತಾನ ಸರಕಾರ ಇದಕ್ಕಾಗಿ ೫೦ ಲಕ್ಷ ರೂಪಾಯಿಗಳನ್ನು ಈಗಾಗಲೆ ವೆಚ್ಚ ಮಾಡಿದೆ.

ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಮಾರಿದರೆಂದು ೧೯೪೮ ಅಗಸ್ಟದಲ್ಲಿ ಬಂಧಿಸಲ್ಪಟ್ಟಿದ್ದ ದಿಲ್ಲಿ ಶಸ್ತ್ರಾಗಾರದ ವ್ಯವಸ್ಥಾಪಕರಾದ ಅರ್ಥರ ಹೆನ್ರಿ ಫ್ರಾಂಕ ಬಲಾರ್ಡ ಮತ್ತು ಅವರ ಸಹಾಯಕ ಹವಾಲದಾರ ಕಾರತೂನ ಮೂಲ್ಕರಾಜರನ್ನು ದಿಲ್ಲಿ ಸೆಶನ್ಸ ಜಜ್ಜರು ನಿರ್ದೋಷಿಗಳೆಂದು ಬಿಡುಗಡೆ ಮಾಡಿದರು.

ಭೋಪಾಳ ಸಂಸ್ಥಾನವು ಜೂನ ೧ ನೇ ತಾರೀಕಿನಿಂದ ಚೀಫ ಕಮೀಶನರರ ಪ್ರಾಂತವಾಗಿ ಪರಿವರ್ತಿಸಲ್ಪಟ್ಟು ಕೇಂದ್ರದ ಆಡಳಿತೆಗೊಳಪಟ್ಟಿತು. ಭೋಪಾಳದ ವಿಸ್ತಾರವು ೭ ಸಾವಿರ ಚದುರ ಮೈಲು ಇದ್ದು ೮ ಲಕ್ಷ ಜನಸಂಖ್ಯೆಯಿದೆ. ಭೋಪಾಳದ ಹಿಂದಿನ ನವಾಬರು ಈ ಬಗ್ಗೆ ಪ್ರಜೆಗಳಿಗೆ ಅಭಿನಂದನಪರ ಸಂದೇಶ ಕಳಿಸಿದ್ದಾರೆ.

ಹಿಂದುಸ್ತಾನದಲ್ಲಿ ಪ್ರತಿ ವರ್ಷ ೨೦ ಲಕ್ಷ ಜನರು ಮಲೇರಿಯಾದಿಂದ ಮರಣಹೊಂದುವರು. ಅದರ ನಿವಾರಣೆಗಾಗಿ ಹಿಂದುಸ್ತಾನ ಸರಕಾರದ ಮಲೇರಿಯಾ ಇನ್‌ಸ್ಟಿಟ್ಯೂಟನವರು ೧೯೪೭-೪೮ ರಲ್ಲಿ ದಕ್ಷಿಣ ಕನ್ನಡ ಜಿಲ್ಹೆಯ ೧೬ ಹಳ್ಳಿಗಳಲ್ಲಿ ಮಲೇರಿಯಾ ನಿವಾರಣೆಗಾಗಿ ಮಾಡಿದಪ್ರಯತ್ನವು ಯಶಸ್ವಿಯಾಗಿದೆಯೆಂದು ಪ್ರಸಿದ್ಧಿಸಲಾಗಿದೆ.

ಹೈದರಾಬಾದ

ಕಾಶೀಂ ರಜವಿಯ ಮುಂಬರುವ ಖಟ್ಲೆಯ ವಿಚಾರಣೆಯಲ್ಲಿ ಅವನ ಪರವಾಗಿ ವಕಾಲತ್ತು ವಹಿಸಲು ಹೈದರಾಬಾದ ಸರಕಾರದವರು ನ್ಯಾ. ಅಬ್ದುಲ್ ರಹಿಮಾನರಿಗೆ ಅಪ್ಪಣೆ ಕೊಡಲು ನಿರಾಕರಿಸಿದರೆಂದು ಬೇಗಂ ಕಾಶೀಂ ರಜವಿಯವರು ಪ್ರಕಟಿಸಿದ್ದಾರೆ. ಇದಕ್ಕೆ ಉತ್ತರ ಕೊಡುತ್ತ ಡ್ಯಾ- ಸಯ್ಯದ ಹೈದರ ರಾಜಾ ಝಾಯದಿಯವರು, ಇದರಲ್ಲಿ ಸರಕಾರದ ತಪ್ಪು ಏನೂ ಇಲ್ಲ ಇಂಥ ಹೀನ ಅಪರಾಧಗಳನ್ನು ಮಾಡಿದವನನ್ನು ಉಳಿಸಿಕೊಳ್ಳಲು ಯಾವ ಸ್ವಾಭಿಮಾನೀ ವಕೀಲನೂ ಮುಂದೆ ಬರಲಾರನೆಂದು ಸಾರಿದ್ದಾರೆ.

ಮಹಬೂಬ ನಗರದ ಬಳ್ಳಿಪಲ್ಲಿ ಎಂಬಲ್ಲಿ ಶ್ರೀ ಗೋಪಾಲರೆಡ್ಡಿ ಮತ್ತು ವೆಂಕಟರಾಮರೆಡ್ಡಿ ಎಂಬ ಶ್ರೀಮಂತ ಮನೆತನದವರು ರಾತ್ರಿ ತಮ್ಮ ಮನೆಯಲ್ಲಿ ಮಲಗಿದಾಗ ಕಮ್ಯುನಿಸ್ಟರು ಬಂದು ಅವರ ಕೊಲೆ ಮಾಡಿ ಹೋದರೆಂದು ತಿಳಿಯುತ್ತದೆ.

ಕಮ್ಯುನಿಸ್ಟರು ಹದಿಕ ತಾಲೂಕದಲ್ಲಿಯ ಒಂದು ಹಳ್ಳಿಯನ್ನೇ ದಾಳಿ ಮಾಡಿದ ಸುದ್ದಿಯು ಬಂದಿದೆ.

ಮಹಬೂಬ ನಗರದ ಸೆರೆಮನೆಯಲ್ಲಿದ್ದ ಕಾಂಗ್ರೆಸ ಕಾರ್ಯಕರ್ತನನ್ನು ಗುಂಡಿಕ್ಕಿ ಕೊಲ್ಲಲು ಆಜ್ಞಾಪಿಸಿದನೆಂದು ಜಿಲ್ಹಾ ಪೋಲಿಸ ಸುಪರಿಂಟೆಂಡೆಂಟ ಹಸನ ರಸೂಲ ಮತ್ತು ಅವನ ಐದು ಜನ ಪೋಲಿಸ ಅಧಿಕಾರಿಗಳನ್ನು ವಿಚಾರಣೆಗೆ ಗುರಿಪಡಿಸಲಾಗಿದೆ.

ಪಶ್ಚಿಮ ಬಂಗಾಲ

ಪೋಲೀಸ ಪಡೆ ಮತ್ತು ಪಂಚಾಯತ ಪಡೆಯನ್ನು ಕಾಯದೆಯಿಂದ ಹಿಡಿದಿಡಬೇಕೆಂದು ಶಾಸನಸಭೆಯಲ್ಲಿ ಕಳೆದವಾರ ಸೇರಿದ್ದ ಸಭೆಯಲ್ಲಿ ಸರಕಾರದ ಕ್ರಮವನ್ನು ಮಾಡಿಕೊಳ್ಳುವ ಗೊತ್ತುವಳಿ ಸ್ವೀಕೃತವಾಯಿತು. ರಾಜಸ್ಥಾನದ ಪಾಶ್ಚಾತ್ಯ ಮತ್ತು ಉದ್ಯಮಪಾಠಿಯ ಮಂತ್ರಿ ಶಿಕ್ಷಣದ ಇವರು ಅಧ್ಯಕ್ಷತೆ ವಹಿಸಿದ್ದರು. ಮಹಿಳೆಯ ಸಂಬಂಧದಲ್ಲಿ ಶಾಸನಸಭೆಯ ಕೊಠಡಿ ಇರಬಾರದೆಂದು ಪರಿಷತ್ತು ಅಭಿಪ್ರಾಯಪಟ್ಟಿತು.

ಕಲಕತ್ತಾ ಪ್ರದ್ಯುಮ್ನನ ಪಾರ್ಕಿನಲ್ಲಿ ಆ ತಾರೀಕು ಸೇರಿದ್ದ ಸಭೆಯೊಂದರಲ್ಲಿ ಎರಡು ಬಣಗಳಲ್ಲಿ ಚಕಮಕಿ ನಡೆದು ೧೬ ಜನರು ಗಾಯಗೊಂಡರು. ಇದರಲ್ಲಿ ಒಬ್ಬ ಪೋಲೀಸ ಸಬ್ ಇನಸ್ಪೆಕ್ಟರನೂ ಇರುವನು. ಕಮ್ಯುನಿಸ್ಟರೊಡನೆ ಸಂಬಂಧವಿಟ್ಟುಕೊಂಡ ವಿದ್ಯಾರ್ಥಿ ಸಂಘದವರು ಕರೆದ ಈ ಸಭೆಯಲ್ಲಿ ಸರಕಾರದ ವಿರುದ್ಧ ಒಬ್ಬರು ತೀವ್ರ ಟೀಕೆಮಾಡಿದ್ದರ ಪರಿಣಾಮವಾಗಿ ತಿಕ್ಕಾಟವೆದ್ದು ಮೇಲೆ ಹೇಳಿದಂತೆ ಹೊಡೆ ಸಂಭವಿಸಿತೆಂದು ತಿಳಿಯುತ್ತದೆ.

ಪಾಕಿಸ್ತಾನ

ಪಾಕಿಸ್ತಾನ ಸರಕಾರವು, ಈಗ ಪತ್ರಿಕೆಗಳಲ್ಲಿ ಪ್ರಸಿದ್ಧವಾದ ೧೦ ಲಕ್ಷಕ್ಕಿಂತಲೂ ಹೆಚ್ಚು ಸ್ಟರ್ಲಿಂಗ ಹಣವನ್ನು ಬ್ರಿಟಿಶ ಸರಕಾರಕ್ಕೆ ಕೇಳಬಹುದೆಂದು ತಿಳಿಯುತ್ತದೆ. ಬರಗಾಲವನ್ನು ತಪ್ಪಿಸಿ ಔದ್ಯೋಗೀಕರಣವನ್ನು ಸಾಧಿಸಲು ಈ ಸಹಾಯವನ್ನು ಕೇಳುತಿರುವದೆಂದು ತಿಳಿಯುತ್ತದೆ.

ವಾಯವ್ಯಸೀಮೆ ಜಿಲ್ಹೆಯ ಬಗ್ಗೆ ಪಾಕಿಸ್ತಾನವು ತಾಳಿದ ಧೋರಣವನ್ನು ಪ್ರತಿಭಟಿಸುವ ಬಿನ್ನವತ್ತಳೆಯನ್ನು ಅಫಗಾನ ಮುಖ್ಯ ಮಂತ್ರಿಗಳಿಗೆ ಮಂಜವಾರ ಜಿಲ್ಹೆಯ ನಿವಾಸಿಗಳು ಅರ್ಪಿಸಿದರು. ಸಮಾಧಾನಕರ ರೀತಿಯಿಂದ ಈ ಪ್ರಶ್ನೆಯ ವಿಚಾರ ಮಾಡಲಾಗುವದು. ಅದು ಶಕ್ಯವಾಗದಿದ್ದರೆ ಮುಂದೇನು ಮಾಡಬೇಕೆಂಬ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಕೋರಲಾಗುವದು ಎಂದು ಮಂತ್ರಿಗಳು ಆಶ್ವಾಸಿಸಿದರು.


ಪಾಕಿಸ್ತಾನ ಮತ್ತು ಅಫಗಾಣಿಸ್ತಾನ ಸರಕಾರಗಳಲ್ಲಿ ವಾಯವ್ಯಸೀಮೆಯ ಗುಡ್ಡಗಾಡು ಪ್ರದೇಶದ ಜನರ ಸಂಬಂಧದಲ್ಲಿ ಇದ್ದ ತಂಟೆಯನ್ನು ಅವಶ್ಯವೆನಿಸಿದರೆ ತೀವ್ರ ಬಗೆಹರಿಸುವ ಉಪಾಯ ಕೈಕೊಳ್ಳಲಾಗುವದೆಂದು ಅಫಗಾಣಿಸ್ತಾನದ ಮುಖ್ಯ ಮಂತ್ರಿಗಳು ಪಾರ್ಲಮೆಂಟಿನಲ್ಲಿ ಸಾರಿದರು.

ಪಟಿಯಾಲಾ ಮತ್ತು ಪೂರ್ವಪಂಜಾಬ ಸಂಸ್ಥಾನ ಒಕ್ಕೂಟದ ಮಂತ್ರಿ ಸರದಾರ ಜ್ವಾಲಸಿಂಗ ಮತ್ತು ಸರದಾರ ಹರಚರಣಸಿಂಗರ ವಿರುದ್ಧ ಮತಪ್ರದರ್ಶನ ಮಾಡಿದ ಬಗ್ಗೆ ಫರೀದಕೋಟದಲ್ಲಿ ೨೦೦ ಜನರನ್ನು ಬಂಧಿಸಲಾಗಿದೆ.

ಸುಸಂಧಿ ಲಾಭಪಡೆಯಿರಿ
ನಿರುದ್ಯೋಗ ದೂರ ಕೊಳ್ಳಿರಿ



ಪೋಸ್ಟ ದ್ವಾರ ಕಟಿಂಗ್ಸ ಕಲಿಯಬೇಕಾಗಿದ್ದರೆ:- ೪ ಆಣೆ ಅಂಚೆ ತಿಕೀಟು ಸಹಿತ ಬರೆಯಿರಿ:-
ರಾವ ಟೇಲರ್
ಸ್ಕೂಲ
ಟಿಳಕ ರೋಡ, ಪುಣೆ



ಬೇಡಿಯರು

(ವಿಂಧ್ಯಪ್ರದೇಶದ) ಬುಂದೇಲಖಂಡದಲ್ಲಿ ನಾನು ಸುತ್ತಾಡುತ್ತಿದ್ದಾಗ ಮೇ ಒಂದರ ಬೆಳಿಗ್ಗೆ ೧೨೩೦೦ ಜನಸಂಖ್ಯೆಯ ಬಿಜಾವಾರವೆಂಬ ಒಂದು ಪಟ್ಟಣಕ್ಕೆ ಹೋದೆ. ಭಂಗಿಗಳು, ಬೇಸೋರರು, ಚಮ್ಮಾರರು ವಾಸಿಸುತ್ತಿದ್ದ ಗಲ್ಲಿಗಳಲ್ಲಿ ಸಂಚರಿಸಿದ ಬಳಿಕ ಹರಿಜನರ ಕೆಳಗಿನ ಪ್ರಾಥಮಿಕ ಶಾಲೆಗೆ ಭೆಟ್ಟಿಕೊಟ್ಟ ಮೇಲೆ, ನಮ್ಮನ್ನು ಬೇಡಿಯರೆಂಬ ಜಾತಿಯವರು ನೆಲೆಸಿದ್ದ ಒಂದು ಗಲ್ಲಿಗೆ ಒಯ್ಯಲಾಯಿತು. ಈ ಜಾತಿಯ ಜನ ಬಹಳವಿಲ್ಲ. ಅವರಿರುವುದು ಒಂದು ಮಗ್ಗುಲಿನ ಕೆಲ ಸ್ಥಳಗಳಲ್ಲಿ ಮಾತ್ರ. ಆ ಗಲ್ಲಿಯಲ್ಲಿ ಅವರ ೧೮ ಕುಟುಂಬಗಳಿವೆ. ಅವುಗಳಲ್ಲಿ ೨೦ ಗಂಡಸರು, ೪೪ ಹೆಂಗಸರು, ೮ ಹುಡುಗರು ಮತ್ತು ೧೦ ಹುಡುಗಿಯರು ಹೀಗೆ ಒಟ್ಟು ೭೩ ಜನರಿದ್ದರು.

ಭಂಗಿಗಳು, ಚಮ್ಮಾರರು, ಬೇಸೋರರು ಮುಂತಾದವರ ವಸತಿ ಸ್ಥಳವನ್ನು ನಾನು ಸಂದರ್ಶಿಸಿದಾಗ ಅವರ ಜೀವನದ ರೀತಿನೀತಿ, ವೃತ್ತಿ ಕೂಲಿ ಮತ್ತು ಸಾಮಾಜಿಕ ಪರಿಸ್ಥಿತಿ ಇವುಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಸಂಗ್ರಹಿಸುವುದರಲ್ಲಿ ನನಗೆ ಏನೂ ತೊಂದರೆಯಾಗಲಿಲ್ಲ. ಆದರೆ ಈ ಸ್ಥಳದಲ್ಲಿ ಸ್ಥಳೀಯ ಸ್ತ್ರೀ ಪುರುಷರನ್ನು ಕೂಡಿಸಲು ಸ್ವಲ್ಪ ಹೊತ್ತು ಹಿಡಿಯಿತು. ಮೊದಲು ಕೂಡಿದವರು ಹೆಂಗಸರು. ಗಂಡಸರನ್ನು ಕೂಡಿಸುವುದು ಸ್ವಲ್ಪ ಕಷ್ಟವಾಯಿತು. ಅವರು ಕೂಡಿದ ಬಳಿಕ ಮೊದಲು ಅಲ್ಲಿಯ ೮-೧೦ ಮಂದಿಗೆ ಹಾಕಿದ ಪ್ರಶ್ನೆ ಅವರ ವೃತ್ತಿಯ ಬಗ್ಗೆ. ಸರಕಾರವಿತ್ತ ಭೂಮಿಯನ್ನು ಸಾಗು ಮಾಡುತ್ತಿರುವೆವೆಂದು ಅವರು ನಮಗೆ ಮೊದಲು ಹೇಳಿದರು. ಅದು ಸುಳ್ಳೆಂದು ಕೂಡಲೆ ಗೊತ್ತಾಯಿತು. ತಮಗೆ ಸಾಗು ಮಾಡಲು ಭೂಮಿಯಿಲ್ಲವೆಂದೂ ತಮ್ಮಲ್ಲಿಯ ಒಬ್ಬನಿಗೆ ಕೊಟ್ಟಿದ್ದ ಭಾವಿ ಸಹಿತವಾದ ಒಂದು ಗದ್ದೆಯನ್ನು ಹಳ್ಳಿಯ ಜಾಗಿರದಾರನು ವಶಪಡಿಸಿಕೊಂಡನೆಂದೂ ಅವರು ಹೇಳಿದರು. ಅಲ್ಲಿದ್ದ ತನ್ನ ಮುದಿ ತಂದೆಗೆ ಬಂದ ವಿವರಗಳನ್ನೊಳಗೊಂಡ ಕಸೆಯ ಕಾಗದವನ್ನು ಒಬ್ಬ ತರುಣ ತಂದನು. ಈ ಭೂಮಿಯನ್ನೂ ಜಾಗಿರದಾರನು ಕಸಿದುಕೊಂಡಿದ್ದನು.

ಬೇಗನೆ ನನಗೆ ಅವರ ವೃತ್ತಿಯ ಬಗ್ಗೆ ಸರಿಯಾದ ಉತ್ತರ ದೊರಕಿತು. ಒಬ್ಬ ಮುದುಕಿ ನೆದ್ದು ಬಂದು, 'ಸಾಮಾನ್ಯಕೂಲಿ ಕೆಲಸಗಳ ಜೊತೆಗೆ ನಾವು ನಮ್ಮ ಭಗಿನಿಯರು ಮತ್ತು ಹೆಣ್ಣುಮಕ್ಕಳು ದುಡಿವ ಹಣದಿಂದಲೂ ಜೀವನ ಸಾಗಿಸುವೆವು' (ಎಂದರೆ ಸೂಳೆಗಾರಿಕೆಯಿಂದ ಎಂದು) ಎಂದು ಸ್ಪಷ್ಟವಾಗಿ ಹೇಳಿದನು. ಇತರ ವರ್ಗಗಳ ಹೆಂಗಸರಂತೆ ಅಲ್ಲಿಯ ಹೆಂಗಸರು ನಾಚುತ್ತಿದ್ದಿಲ್ಲ ಮತ್ತು ಅವರ ಮುಂದಾಳ್ತನವು ಅವರು ಅಲ್ಲಿಯ ಗಂಡಸರಿಗಿಂತ ಹೆಚ್ಚು ಮುಂದಾದವರೂ ಮುನ್ನುಗ್ಗುವವರೂ ಎಂಬದನ್ನು ತೋರಿಸಿತು. ಆ ಚಿಕ್ಕ ಸಭೆಯಲ್ಲಿ ಅವರೇ ಮಾತುಗಾರ್ತಿಯರಾಗಿದ್ದರು. "ಹೆಚ್ಚು ಶೀಲವಂತಿಕೆಯುದಾದ ದೇಹಶ್ರಮದ ಕೆಲಸವನ್ನು ಹಿಡಿಯಬಾರದೇಕೆ? ನಿಮ್ಮ ಜಾತಿ ಮಾಡುತ್ತಿರುವ ಉದ್ಯೋಗವನ್ನು ಬಿಟ್ಟುಬಿಡಬೇಕು" ಎಂದಾಗ ಕಸೆಯ ಕಾಗದ ತಂದ ತರುಣನ ತಾಯಿ ತನ್ನ ಕತೆಯನ್ನು ನಮಗೆ ಹೇಳಿದಳು. ತನ್ನನ್ನು ಮದುವೆಯಾಗಲು ಇಷ್ಟಪಟ್ಟ ಬ್ರಾಹ್ಮಣನೊಬ್ಬನೊಡನೆ ತಾನು ಮದುವೆ ಮಾಡಿಕೊಳ್ಳುವೆನೆಂದಾಗ ಆ ಸುದ್ದಿ ಪೋಲೀಸರಿಗೆ ಮುಟ್ಟಿ ಪೋಲೀಸರೂ ಠಾಣೆದಾರರೂ (ಪೋಲೀಸ ಸಬ್ ಇನಸ್ಪೆಕ್ಟರರು) ಆ ಮದುವೆಗೆ ಒಪ್ಪಿಗೆ ಕೊಡದೆ ಅದನ್ನು ಬಹಿಷ್ಕರಿಸಿದರೆಂದೂ ತಾನು ಮದುವೆಯಾಗಿ ಪ್ರಾಮಾಣಿಕತೆಯಿಂದ ಮನೆಗೆಲಸದ ವೃತ್ತಿಯಿಂದ ಜೀವನ ಸಾಗಿಸಲು ಇಷ್ಟವುಳ್ಳವಳಾಗಿದ್ದರೂ ಸರ್ವಶಕ್ತವಾದ ಪೋಲೀಸು ಖಾತೆ ಹಾಗೆ ಅಡ್ಡಬಂದಿತೆಂದೂ ಅವಳು ದೂರಿಕೊಂಡಳು. ಅಲ್ಲದೆ, ತನ್ನಂತೆಯೇ ಇನ್ನೂ ಹಲವರಿಗೆ ಸ್ವಸ್ಥ ಜೀವನ ನಡೆಸಿಕೊಂಡಿರಲು ಇಷ್ಟವಿದ್ದರೂ ತಮ್ಮ ಯಾವ ತಪ್ಪೂ ಇಲ್ಲದೆ ತಾವು ಹಾಗೆ ಮಾಡಲಾರದಾಗಿರುವುದಾಗಿ ಅವಳು ಮರುನುಡಿದಳು. 'ನಾವು ಪರಂಪರಾಗತವಾಗಿ ಬಂದ ಜೀವನವನ್ನು ನಡೆಸುವ ಒತ್ತಾಯಕ್ಕೆ ಒಳಗಾಗಿರುವೆವು. ನೀವು ನಮಗೆ ಸ್ವಸ್ಥ ಜೀವನ ನಡೆಸಲು ಸಾಧ್ಯ ಮಾಡಿಕೊಟ್ಟರೆ ಮತ್ತು ನಮ್ಮ ಗಂಡಸರಿಗೆ ಸಾಗು ಮಾಡಲು ಸ್ವಲ್ಪ ಭೂಮಿ ಕೊಡಿಸಿ ತನ್ಮೂಲಕ ಅವರು ಉದರಭರಣದ ಸಂಪಾದನೆ ಮಾಡಿಕೊಳ್ಳಲು ಅನುಕೂಲ ಕಲ್ಪಿಸಿಕೊಟ್ಟರೆ ಗ್ರಾಮಜದ ಇತರರಂತೆಯೇ ನಾವೂ ಇರಲು ಸಿದ್ಧರಿದ್ದೇವೆ' ಎಂದು ಅವಳು ಸ್ಪಷ್ಟಪಡಿಸಿದಳು.

ಆ ೪೪ ಹೆಂಗಸರಲ್ಲಿ ೨೫ ಜನರು ಸೂಳೆಯರಾಗಿದ್ದರು. ಈ ಹೆಂಗಸರನ್ನು ಸುಧಾರಿಸುವ ಕಾರ್ಯವನ್ನು ಸಾಮಾಜಿಕ ಸುಧಾರಕರು ಕೈಕೊಳ್ಳುವುದಿಲ್ಲವೇ? ಕರ್ನಾಟಕದಲ್ಲಿ ದೇವದಾಸಿಯರೆನಿಸಿದ ಅಂಥ ಒಂದು ವರ್ಗವೇ ಉಂಟು. ನಮ್ಮ ನುರಿತಹಿರಿಯಕೆಲಸಗಾರರಾದ ಶ್ರೀ ಕಾಕಾ ಕಾರಖಾನೀಸರು ಕೆಲವರ್ಷಗಳ ಹಿಂದೆ ಅಂಥ ದೇವದಾಸಿಹುಡುಗಿಯರಿಗೆ ಶಿಕ್ಷಣ ಕೊಡುವ ಕಾರ್ಯವನ್ನು ಕೈಕೊಂಡು ಅವರನ್ನು ಮುಂಬಯಿ ಪ್ರಾಂತದ ಬಿಜಾಪುರ ನಗರದ ಹರಿಜನ ಬಾಲಿಕಾಲಯಕ್ಕೆ ಸೇರಿಸಿದರು. ೧೯೩೮ ರಿಂದ ಈವರೆಗೆ ಅವರು ೧೦ ಹುಡುಗಿಯರನ್ನು ಗೌರವಸ್ಥ ಹೆಂಗಸರನ್ನಾಗಿ ಮಾಡಿ ಜಗತ್ತಿನಲ್ಲಿ ಬಿಡಲು ಶಕ್ತರಾಗಿದ್ದಾರೆ; ಅವರಲ್ಲಿ ಕೆಲವರು ಶಾಲಾಶಿಕ್ಷಕಿಯರಾಗಿದ್ದಾರೆ.

ದಿಲ್ಲಿ, ಎ. ವಿ. ಥಕ್ಕರ

೯-೫-೪೯

[ಟಿಪ್ಪಣಿ: ಕಡೆಯ ಪಕ್ಷ ಮಧ್ಯಪ್ರಾಂತ ಮತ್ತು ವರ್ಹಾಡಗಳ ಪ್ರತಿಯೊಂದು ಭಾಗದಲ್ಲೂ ಈ ವರ್ಗ ಕಂಡುಬರುವುದೆಂದು ನನ್ನ ತಿಳುವಳಿಕೆ. ಅವರ ಜಾತಿಯ ಹೆಸರುಗಳು ಭಿನ್ನವಾಗಿರಬಹುದು, ಆದರೆ ಅವರು ಮೇಲಿನ ವೃತ್ತಿಯನ್ನು ಹಿಡಿದವರಿದ್ದಾರೆ. ಸುಮಾರು ೩೫ ವರ್ಷಗಳ ಕೆಳಗೆ ವರ್ಹಾಡದ ಒಂದು ಕ್ರಿಮಿನಲ್ ಕೋರ್ಟಿನಲ್ಲಿ ಈ ವರ್ಗದ ಒಬ್ಬ ಹೆಂಗಸನ್ನು ಕಂಡೆ. ಅವಳು ಒಬ್ಬ ಸಾಕ್ಷಿಯಾಗಿ ಬಂದಿದ್ದಳು. ಗಂಡನ ಹೆಸರನ್ನು ಹೇಳೆಂದು ಮ್ಯಾಜಿಸ್ಟ್ರೇಟರು ಕೇಳಿದಾಗ ಅವಳು 'ಪೈಸಾ' (ಹಣ) ಎಂದು ಉತ್ತರ ಕೊಟ್ಟಳು. ನನಗೆ ಅದು ವಿಚಿತ್ರವಾಗಿ ತೋರಿತಲ್ಲದೆ, ಅದರ ಅರ್ಥ ತಿಳಿಯಲಿಲ್ಲ. ಆಗ ವ್ಯಭಿಚಾರವು ಆ ಜಾತಿಯ ಪರಂಪರಾಗತ ವೃತ್ತಿಯೆಂದು ಮ್ಯಾಜಿಸ್ಟ್ರೇಟರು ನನಗೆ ಹೇಳಿದರು.

ಅವರ ಸಾಮಾಜಿಕ ಏಳಿಗೆಯಲ್ಲಿ ಅಡ್ಡಬರಬಾರದೆಂದು ಪೋಲೀಸುಖಾತೆಗೆ ನಿಷ್ಠೆಯಿಂದ ತಿಳಿಸಬೇಕೆಂಬುದು ನನ್ನ ಮತ.

-ಕಿ. ಘ. ಮ.]

ಕೆಲವು ರಚನಾತ್ಮಕ ಸೂಚನೆಗಳು

ಲಂಚಗುಳಿತನ ಮೊದಲಾದ ದುಷ್ಟ ರೂಢಿಗಳಿಗೆ ಸರಕಾರದ ವಿವಿಧ ಶಾಖೆಗಳಲ್ಲಿಯ ದ್ಫ್ತರದ ಪ್ರಾಚೀನ ಪದ್ಧತಿಯೂ ಒಂದು ಕಾರಣವಾಗಿದೆ. ಇದನ್ನು ಸರಿಪಡಿಸಿದ್ದಾದರೆ ಈ ದುಷ್ಟ ರೂಢಿಗಳು ಕಡಿಮೆಯಾಗುವವಷ್ಟೇ ಅಲ್ಲ, ಸಾರ್ವಜನಿಕರಿಗೂ ಒಳ್ಳೆಯ ಪರಿಹಾರ ದೊರೆತಂತಾಗುವದು ಮತ್ತು ಕಾರ್ಯಕಲಾಪಗಳೂ ಬಹುಬೇಗ ಸಾಂಗವಾಗುವವು. ಈಸಂಬಂಧದಲ್ಲಿ ಹಳ್ಳಿಯ ಕಾರ್ಯಕರ್ತನೊಬ್ಬನು ಕೆಳಗಿನ ವಿಧಾಯಕ ಸೂಚನೆಗಳನ್ನು ಮಾಡುತ್ತಾನೆ:

"ಅವಶ್ಯಕವೆನಿಸಿ ಜನರು ಸರಕಾರಕ್ಕೆ ಮನವಿಯನ್ನು ಮಾಡಿಕೊಳ್ಳಲೇಬೇಕಾಗುತ್ತದೆ; ಇದಕ್ಕಾಗಿಯೇ ಅವರು ಎಲ್ಲ ಬಗೆಯ ಇಷ್ಟಾನಿಷ್ಟ ಸಾಧನಗಳನ್ನುಪಯೋಗಿಸಿ ಅದಷ್ಟು ಬೇಗ ಮತ್ತು ನಿಶ್ಚಯವಾಗಿ ತಮ್ಮ ಕಾರ್ಯ ಫಲಿಸುವಂತೆ ಯೋಜಿಸುವರು. ಏಕೆಂದರೆ:

೧) ಕೆಲವು ಸಲ ಮನವಿಯೇ ಬಂದಿಲ್ಲೆಂದು ಅವರಿಗೆ ಸ್ಪಷ್ಟವಾಗಿ ಹೇಳಲಾಗುತ್ತದೆ.

೨) ಮನವಿಯು ಮಂಜೂರಾಗಿದೆಯೋ ಇಲ್ಲವೋ ಎಂಬುದನ್ನು ನಿರ್ದಿಷ್ಟ ಅವಧಿಯಲ್ಲಿ ಅವರಿಗೆ ತಿಳಿಸಲಾಗುವದಿಲ್ಲ. ಆದುದರಿಂದ ಅದನ್ನು ತಿಳಿದುಕೊಳ್ಳುವುದಕ್ಕಾಗಿ ಅವರು ಹಲವಾರು ಸಲ ಕಚೇರಿಗೆ ಎಡತಾಕಬೇಕಾಗುತ್ತದೆ. ಆದರಿಂದ ಅವರು ಅನವಶ್ಯಕವಾಗಿ ಹಣವನ್ನು ಸೂರೆ ಮಾಡಬೇಕಾಗುತ್ತದೆ.

೩) ಯಾವುದೊಂದು ಬಗೆಯ ಸರಕಾರೀ ಸಹಾಯವನ್ನು ಸಾರ್ವಜನಿಕವಾಗಿ ಘೋಷಿಸಿದಾಗ ಅದರ ಪರಿಣಾಮವನ್ನು ತಿಳಿದುಕೊಳ್ಳುವುದಕ್ಕಾಗಿ ಪ್ರತಿಯೊಬ್ಬ ಮನವಿಗಾರನು ಕಚೇರಿಗೆ ಹೋಗಬೇಕಾಗುವದು. ಕೆಲವೇ ಜನರು ಇದರಲ್ಲಿ ಯಶಸ್ವಿಯಾಗುವದ್ದರಿಂದ ಉಳಿದವರೆಲ್ಲ ನಿರಾಶೆಹೊಂದಿ ಮರಳುವರು. ಸರಕಾರದ ವಿರುದ್ಧಪ್ರಚಾರ ಕೈಕೊಳ್ಳುವವರ ಕೈಗೊಂಬೆಗಳು ಇಂಥವರೆಲ್ಲ ಆಗುವರು.

ಉಪಾಯಗಳು

೧) ಪ್ರತಿಯೊಬ್ಬ ಮನವಿಗಾರನಿಗೆ ಮನವಿ ಮುಟ್ಟಿದ ಬಗ್ಗೆ ಕೂಡಲೆ ರಶೀದಿಯನ್ನು ಕೊಡಬೇಕು. ಇದರಿಂದ ಅವಶ್ಯವೆನಿಸಿದಾಗ ಸರಕಾರಕ್ಕೆ ಮತ್ತೆ ಬರೆದುಕೊಳ್ಳಲು ಮನವಿಗಾರನಿಗೆ ಅವಕಾಶ ದೊರೆಯುವದು. ತನಗೆ ದೊರೆತ ಪಾವತಿಯ ಉಲ್ಲೇಖವನ್ನೂ ಅವನು ಅದರಲ್ಲಿ ಮಾಡಬಹುದು— ಮುದ್ರಿತ ಇಲ್ಲವೆ ರಬ್ಬರಸ್ಟ್ಯಾಂಪ ನಮೂನೆಗಳಲ್ಲಿ ಪಾವತಿ ಕೊಟ್ಟದ್ದಾದರೆ ಇದನ್ನು ಸುಲಭವಾಗಿ ಸಾಧ್ಯ ಮಾಡಬಹುದು. ಪ್ರತಿಯೊಬ್ಬ ಮನವಿಗಾರನಿಗೂ ಪಾವತಿ ಕೊಡಲಿಕ್ಕೆ ಬೇಕೆಂದು ಅಧಿಕಾರಿಗಳಿಗೆ ವಿಧಿಸತಕ್ಕದ್ದು.

೨) ಮನವಿಗಾರನು ಸ್ವತಃ ಹಾಜರಾಗುವ ಅವಶ್ಯಕತೆ ಇಲ್ಲದ ಸಂದರ್ಭಗಳಲ್ಲಿ ಮನವಿಗಳನ್ನು ಸ್ವೀಕರಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಗಳಿಗೆ ಕೊಡತಕ್ಕದ್ದು. ಗ್ರಾಮ ಪಂಚಾಯತರು ಆ ಮನವಿಗಳನ್ನು ಸ್ವೀಕರಿಸಿ ವರಿಷ್ಠಾಧಿಕಾರಿಗಳಿಗೆ ಕೊಡತಕ್ಕದ್ದು. ಆ ಮನವಿಗಳ ಸಂಬಂಧದ ಹುಕುಮುಗಳನ್ನು ಗ್ರಾಮ ಪಂಚಾಯತಿಗಳ ಮುಖಾಂತರವೆ ಮನವಿಗಾರರಿಗೆ ತಿಳಿಸತಕ್ಕದ್ದು. ಶಕ್ಯವಿದ್ದಷ್ಟು ಮನವಿಗಾರರು ಕಚೇರಿಗೆ ಹೋಗುವದನ್ನು ತಪ್ಪಿಸತಕ್ಕದ್ದು.

೩) ವಿಶೇಷ ವಿವರಗಳನ್ನು ನಿಶ್ಚಿತ ಪಡಿಸಿಕೊಳ್ಳುವುದಾಗಿ ಮನವಿಗಾರನ ಹಾಜರಿಯ ಅವಶ್ಯಕತೆ ಇಲ್ಲದಿದ್ದ ಸಂದರ್ಭಗಳಲ್ಲಿ, ಮೇಲಿಂದ ಮೇಲೆ ಮುದ್ದತು ಕೊಡುತ್ತ ಹೋಗದೆ ಕೂಡಲೆ ಅವುಗಳ ವಿಚಾರ ಮಾಡಿ ನಿರ್ಣಯ ಕೊಡಬೇಕು."

ವರ್ಧಾ ೧೭-೫-೪೯ ಕಿ. ಘ. ಮ.

ಆಭಾಸಿಕ ಆಹಾರಾಭಾವ

ತಾಳೆಬೆಲ್ಲದ ಉದ್ಯಮಕ್ಕೆ ಇನ್ನೂ ತಕ್ಕ ಸ್ಥಾನ ಕೊಟ್ಟಿಲ್ಲ. ನಮ್ಮ ಸಕ್ಕರೆಯ ಅವಶ್ಯಕತೆಯನ್ನು ಪೂರಯಿಸಿಕೊಳ್ಳಲು ನಾವು ಈಗಲೂ ಕಬ್ಬನ್ನೇ ಅವಲಂಬಿಸಿದ್ದೇವೆ. ಸಕ್ಕರೆ ತಯಾರಿಸುವವರ ಲಾಭದ ಉತ್ತೇಜನ ನಮ್ಮ ಭೂಮಿಯನ್ನು ಅದಕ್ಕಾಗಿ ಬಳಸುವ ಪ್ರವೃತ್ತಿಯನ್ನು ದಿನದಿನಕ್ಕೂ ಹೆಚ್ಚು ಮಾಡುತ್ತಿದೆ. ೧೯೩೮-೩೯ ರ ಕಬ್ಬಿನ ಬೆಳೆ ನೂರೆಂದು ತಿಳಿದು ಈ ಕೆಳಗೆ ಕೊಟ್ಟಿರುವ ಅಂಕೆಸಂಖ್ಯೆಗಳ ಮೇರೆಗೆ ಪ್ರತಿವರ್ಷವೂ ಕಬ್ಬಿನ ಬೆಳೆಗೆ ಹೆಚ್ಚು ಹೆಚ್ಚು ಭೂಮಿಯನ್ನು ಬಳಸುತ್ತಿರುವ ಅಂಶ ಸ್ಪಷ್ಟವಾಗುತ್ತದೆ:

೧೯೩೮-೩೯	೧೦೦
೧೯೪೦-೪೧	೫೧೩
೧೯೪೩-೪೪	೧೧೪
೧೯೪೭-೪೮	೧೧೮

ಈಗ ಭಾರತದಲ್ಲಿ ನೂರರಲ್ಲಿ೬೦ ಅಂಶ ನೀರಾವರಿಯಲ್ಲಿರುವ ೪೦ ಲಕ್ಷ ಎಕರೆ ಭೂಮಿಯನ್ನು ಕಬ್ಬಿನ ಬೆಳೆ ಆಕ್ರಮಿಸಿದೆ. ಇದರ ವಿರುದ್ಧವಾಗಿ ದೃಢವಾದ ಕ್ರಮವನ್ನು ಕೈಗೊಳ್ಳದಿದ್ದರೆ, ಕಬ್ಬಿನ ಬೆಳೆಗಾಗಿ ಹೆಚ್ಚು ಹೆಚ್ಚು ಎಕರೆ ಭೂಮಿಯನ್ನು ಬಳಸುವ ಪ್ರವೃತ್ತಿ ಹೆಚ್ಚುತ್ತ ಹೋಗುವುದು. ಏಕೆಂದರೆ, ಕಳೆದ ವರುಷದ ೧೦೦೦೦ ಟನ್ ಸಕ್ಕರೆಯ ತಯಾರಿಕೆಯಿಂದ ಕಾರಖಾನೆದಾರರು ತೃಪ್ತರಾಗಿಲ್ಲ; ೧೯೪೦-೫೦ ರಲ್ಲಿ ೧೬ ಸಾವಿರ ಟನ್ನಿಗೆ ಏರಿಸಬೇಕೆಂಬುದು ಅವರ ಗುರಿ.

ಈ ರೊಕ್ಕದ ಬೆಳೆ ನಮ್ಮ ದೇಶದ ಆಹಾರ ಸ್ವಾವಲಂಬನದ ಮೇಲೆ ಎಂಥ ಗದಾಪ್ರಹಾರ ಮಾಡುತ್ತದೆ ಎಂಬುದದನ್ನು ಇದರಿಂದ ಚೆನ್ನಾಗಿ ನಿರ್ಣಯಿಸಬಹುದು. ಸತ್ಯ ಸಂಗತಿಯೆಂದರೆ, ಸಕ್ಕರೆಗಾಗಿ ಕಬ್ಬನ್ನು ಬೆಳೆಯುವುದು ಅಯುಕ್ತ ಧೋರಣ. ಜಾವಾದಲ್ಲಿಯ ತಾಳೆಬೆಲ್ಲದ ವಿಜ್ಞಾನಿ ಡಾ. ಜೆ. ಈ. ಡಿ. ವ್ರೈ ಅವರು ಗೀಸೆನ್ನಿನ ಕಾಂಗ್ರೆಸ್ಸಿನಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯದ ಕೆಳಗೆ ಕೊಟ್ಟ ಸಾರವು ಕಣ್ಣು ತೆರೆಯಿಸುವಂಥದಿದೆ. ಅವರು ಪ್ರತಿಪಾದಿಸುತ್ತಾರೆ:

"ತಾಳೆಗಳಿಂದ ಸಕ್ಕರೆ ತಯಾರಿಸುವುದೊಂದೇ ಮುಂದಿನ ನ್ಯಾಯವಾದ ಪದ್ಧತಿ. ಏಕೆಂದರೆ ಶುದ್ಧರೂಪದಲ್ಲಿ ಸಕ್ಕರೆ ಕಾರ್ಬನ್ (ಇದ್ದಲಿಯ ಸತ್ವ), ಜಲಜನಕ ಮತ್ತು ಆಮ್ಲಜನಕಗಳಿಂದ ಕೂಡಿರುತ್ತದೆ. ಅದು ಮಣ್ಣಿನಿಂದ ಏನನ್ನೂ ತೆಗೆದುಕೊಳ್ಳುವುದಿಲ್ಲ. ಆದರೆ ಸಕ್ಕರೆ ತೆಗೆಯಲೆಂದು ಈಗ ಬೆಳೆಸುತ್ತಿರುವ 'ಬೀಟಾ ವಲ್ಗೆರಿಸ್' ಮತ್ತು 'ಸಚ್ಚಾರಂ ಅಫಿಸಿನೇರಂ' (Beta Vulgaris and Saccharum Officinarum) ಎಂಬ ಗಿಡಗಳ ಬೆಳವಣಿಗೆಗೆ ಭೂಸಾರ ಬಹಳ ಬೇಕಾಗುತ್ತದೆ. ಆದುದರಿಂದ ಅವುಗಳನ್ನು ಬೆಳೆಸುವುದರಿಂದ ಭೂಸಾರ ಬರಿದಾಗುತ್ತದೆ. ಆದರೆ ಇದೊಂದೇ ಕೇಡಲ್ಲ; ಇದಕ್ಕಿಂತಲೂ ಕೆಟ್ಟದೆಂದರೆ, ಯುರೋಪಿನಲ್ಲಿ ಬೀಟ್‌ರೂಟನ್ನೂ ಉಷ್ಣವಲಯದಲ್ಲಿ ಕಬ್ಬನ್ನೂ ಬೆಳೆಸಲು ಬಳಸುವ ಸ್ಥಳವನ್ನು ಗೋದಿಯನ್ನೂ ಭತ್ತವನ್ನೂ ಬೆಳೆಸಲು ಉಪಯೋಗಿಸಬಹುದು, ಉಪಯೋಗಿಸಬೇಕು. ವರ್ಧಮಾನ ಜನಸಂಖ್ಯೆಯನ್ನು ಎಣಿಸಿದರೆ, ಈಗ ಬೀಟರೂಟ್ ಮತ್ತು ಕಬ್ಬುಗಳನ್ನು ಬೆಳೆಯಲು ಬಳಸುತ್ತಿರುವ ಭೂಮಿಯನ್ನು ಗೋದಿ ಮತ್ತು ಭತ್ತವನ್ನು ಬೆಳೆಸಲು ಬಳಸುವದು ಅಗತ್ಯವೆನಿಸುವ ಕಾಲ ಬಹಳದೂರವಿಲ್ಲ ಎನ್ನಬೇಕಾಗುತ್ತದೆ. ಕಬ್ಬು ಮತ್ತು ಬೀಟ್‌ರೂಟುಗಳಿಗೆ ಧಾನ್ಯಗಳಿಗೆ ಯೋಗ್ಯವಾದ ನೆಲ ಬೇಕಾದರೆ ತಾಳೆ (Orenga palm) ಅವುಗಳ ಬೆಳೆಗೆ ತೀರ ಅಯೋಗ್ಯವಾದ ನೆಲದಲ್ಲಿ ಚೆನ್ನಾಗಿ ಬೆಳೆಯುತ್ತದೆ. ನನ್ನ ಪ್ರಕಾರ ಮಂಕ್ಕಾಲು ಎಕರೆ ಅಯೋಗ್ಯ ಭೂಮಿಯಲ್ಲಿ ಹಾಕಿದ ತಾಳೆಮರಗಳಿಂದ ೬೦ ಮಣಗಳಷ್ಟು ಸಕ್ಕರೆಯನ್ನು ತಯಾರಿಸಬಹುದು."

ಅಂದಾಜುಮಾಡಲಾದ ೫ ಕೋಟಿ ತಾಳೆಮರಗಳಲ್ಲಿ ಐದನೆಯ ಒಂದಶವನ್ನೂ ಸಕ್ಕರೆಗಾಗಿ ನಾವು ಬಳಸುತ್ತಿಲ್ಲವೆಂಬುದು ಹಾಸ್ಯಾಸ್ಪದವಲ್ಲವೆ? ತಾಳೆಗಳು ಕಾದುಕೊಂಡಿವೆ!

– ದೇವೇಂದ್ರಕುಮಾರ ಗುಪ್ತ

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

	ತಾ. ೨
ಮುಂಬಲಯಿ ಡಾಯಿಂಗ್	೯೩೫-೦-೦
ಕೋಹಿನೂರು	೨೬೦-೦-೦
ಫಿನ್ಲೆ	–
ಸ್ವದೇಶಿ	೨೭೯-೦-೦
ಗೋಕಾಕ	೨೫೩-೮-೦
ಸೆಂಚುರಿ	೨೪೭-೮-೦
ಸಿಂಪ್ಲೆಕ್ಸ	೧೬೮-೦-೦
ಟಾಟಾ ಸ್ಟೀಲ ಡೆಫರ್ಡ	೧೨೫೬-೪-೦
ಇಂಡಿಯನ್ ಆಯರ್ನ್	೨೦-೧೫-೦
ಅಸೋ. ಸಿಮೆಂಟ್ಸ	೧೩೨-೧೨-೦
ಸೆಂಟ್ರಲ ಬ್ಯಾಂಕ್	೮೦-೪-೦
ಇಂಪೀರಿಯಲ್‌ಬ್ಯಾಂಕ್(ಪೂರ್ಣ)	೧೭೮೦-೦-೦

ಚಿನ್ನ ಬೆಳ್ಳಿ

ಬೆಲೆಗಳು ತುಸು ಇಳಿದಿವೆ.

ತಯಾರಿ ಚಿನ್ನ	೧೧೯-೧-೦
ವಾಯದಾ ,,	೧೧೮-೫-೦
ತಯಾರಿ ಬೆಳ್ಳಿ	೧೮೭-೬-೦
ವಾಯದಾ ,,	೧೮೭-೬-೦

ಅರಳೆ

ಅನಧಿಕೃತ ದರಗಳು ಇಂತಿವೆ.

ಮೇ	–
ಜುಲೈ	೬೨೪-೦-೦
ಸೆಪ್ಟೆಂಬರ	೬೨೩-೦-೦

ಎಣ್ಣೆಕಾಳು

ಶೇಂಗಾ	೧೮೭-೮-೦
ಅಗಸೆ (ತಯಾರಿ)	೨೯-೦-೦
,, ವಾಯದಾ	೨೮-೧೩-೦
,, ಎಣ್ಣೆ	೧೬-೧೨-೦

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮೀಟಿ ಹುಬ್ಬಳ್ಳಿ)

ತಾ. ೨

ಕುಸುಬಿ (ಬ. ಮಣಕ್ಕೆ)	೧೪-೧೦-೦	೧೫-೦-೦
ಅಗಸಿ (ಚೀಲಕ್ಕೆ)	—	೪೨-೧೦-೮
ಉದಲ ,,	೩೬-೦-೦	೩೭-೦-೦
ಜ. ಹೆಸರು ,,	೪೬-೮-	೪೮-೧೨-೦
ಕರಿ ಎಳ್ಳು ,,		೬೪-೬೫
ಬಿಳಿ ಎಳ್ಳು ,,		೭೨-೭೩
ಕಡಲೆ ,,	೫೫-೦-೦	೫೬-೧೪-೨
ಜ. ತೊಗರಿ ,,		೨೮-೩೨
ಹುರಳಿ ,,		೩೫-೩೬-೦-೦
ಕೆಂ. ಅಲಸಂದಿ ,,		೫೨-೫೫
ಬಿ. ಅಲಸಂದಿ ,,		೫೬
ಶೇಂಗಾ (ಹೇರು)		೫೦-೫೪
ಶೇಂಗಾ ಕಾಳು		೭೬—೭೮

ಸಾಂಗಲಿ ಪೇಟೆ

ಅರಿಸಿಣ	೯೫-೧೦೮
ಮೆಣಸಿನಕಾಯಿ	೧೪೦-೨೦೦
ಶೇಂಗಾ	೧೪೩
ಬೆಲ್ಲ	೫೦-೭೦

ಕರ್ನಾಟಕದಲ್ಲಿ

ಧಾರವಾಡ

ಧಾರವಾಡ ಜಿಲ್ಲೆಯ ಆಹಾರ ಪರಿಸ್ಥಿತಿ ಸಮಾಧಾನಕರವಿದೆ. ಜೂನದಲ್ಲಿ ಅಕ್ಕಿಯ ಪ್ರಮಾಣವನ್ನು ನೂರಕ್ಕೆ ೨೦ ರಿಂದ ೨೫ಕ್ಕೆ ಏರಿಸಲಾಗಿದೆಯೆಂದೂ ಬರಗಾಲದ ಪ್ರದೇಶಗಳಲ್ಲಿ ಸಾವಿ, ರಾಗಿ, ನವಣೆ ಕೊಡಲಾಗುವದೆಂದೂ ಜಿಲ್ಲಾ ಮ್ಯಾಜಿಸ್ಟ್ರೇಟರು ೩೧ಕ್ಕೆ ಕೂಡಿದ್ದ ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು.

ಧಾರವಾಡಜಿಲ್ಲಾ ಮ್ಯಾಜಿಸ್ಟ್ರೇಟರಾದ ಜಾ. ಬ. ಬೆಂಜಾಮಿನ್ ಇವರಿಗೆ ಪಾಲನಪುರ ಜಿಲ್ಲೆಗೆ ವರ್ಗಾಗಿದ್ದುದು ರದ್ದಾಗಿದೆ. ಕೊಲ್ಹಾಪುರದ ಆ. ಆಡಳಿತೆಗಾರರಾಗಿದ್ದ ರಾ. ಸಾ. ಪಾಟೀಲರು ಪಾಲನಪುರ ಜಿಲ್ಲೆಗೆ ಕಲೆಕ್ಟರರೆಂದು ಹೋಗುವರೆಂದು ತಿಳಿಯುತ್ತದೆ.

ಧಾರವಾಡ ಜಿಲ್ಲೆಯಲ್ಲಿ ಜನಗಣತಿಯು ಸೀದಾ ೧ನೇ ತಾರೀಕಿನಿಂದ ಪ್ರಾರಂಭವಾಗಿದೆ. ಒಂದು ಮನೆಗೆ ಎಷ್ಟು ಯೂನಿಟ್ಟು ಕೊಡಬೇಕೆಂದು ಮುಂತಾದ್ದನ್ನು ಸಂಗ್ರಹನೋಡಿಕೊಂಡು ಗೊತ್ತುಪಡಿಸಲಾಗುವದು.

ಗದಗು-ಬೆಟಗೇರಿ ನಗರ ಸಭೆಯ ತ್ರೈವಾರ್ಷಿಕದ ಇನ್ನುಳಿದ ಅವಧಿಗಾಗಿ ಶ್ರೀ ಸಿ. ಎಫ್. ಅಂಗಡಿಯವರು ಅವಿರೋಧರಾಗಿ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಡಾ. ಕೆ. ಬಿ. ಮಿಸಾಳರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀ ಅಂಗಡಿಯವರು ನಗರ ಸಭೆಯ ಅಧ್ಯಕ್ಷರಾದುದು ಇದು ೫ ನೆಯ ಸಲ.

ಕಳೆದ ೨೨ ನೇ ತಾರೀಕು ರಾತ್ರಿ ರಾಣೆಬೆನ್ನೂರ ಸರಕಾರಿ ವಖಾರದ ಬಾಗಿಲು ಮುರಿದು ೧೫ ನೂಲಿನ ಗಂಟುಗಳನ್ನು ಕಳವು ಮಾಡಿಕೊಂಡು ಹೋಗಿದ್ದರ ಸಂಬಂಧದಲ್ಲಿ ಸಬ್‌ಇನ್‌ಸ್ಪೆಕ್ಟರ ಕುಲಕರ್ಣಿಯವರು ತಪಾಸ ನಡೆಸಿ ಎಲ್ಲ ಸರಕನ್ನು ಪತ್ತೆ ಹಚ್ಚಿ ೬-೭ ಜನರನ್ನು ಬಂಧಿಸಿದ್ದಾರೆ.

ಗದುಗಿನಲ್ಲಿ ಜವಳದಲ್ಲಿರುವ ಆಮಾಟಿಯವರ ಬಾವಿಯಲ್ಲಿ ಸುಮಾರು ೨೦೦೦ ರೂಪಾಯಿ ಬೆಲೆಬಾಳುವ ಅರಿವೆಗಂಟುಗಳು ಕಳೆದ ೨೬ ನೇ ತಾರೀಕು ಮುಂಜಾನೆ ದೊರೆತಿದ್ದು ಅವುಗಳ ಮೇಲೆ ೧೯೪೮ ನೇ ಇಸ್ವಿಯ ಸಿಕ್ಕಾ ಇದೆ. ಗಂಟುಗಳಲ್ಲಿ ಕೋಲಾರ ಹೆಸರಿನ ಚೀಟಿಗಳು ದೊರೆತಿವೆ; ತಪಾಸಣೆ ನಡೆದಿದೆ.

ಮಲೀಕಸಾಹೇಬ ದಾವಲಸಾಹೇಬ ಹಲ್ಯಾಳ ಉಣಕಲ್ಲ ಇವನು ಆಯಾತ ಅಪ್ಪಣೆ ಚೀಟಿ ಇಲ್ಲದೆ ಅಕ್ಕಿಯನ್ನು ಹುಬ್ಬಳ್ಳಿ ಸೀದಾ ಕ್ಷೇತ್ರದಲ್ಲಿ ತೆಗೆದುಕೊಂಡು ಬಂದದ್ದಕ್ಕಾಗಿ ೨ ತಿಂಗಳ ಸಶ್ರಮ ಶಿಕ್ಷೆಗೆ ಗುರಿಯಾದರು.

ಧಾರವಾಡದಲ್ಲಿಯ ಕರ್ನಾಟಕ ಇಂಡಸ್ಟ್ರಿಯಲ್ ಪ್ಲಾಯವುಡ್ ಕಾರಖಾನೆಯ ಕೂಲಿಕಾರ ಸಂಘಕ್ಕೆ ಸರಕಾರದ ಮಾನ್ಯತೆ ದೊರೆತಿದೆ. ಈ ಕೂಲಿಕಾರ ಸಂಘದವರು ರಾಷ್ಟ್ರೀಯ ಟ್ರೇಡ ಯುನಿಯನ್ ಕಾಂಗ್ರೆಸ್ಸಿಗೆ ಸೇರಲಿರುವರೆಂದು ತಿಳಿಯುತ್ತದೆ.

ಹೋಲ ಲೆಕ್ಕವನ್ನು ತಿದ್ದುವದಕ್ಕೆ ೨೦೦ ರೂ ಲಂಚ ತೆಗೆದುಕೊಂಡರೆಂದು ನವಲಗುಂದ ತಾಲೂಕಿನ ಸರ್ಕಲ್ ಇನಸ್ಪೆಕ್ಟರ ಆರ್. ಎಸ್. ವೈದ್ಯ ಮತ್ತು ಜಾವಪುರ ಗ್ರಾಮದ ಕುಲಕರ್ಣಿ ಆರ್. ಕೆ. ಇನಾಮತಿ ಇವರ ಮೇಲೆ ಕಳೆದ ೨ ವರುಷಗಳಿಂದ ನಡೆದ ಖಟ್ಲೆಯ ವಿಚಾರಣೆ ಮುಗಿದು ಉಭಯತರು ಪೂರ್ಣ ನಿರ್ದೋಷಿಗಳೆಂದು ಬಿಡುಗಡೆ ಮಾಡಲ್ಪಟ್ಟರು. ಫಿರ್ಯಾದಿ ಮತ್ತು ಸಾಕ್ಷಿದಾರರು ಸುಳ್ಳಿನ ಕಂತೆಯನ್ನು ಕಟ್ಟಿದ್ದಾರೆಂದು ಮ್ಯಾಜಿಸ್ಟ್ರೇಟರು ತಮ್ಮ ತೀರ್ಪಿನಲ್ಲಿ ಹೇಳಿರುವರು.

ಬೆಳಗಾವಿ

ಬೆಳಗಾವಿ ಜಿಲ್ಲೆಯ ಪರಸಗಡ ತಾಲೂಕಿನಲ್ಲಿ ಕೊರತೆಯ ಪರಿಸ್ಥಿತಿ ಇದ್ದ ಮೂಲಕ ಈ ವರ್ಷ ಅಲ್ಲಿ ಕ್ಷಾಮಪರಿಹಾರ ಕಾಮಗಾರಿಯೆಂದು ಚಿಕ್ಕ ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕೆಂದು ಮುಂಬಯಿ ಸರಕಾರವು ನಿರ್ದೇಶಿಸಿದೆ.

ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿಯ ವಿದ್ಯಾರ್ಥಿ ವಿಶ್ವಾವಸು ಮಹಾರುದ್ರಪ್ಪಾ ಸಾ. ಖರೆಯವರು ಮುಂಬಯಿ ವಿಶ್ವವಿದ್ಯಾಲಯದ ಇಂಟರ ಸಾಯನ್ಸಪರೀಕ್ಷೆಯಲ್ಲಿ ಮೊದಲನೆ ವರ್ಗದಲ್ಲಿ ತೇರ್ಗಡೆ ಹೊಂದಿ ಗಣಿತ ವಿಷಯದಲ್ಲಿ ಇದ್ದ ಮಂಗಳದಾಸ ಜೇಸಿಂಗಭಾಯಿ ಪಾರಿತೋಷಕವನ್ನು ಪಡೆದಿರುವರು.

ನಿಪ್ಪಾಣಿಯಲ್ಲಿಯ ಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀ. ದೇವಚಂದ ಭಗನಲಾಲ ಶಹಾ ಇವರು ತಮ್ಮ ಮನೆಯಲ್ಲಿ ಆದ ಶ್ರೀ ಪೋಪಟಲಾಲರ ವಿವಾಹ ಸಮಾರಂಭದ ಕಾಲಕ್ಕೆ ಬೆಳಗಾವಿಯಲ್ಲಿಯ ರಾಣಿ ಪಾರ್ವತೀದೇವಿ ಕಾಲೇಜಿಗೆ ೫೦೦೦ ರೂಪಾಯಿಯ ಕಾಣಿಕೆ ಕೊಟ್ಟರು.

ವಿಜಾಪುರ

ಮುಂಬಯಿ ಸರಕಾರವು ಅವಶ್ಯಕ ವಿಚಾರಣೆ ನಡೆಸಿ ಗುಳೇದಗುಡ್ಡ ಮುನಸಿಪಾಲ್ಟಿಯ ರದ್ದತಿಯ ಅವಧಿಯನ್ನು ಜುಲೈ ೭ ೧೯೪೯ ರ ವರೆಗೆ ಬೆಳೆಸಬೇಕೆಂದು ನಿರ್ದೇಶಿಸಿದೆ.

ವಿಜಾಪುರದ ವಿಜಯ ಕಾಲೇಜಿನ ವಿಜ್ಞಾನ ಶಾಖೆಯ ಸಲುವಾಗಿ ಕನ್ನಾಳದ ಪಾಟೀಲ ಸಿದ್ಧಲಿಂಗವ್ವನವರು ತಮ್ಮ ಪತಿಯ ಸ್ಮರಣಾರ್ಥ ೫೧೧೧೧ ರೂಪಾಯಿಗಳ ದಾನ ಮಾಡಿರುವರು. ಈ ವಿಜ್ಞಾನ ಶಾಖೆಗೆ ಅವರ ಪತಿಯ ಹೆಸರನ್ನಿಡಬೇಕೆಂದು ಸಂಸ್ಥೆಯವರು ನಿರ್ಧರಿಸಿದ್ದಾರೆ.

ರಾಮದುರ್ಗ ದುರಂತದ ಕಾಲಕ್ಕೆ ಆಸ್ತಿಯನ್ನು ಕಳೆದುಕೊಂಡವರ ಸಂಬಂಧದಲ್ಲಿ ಗೃಹಮಂತ್ರಿ ಮುರಾರಜಿಯವರ ಕೂಡ ವಿಚಾರವಿನಿಮಯ ಮಾಡಿದಾಗ ಈ ಬಗ್ಗೆ ವಿವರಗಳನ್ನು ತಮಗೆ ವ್ಯಕ್ತಿಶಃ ಅರ್ಜಿ ಕಳಿಸಿದಲ್ಲಿ ವಿಚಾರಿಸುವದಾಗಿ ಆಶ್ವಾಸಿಸಿರುವರು. ಅದುದರಿಂದ ಈ ಬಗ್ಗೆ ಅರ್ಜಿ ಮಾಡಿಕೊಳ್ಳಬೇಕೆಂದು ಪ್ರಜಾಸಂಘದ ಕಾರ್ಯದರ್ಶಿ ಲಿಂಗನಗೌಡ ಪಾಟೀಲರು ಪ್ರಸಿದ್ಧಿಸುತ್ತಾರೆ.

ವಿಜಾಪುರ, ಬಾಗಲಕೋಟೆ, ಗುಳೇದಗುಡ್ಡ ಮತ್ತು ಇಲಕಲ್ಲ ಸೀದಾಕ್ಷೇತ್ರಗಳಲ್ಲಿಯ ಜನರು ತಮ್ಮಲ್ಲಿದ್ದ ಆಹಾರ ಪದಾರ್ಥಗಳ ಸಂಗ್ರಹವನ್ನು ತಿಳಿಸಬೇಕೆಂದು ಈ ಮೊದಲು ಪ್ರಸಿದ್ಧಿಸಲಾಗಿದ್ದಿತು. ಆದರೆ ಈವರಗೆ ಬಹಳ ಜನರು ಸಂಗ್ರಹವನ್ನು ತಿಳಿಸದೆ ಇದ್ದುದರಿಂದ ಅವಧಿಯನ್ನು ಇದೇ ೧೦ ರ ವರೆಗೆ ಬೆಳಸಿದ್ದು ಅದರ ನಂತರ ಯಾರಲ್ಲಿಯಾದರೂ ಸರಕಿನ ಸಂಗ್ರಹ ಸಿಕ್ಕದ್ದಾದರೆ ಖಟ್ಲೆಗೆ ಗುರಿಯಾಗಬೇಕಾಗುವದು.

ದಾವಣಗೇರಿ ತಾಲೂಕು ಮತ್ತು ಶಿವಮಗ್ಗಿಯ ಗಡಿ ಭಾಗಗಳಲ್ಲಿ ಬಹಳ ಮಳೆಯಾಗಿ ಕೆರೆಗಳೆಲ್ಲ ತುಂಬಿಹೋಗಿವೆ. ಹಳ್ಳಿಗಳಿಗೆಲ್ಲ ಮಹಾಪೂರ ಬಂದು ಅವುಗಳ ಸಮೀಪದಲ್ಲಿ ಇದ್ದ ಹುಲ್ಲಿನ ಬಣವೆ ಹಾಗು ಗುಡಿಸಲು ತೇಲಿಹೋಗಿರುವವು. ಒಂದೆರಡು ಪ್ರಾಣಹಾನಿಗಳೂ ಆಗಿವೆ. ಕಳೆದ ೫೦ ವರುಷಗಳಲ್ಲಿ ಇಷ್ಟು ಮಳೆಯಾಗಿರಲಿಲ್ಲ.

ಒಂದು ಸಾವಿರ ರೂಪಾಯಿ ಬೆಲೆಯ ೩೦ ಚೀಲ ಭತ್ತವನ್ನು ಮೂರು ಕುದುರೆ ಮತ್ತು ಮೂವತ್ತೆರಡು ಕತ್ತೆಗಳ ಮೇಲೆ ಹೇರಿಕೊಂಡು ಕಳ್ಳತನದಿಂದ ಸಾಗಿಸುತ್ತಿದ್ದ ೮ ಜನರನ್ನು ಹುಬ್ಬಳ್ಳಿಯ ಪೋಲಿಸ ಅಧಿಕಾರಿಗಳು ಬಂಧಿಸಿರುವರು.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ರಾಜಕೀಯ ಪರಿಷತ್ತು ದಿನಾಂಕ ೨೨, ೨೩ ರಂದು ಪಾಣೆ ಮಂಗಳೂರಲ್ಲಿ ಶ್ರೀ ತಿ. ರು. ನೇಸ್ವಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಜಿಲ್ಲಾ ರಚನಾತ್ಮಕ ಕಾರ್ಯಕರ್ತರ ಪರಿಷತ್ತು ಮುಂಬಯಿ ಸರಕಾರದ ಖಾದಿ ಸಲಹೆಗಾರರಾದ ಶ್ರೀ. ಕಾ. ಅ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲೂ, ರಾಜಕೀಯ ಸಂತ್ರಸ್ತರ ಪರಿಷತ್ತು ಡಾ॥ ಯು. ಪಿ. ಮಲ್ಯರವರ ಅಧ್ಯಕ್ಷತೆಯಲ್ಲೂ ಜಿಲ್ಲಾ ಕೃಷಿಕರ ಪರಿಷತ್ತು ಎಂ. ಉಮೇಶರಾಯರ ಅಧ್ಯಕ್ಷತೆಯಲ್ಲೂ ಜರುಗಿದವು.

ದಿನಾಂಕ ೨೨ ರಂದು ಬೆಳಿಗ್ಗೆ ಪ್ರಭಾತಫೇರಿಯಾಗಿ ಮಂಗಳೂರು ಮುನ್ಸಿಪಲ್ ಅಧ್ಯಕ್ಷ ಶ್ರೀ ಎಲ್. ಸಿ. ಪಾಯಸರಿಂದ ಧ್ವಜವಂದನೆಯೂ ಶ್ರೀ ಎಸ್. ಆರ್. ಕೈಲಾರ್‌ರವರಿಂದ "ಸರ್ವೋದಯ" ಪ್ರದರ್ಶನದ ಉದ್ಘಾಟನೆಯೂ ಆಯಿತು.

ಅದೇ ದಿನ ಸಂಜೆ, ಮಳೆಯು ಬರುತಿದ್ದರೂ ಅಧ್ಯಕ್ಷರ ಮೆರವಣಿಗೆಯಾಗಿ ಬಹಿರಂಗ ಅಧಿವೇಶನವು ಶ್ರೀನಿವಾಸ ನಗರದಲ್ಲಿ ಜರಗಿತು. ಶ್ರೀ. ಪಿ. ಮಾಧವ ಪಡಿಯಾರರು ಬಳಿಕ ಸ್ವಾಗತ ಭಾಷಣ ಮಾಡಿದರು. ತಮ್ಮ ಭಾಷಣದಲ್ಲಿ ಇಂದು ದೇಶವನ್ನು ಕಟ್ಟುವುದು ಕಾಂಗ್ರೆಸ್ಸಿಗರ ಕರ್ತವ್ಯವೆಂದೂ, ಸ್ವಾತಂತ್ರ್ಯ ಸಿಗುವ ಮೊದಲು ಹೋರಾಟಕ್ಕೆ ದೇಶವನ್ನು ತಯಾರಿಸುವಂತಹ ನಿರ್ಣಯಗಳು ಇಂತಹ ಪರಿಷತ್ತುಗಳಲ್ಲಿ ಆಗುತಿದ್ದವೆಂದೂ, ಆದರೆ ಇಂದು ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಕರೆಯೀಯಬೇಕೆಂದೂ ಹೇಳುತ್ತಾ ಕರ್ನಾಟಕ ಏಕೀಕರಣವು ಇಂದಿನ ರಾಜಕೀಯದಲ್ಲಿ ಪ್ರಮುಖವೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು.

ಮರುದಿನ ಬಹಿರಂಗ ಅಧಿವೇಶನವು ನೆರೆದಾಗ, ನೆಹರು ಪಟೇಲರನ್ನು ಅಭಿನಂದಿಸುವ, ಕರ್ನಾಟಕ ಏಕೀಕರಣವು ರಾಷ್ಟ್ರಘಟನೆಯೊಂದಿಗೇ ಆಗಬೇಕೆನ್ನುವ, ಜಿಲ್ಲೆಯ ಆಹಾರ ಸಂಗ್ರಹ ಮತ್ತು ವಿತರಣೆಯಲ್ಲಿ ಸುಧಾರಣೆಯಾಗಬೇಕೆನ್ನುವ, ಪಾನನಿರೋಧವನ್ನೂ, ಪಂಚಾಯತ ಮಸೂದೆಯನ್ನೂ, ದೇವಸ್ಥಾನಗಳ ಉಂಬಳಿ ಮಸೂದೆಯನ್ನೂ, ಹಿಂದೂಕೋಡ್ ಬಿಲ್ಲನ್ನೂ ಸ್ವಾಗತಿಸುವ, ಒಕ್ಕಲತನ ಮಸೂದೆಯನ್ನು ಜಾರಿಯಲ್ಲಿ ತರಬೇಕೆನ್ನುವ, ಜಿಲ್ಲೆಯಲ್ಲಿ ನೀರಾಕೇಂದ್ರ ತೆರೆಯಬೇಕೆನ್ನುವ ಹಲವಾರು ನಿರ್ಣಯಗಳಾದುವು.

ಬಳಿಕ ರಾಜಕೀಯ ಸಂತ್ರಸ್ತರ ಪರಿಷತ್ತು ಸೇರಿದ ಮೇಲೆ ಜಿಲ್ಲಾ ಕೃಷಿಕ ಸಂಘವೊಂದನ್ನು ರಚಿಸಲಾಯಿತು. ಕಾರ್ಯಕರ್ತರ ಪರಿಷತ್ತಿನಲ್ಲಿ ಅಧ್ಯಕ್ಷರು ವಿಧಾಯಕ ಕಾರ್ಯಕರ್ತರು ಕೇಳಿದ ಪ್ರಶ್ನೆಗಳನ್ನು ಉತ್ತರಿಸುತ್ತಾ 'ಸರ್ವೋದಯ ಸಮಾಜ'ವನ್ನು ವಿವರಿಸಿದರು. ಕೊನೆಯಲ್ಲಿ ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀ ಉಪೇಂದ್ರನಾಯ್ಕರು ಧನ್ಯವಾದ ಅರ್ಪಿಸಿದರು.


ಕಾರ್ಕಳದ ಸಮೀಪದ ಮುಂಢಾಡಿಯಲ್ಲಿನ ಕಸ್ತೂರ್‌ಬಾ ಕೇಂದ್ರದ ಹೊಸ ಕಟ್ಟೋಣದ ಉದ್ಘಾಟನೆಯು ದಿನಾಂಕ ೨೬ ರಂದು ಜರಗಿತು. ಈ ಸಂದರ್ಭದಲ್ಲಿ ಶ್ರೀ ಎಂ. ಡಿ. ಅಧಿಕಾರಿಗಳು ಕೇಂದ್ರದ ವರದಿಯನ್ನು ಸಭಿಕರ ಮುಂದಿಟ್ಟರು. ಅಂದು ಬೆಳಿಗ್ಗೆ ಧ್ವಜವಂದನೆಯೂ ಜರಗಿತು. ಶ್ರೀ ನಾಗರಾಜ ಅಧಿಕಾರಿಗಳು ಅಧ್ಯಕ್ಷರಾಗಿದ್ದರು.

ಪುತ್ತೂರಿನ ಸಮೀಪದ ಆಜ್ಜಾವರ ಎಂಬಲ್ಲಿ ಗೌಡ ಜಾತಿಯ ದೊಡ್ಡ ಮನೆತನದವರ ಮನೆಯೊಂದು ಇತ್ತೀಚೆಗೆ ಸುಟ್ಟು ಹೋಯ್ತು.

ಕನ್ನಡ ಸಂಸ್ಥಾನ

ಕರ್ನಾಟಕ ಸಾಮ್ಯವಾದಿಗಳ ಪರಿಷತ್ತು ಶಿವಮಗ್ಗಿಯಲ್ಲಿ ಕಳೆದ ವಾರ ಅಶೋಕ ಮೇಥಾ ಇವರ ಅಧ್ಯಕ್ಷತೆಯಲ್ಲಿ ಗುಪ್ತ ರೀತಿಯಿಂದ ಸೇರಿ ಸಂಘದ ಬಲವನ್ನು ಬೆಳೆಸಬೇಕೆಂಬ ಬಗ್ಗೆ ಚರ್ಚೆ ನಡೆಯಿತು. ಸಿ. ಎಸ್. ನಾಗಭೂಷಣರಾಯರು ಜನರಲ್ ಸೆಕ್ರೆಟರಿಗಳಾಗಿಯೂ ಎಸ್. ಸದಾಶಿವರಾವ ಮತ್ತು ಕರಗುಪ್ಪಿ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಕಾರ್ಯಕಾರೀ ಮಂಡಲದ ಆಯ್ಕೆಯೂ ನಡೆಯಿತು.


೧೯೪೯ನೇ ವರ್ಷದಲ್ಲಿ ಏನಾಗುವುದಿದೆ?



೧೯೪೯ ನೆ ವರ್ಷದ ನಿಮ್ಮ ಸುಖ ದುಃಖ ಮುಂಚೆಯೇ ತಿಳಿಯುವದಿದ್ದರೆ ಪೋಸ್ಟ ಕಾರ್ಡಿನ ಮೇಲೆ ನಿಮ್ಮ ವಿಳಾಸ ಬರೆದು, ಯಾವದೇ ಹಣ್ಣಿನ ಹೆಸರು ಬರೆದು ಕಳಿಸಿರಿ. ಅಷ್ಟರಿಂದಲೇ ಜ್ಯೋತಿಷ್ಯದ ಬಲದಿಂದ ನಿಮಗೆ ಬರುವ ೧೨ ತಿಂಗಳಲ್ಲಿಯ ಲಾಭಾಲಾಭ, ವ್ಯಾಪಾರದಲ್ಲಿ ಹಾನಿ, ದ್ರವ್ಯಲಾಭ, ನೌಕರಿ ಬಡತಿ ಹಿಂಬಡತಿ ವರ್ಗಾವರ್ಗಿ, ಹೆಂಡಿರು ಮಕ್ಕಳ ಸುಖ ಆರೋಗ್ಯ, ಅಜಾರಿ, ದೂರಿನ ಪ್ರವಾಸ, ಖಟ್ಲೆ, ಪರೀಕ್ಷೆಗಳಲ್ಲಿ ಯಶ, ಲಗ್ನ, ಹೊಲ ಮನೆಗಳ ಸುರಕ್ಷಿತೆ, ಹೊಸ ಸಂಬಂಧ ಅಥವಾ ಲಾಭ, ಸಟ್ಟಾ ಇಲ್ಲವೆ ಇತರ ಅನಿರೀಕ್ಷಿತ ದ್ರವ್ಯ ಲಾಭ ಮುಂತಾದ್ದನ್ನು ನಿಮ್ಮ ಪತ್ರದ ತಾರೀಖಿನಿಂದ ಒಂದು ವರ್ಷದ ಎಲ್ಲ ಘಟನೆ ಸವಿಸ್ತರ ಬರೆದು, ನಿಮಗೆ ೧೨ ತಿಂಗಳ ಪೂರ್ಣ ಭವಿಷ್ಯ ತಯಾರಿಸಿ ಕೇವಲ ಒಂದು ರೂಪಾಯಿ ನಾಲ್ಕಾಣೆಗೆ ವ್ಹಿ. ಪಿ. ಕಳಿಸಲಾಗುವದು. ಪೋಸ್ಟ ವೆಚ್ಚ ಬೇರೆ. ಜೊತೆಗೆ ನಿಮ್ಮ ಮುಂದ ಭಾಗ್ಯವನ್ನು ಉಜ್ವಲಗೊಳಿಸುವ ಉಪಾಯ ತಿಳಿಸುವೆವು. ಆದರಿಂದ ಮುಂಬರುವ ಸಂಕಟಗಳಿಂದ ಪಾರಾಗಲು ಹಗುರಾಗುವದು. ಇದೊಂದೇ ಅನುಭವದಿಂದ ನಮ್ಮ ಜ್ಯೋತಿಷ್ಯ ಜ್ಞಾನದ ಖಾತ್ರಿಯಾಗುವದು. ಸುಳ್ಳೆಂದು ಸಿದ್ಧಮಾಡಿದರೆ ಹಣ ವಾಪಸ ಕೊಡುವೆವು.

Shri Swami Sat Narain Jotish Ashram (K. V. H.)
JULLUNDUR CITY

ರೂಪಾಯಿ ೧೦,೦೦೦ ಮುಫತ್ತು



ಚಿನ್ನ ತೊಲ ಒಂದಕ್ಕೆ ರೂ. ೨—೮—೦

"ಅಮೇರಿಕನ್ ಹೊಸ ಚಿನ್ನ"ದ ಅದ್ಭುತ ಪ್ರಖ್ಯಾತಿ

ಒಂದು ಸಲ ಪರೀಕ್ಷಿಸಿರಿ! ಸಂತುಷ್ಟರಾಗುವಿರಿ!!

ಪಥನ್‌ಕೋಟೆಯ ಶ್ರೀ ಹಜಾರಿಲಾಲ್ ಜಾವಲರ ಅಭಿಪ್ರಾಯ

"ನೀವು ಕಳುಹಿಸಿದ 'ಅಮೇರಿಕನ್ ನ್ಯೂ ಗೋಲ್ಡ್'ನ ಪಾರ್ಸಲ್ ತಲುಪಿತು. ತುಂಬಾ ಉಪಕಾರ, ಚಿನ್ನಕ್ಕೆ ಸರಿಸಮಾನವಾಗಿದೆ ಎಂದು ತಿಳಿಸಲು ತುಂಬಾ ಹರ್ಷವಾಗುತ್ತೆ. ಈ ಕಾಗದ ತಲುಪಿದ ಕ್ಷಣ ೬ ತೊಲ ಚಿನ್ನವನ್ನು ಕಳುಹಿಸಿಕೊಡಿ. ಇನ್ನಷ್ಟು ಆರ್ಡರುಗಳನ್ನು ಕಳುಹಿಸಲಿರುವೆವು."

ವಜ್ರ ಕಲ್ಲು ಕಟ್ಟಿದಕ್ಕೆ ಈ ಚಿನ್ನವು ಅಪ್ಪಟ ಚಿನ್ನದಷ್ಟೇ ಹೊಳಪು ಕೊಡುವುದು. ಈ ಚಿನ್ನವನ್ನು ತಂತಿಯಾಗಿ ಎಳೆಯಬಹುದಲ್ಲದೆ ತಟ್ಟೆಯಾಗಿಯೂ ಹೊಡೆಯಬಹುದು. ಎಲ್ಲ ಬಗೆಯ ಆಭರಣಗಳನ್ನೂ ತಯಾರಿಸಬಹುದು. ಅನುಭವಿಯಾದ ಒಡವೆ ವ್ಯಾಪಾರಿಗೂ ಪರೀಕ್ಷಿಸಿ ಹೇಳಲಸಾಧ್ಯ. ಮೇಲೆ ನಮೂದಿಸಿದ ಸರ್ಟಿಫಿಕೇಟ್ ತಪ್ಪೆಂದು ರುಜುವಾತ ಮಾಡುವವರಿಗೆ ರೂ. ೧೦,೦೦೦ ಬಹುಮಾನ. ಈ ಚಿನ್ನದ ಪ್ರಚಾರಕ್ಕಾಗಿ ಪ್ರತಿ ಚಿನ್ನವು ತೊಲ ೧ ಕ್ಕೆ ರೂ. ೨-೮-೦, ೩ ತೊಲಕ್ಕೆ ರೂ. ೭, ೬ ತೊಲಕ್ಕೆ ರೂ. ೧೩ ಮತ್ತು ೧೦ ತೊಲಕ್ಕೆ ರೂ. ೨೦ ರಂತೆಯೂ ಕೊಡಲಾಗುತ್ತೆ. ಅಂಚೆಯ ವೆಚ್ಚ ಪ್ರತ್ಯೇಕ ಒಪ್ಪಿಗೆಯಾಗದಿದ್ದಲ್ಲಿ ಹಣ ವಾಪಸ್.

ಮುಫತ್ತು:- ೩ ತೊಲ ಚಿನ್ನ ಕೊಳ್ಳುವವರಿಗೆ, ನವೀನ ಮಾದರಿಯ ೨ ಜೊತೆ ಬಳೆ. ೬ ತೊಲ ಕೊಳ್ಳುವವರಿಗೆ ೨ ಜೊತೆ ನೂತನ ಬಗೆ ಬಳೆಗಳು ಮತ್ತು ಒಂದು ಜೊತೆ ಕಿವಿಯಾಭರಣ ೧೦ ತೊಲಕೊಳ್ಳುವವರಿಗೆ ಆಧುನಿಕ "ನೆಕ್‌ಲೇಸ್" ಮುಫತ್ತು ಕೊಡಲಾಗುತ್ತೆ.

THE IMPERIAL COMMERICIAL COMPANY. REGD:
(K. V. H.) JULLUNDUR CITY.



ಮದುವೆ ಮುಂಜಿವೆ ಕಾರ್ಯಗಳಲ್ಲಿ ಪ್ರಿಯ ಜನರಿಗೆ ಕಾಣಿಕೆ ಕೊಡುವುದರ ಸಲುವಾಗಿ ಅತ್ಯಂತ ಶೋಭೆಯ ಹಾಗೂ ಉತ್ತಮವಾದ ....

ಸ್ಟೇನಲೆಸ್ ಸ್ಟೀಲದ ಭಾಂಡೆಗಳು

ಸಿಗುವ ಸ್ಥಳ:- ಸಂಸಾರ ವಸ್ತು ಭಾಂಡಾರ, ಬೆಳಗಾವಿ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.